ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜುಲೈ 6 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 81 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪರಿಶಿಷ್ಟ ಸಮುದಾಯದ ಹಣ ದುರುಪಯೋಗವಾದರೆ ಕ್ರಮ

● ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ● ಪರಿಶಿಷ್ಟರ ಅಭಿವೃದ್ಧಿ ಕಾರ್ಯ ಕೈಗೊಳ್ಳದೇ ಇದ್ದರೂ ಕ್ರಮ



ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ ರಾಜ್ಯ ಪರಿಷತ್ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಪ್ರಿಯಾಂಕ ಖರ್ಗೆ ಇನ್ನಿತರರಿದ್ದಾರೆ.

ಬೆಂಗಳೂರು, ಜು. 5(ಕೆಎಂಶಿ)–ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಸಮುದಾಯಕ್ಕೆ ಮೀಸಲಿಟ್ಟ ಹಣ ದುರುಪಯೋಗಪಡಿಸಿಕೊಂಡರೆ, ಇಲ್ಲವೇ, ಪರಿಶಿಷ್ಟರ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿ ಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಎಚ್ಚರಿಸಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ ರಾಜ್ಯ ಪರಿಷತ್ ಸಭೆಯಲ್ಲಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಮುಖ್ಯಮಂತ್ರಿ ಅವರು, ನಮ್ಮ ಹಿಂದಿನ ಸರ್ಕಾರ ಈ ಕಾಯ್ದೆಯನ್ನು 2013ರಲ್ಲೇ ಜಾರಿಗೆ ತಂದಿದ್ದು, ಒಟ್ಟಾರೆ ಶೇಕಡ 24.1 ರಷ್ಟು ಈ ಸಮುದಾಯಗಳ ಅಭಿವೃದ್ಧಿಗೆ ವೆಚ್ಚ ಮಾಡಲಾಗುತ್ತಿದೆ ಎಂದರು. ಈ ಹಣವನ್ನು ಯಾವುದೇ ಕಾರಣಕ್ಕೂ ದುರ್ಬಳಕೆ ಮಾಡಬಾರದು, ನಿಗದಿಪಡಿಸಿದ ಮೊತ್ತವನ್ನು ಆಯಾ ಸಮುದಾಯದ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಬಳಸಬೇಕು ಮತ್ತು ಆ ಹಣವನ್ನು ಅದೇ ವರ್ಷ ವೆಚ್ಚ ಮಾಡಬೇಕು ಎಂದು ಕಟ್ಟಾದೇಶ ಮಾಡಿದರು. ಶಾಸಕರು ಪಟ್ಟಿ ನೀಡಿಲ್ಲ ಎಂದು ಕೈಚೆಲ್ಲಿ ಕುಳಿತುಕೊಳ್ಳಬೇಡಿ, ನಿಗಮಗಳ ಅಧ್ಯಕ್ಷರು ಹಾಗೂ ಸಂಬಂಧಿಸಿದ ಸಚಿವರು ಮತ್ತು ಶಾಸಕರು ಫಲಾನುಭವಿಗಳ ಪಟ್ಟಿ ಒದಗಿಸುವಂತೆ ಮನವೊಲಿಸುವ ಕಾರ್ಯ ನಿಮ್ಮದು. ನಾವು ಮಾಡಿರುವ ಮೌಲ್ಯಮಾಪನದ ಪ್ರಕಾರ ಶೇಕಡ 65ರಷ್ಟು ಮಾತ್ರ ಉಪಯೋಗವಾಗಿದೆ, ಪೂರ್ಣ ಹಣ ವೆಚ್ಚ ಮಾಡಲು ಸೆಕ್ಷನ್ 7 (ಡಿ) ಕೈಬಿಡಲಾಗಿದೆ, ಇದರಿಂದಾಗಿ ಯೋಜನೆಯ ಸಂಪೂರ್ಣ ವೆಚ್ಚ ಈ ಸಮುದಾಯದವರಿಗೇ ಬಳಕೆಯಾಗಬೇಕು ಎಂದರು. ಇಡೀ ದೇಶದಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆ ಮಾಡಿರುವುದು ಕರ್ನಾಟಕ ಮಾತ್ರ, ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿ–ಎಸ್‌ಟಿ ಸಮುದಾಯಕ್ಕೆ ಹಣ ಕೊಡುತ್ತಿರುವುದು ನಮ್ಮ ಸರ್ಕಾರ ಮಾತ್ರ. 2024–25ನೇ ಸಾಲಿನಲ್ಲಿ 39121.46 ಕೋಟಿ ರೂ. ಇದ್ದರೆ, ಹಿಂದಿನ ವರ್ಷ 35221.84 ಕೋಟಿ ರೂ. ಇತ್ತು. ಇದರಲ್ಲಿ ಬಿಡುಗಡೆ ವೆಚ್ಚದ ಶೇ.99.64 ಕೋಟಿ ರೂನಷ್ಟು ಖರ್ಚಾಗಿದೆ, ಉಳಿದದ್ದು ಏಕೆ ವೆಚ್ಚವಾಗಿಲ್ಲ ● 9ನೇ ಪುಟಕ್ಕೆ

ಮೈಸೂರು ನೂತನ ಡಿಸಿ ಜಿ.ಲಕ್ಷ್ಮೀಕಾಂತ ರೆಡ್ಡಿ

ಪ್ರವಾಸೋದ್ಯಮ ಇಲಾಖೆ ನಿರ್ದೇಶಕರಾದ ನಿರ್ಗಮಿತ ಡಿಸಿ ಡಾ.ಕೆ.ವಿ.ರಾಜೇಂದ್ರರಿಂದ ಅಧಿಕಾರ ಸ್ವೀಕಾರ



ನಿರ್ಗಮಿತ ಡಿಸಿ ಡಾ.ಕೆ.ವಿ.ರಾಜೇಂದ್ರ (ಎಡಬದಿ) ಅವರು ನೂತನ ಡಿಸಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರಿಗೆ ಪುಷ್ಪಗುಚ್ಛ ನೀಡಿ ಶುಭ ಕೋರಿದರು.

ಮೈಸೂರು, ಜು. 5(ಆರ್‌ಕೆ)– ಮೈಸೂರು ನೂತನ ಜಿಲ್ಲಾಧಿಕಾರಿಯಾಗಿ ಬೆಂಗಳೂರಿನ ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ (ಕೆಯುಐಡಿಎಫ್‌ಸಿ)ದ ವ್ಯವಸ್ಥಾಪಕ ನಿರ್ದೇಶಕ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರನ್ನು ನಿಯೋಜಿಸಲಾಗಿದ್ದು, ಅವರು ಇಂದು ಬೆಳಗ್ಗೆ ಹೊಸ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಇಲಾಖೆ ನಿರ್ದೇಶಕರಾಗಿ ವರ್ಗಾವಣೆಗೊಂಡಿರುವ ನಿರ್ಗಮಿತ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರಿಂದ ಅಧಿಕಾರ ವಹಿಸಿಕೊಂಡರು. ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾಗಿ 2021 ರಿಂದ 2023ರವರೆಗೆ ಲಕ್ಷ್ಮೀಕಾಂತ ರೆಡ್ಡಿ ಸೇವೆ ಸಲ್ಲಿಸಿದ್ದರು.

ಅಧಿಕಾರ ವಹಿಸಿಕೊಂಡ ಬಳಿಕ ಪ್ರತಿಕ್ರಿಯೆ ನೀಡಿದ ಅವರು, ಈ ಹಿಂದೆ ಪಾಲಿಕೆಯಲ್ಲಿ ಆಯುಕ್ತರಾಗಿ ಕೆಲಸ ಮಾಡಿದ ಅನುಭವವಿರುವುದರಿಂದ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುವುದಾಗಿ ತಿಳಿಸಿದರು. ಅಧೀನಾಧಿಕಾರಿಗಳು, ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ, ಮುಖ್ಯಮಂತ್ರಿಗಳ ಆಶಯದಂತೆ ಉತ್ತಮ ಆಡಳಿತ ನೀಡಿ, ಸಮಾಜದ ಎಲ್ಲಾ ವರ್ಗದ ಜನರ ಹಿತಾಸಕ್ತಿ ಕಾಪಾಡಲು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವುದಾಗಿ ಅವರು ತಿಳಿಸಿದರು.

ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಪ್ರಸ್ತುತ ಜಿಲ್ಲೆಯ ಸ್ಥಿತಿಗತಿ, ಪ್ರಗತಿ ಬಗ್ಗೆ ತಿಳಿದುಕೊಂಡು ಆದ್ಯತೆ ಮೇಲೆ ಕ್ರಮ ವಹಿಸುವುದಾಗಿ ಲಕ್ಷ್ಮೀಕಾಂತ ರೆಡ್ಡಿ ಇದೇ ಸಂದರ್ಭ ನುಡಿದರು. ನಿರ್ಗಮಿತ ಡಿಸಿ ಡಾ.ಕೆ.ವಿ. ರಾಜೇಂದ್ರರೊಂದಿಗೆ ಸ್ವಲ್ಪ ಸಮಯ ಸಮಾಲೋಚನೆ ನಡೆಸಿ ಬಳಿಕ ನೂತನ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ನಂಜನಗೂಡಿನಲ್ಲಿ ಇಂದು ಆಯೋಜಿಸಿದ್ದ ಜನಸ್ಪಂದನ ಕಾರ್ಯಕ್ರಮಕ್ಕೆ ಹಾಜರಾದರು.

ಮುಡಾ ಹಗರಣ ಸಿಬಿಐ ತನಿಖೆಗೆ ವಹಿಸದಿದ್ದರೆ ಕೋರ್ಟ್‌ನಲ್ಲಿ ಪಿಐಎಲ್ ದಾಖಲು

● ದಲಿತ ಸಮುದಾಯದ ವ್ಯಕ್ತಿಯಿಂದ ಭೂಮಿ ಖರೀದಿ
● ಮೂರೂವರೆ ಕೋಟಿ ಜಾಗಕ್ಕೆ 62 ಕೋಟಿಗೆ ಬೇಡಿಕೆ
● ಸಮಾಜವಾದಿ ಸಿದ್ಧಾಂತ ಬಿಟ್ಟ ಸಿದ್ದರಾಮಯ್ಯಗೆ ಮಣ್ಣಿನಾಸೆ
● ಜನರು ದಡ್ಡರೆಂದು ಸಿದ್ದರಾಮಯ್ಯ ಭ್ರಮೆಯಲ್ಲಿದ್ದಾರೆ

ರಾಜ್ಯ ಸರ್ಕಾರಕ್ಕೆ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಎಚ್ಚರಿಕೆ



ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಶುಕ್ರವಾರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮುಂದೆ ಪತ್ರಿಕಾಗೋಷ್ಠಿ ನಡೆಸಿ, ಮುಡಾ ಭ್ರಷ್ಟಾಚಾರದ ಬಗ್ಗೆ ಮಾತನಾಡಿದರು.

ಮೈಸೂರು, ಜು.5(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಶ್ರೀಮತಿ ಪಾರ್ವತಿ ಅವರು ಅಕ್ರಮವಾಗಿ ನಿವೇಶನ ಪಡೆದಿರುವುದು ಸೇರಿದಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾವಿರಾರು ಕೋಟಿ ರೂಪಾಯಿಗಳ ಬ್ರಹ್ಮಾಂಡ ಭ್ರಷ್ಟಾಚಾರ ಹಗರಣವನ್ನು ಕೂಡಲೇ ಸಿಬಿಐ ತನಿಖೆಗೆ ವಹಿಸದಿದ್ದರೆ ನ್ಯಾಯಾಲಯದಲ್ಲಿ ನಾನೇ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸುತ್ತೇನೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮುಂದೆ ಟೆಂಟ್ ಹಾಕಿ ಇಂದು ಪತ್ರಿಕಾಗೋಷ್ಠಿ ನಡೆಸಿದ ಅವರು, ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಲು ಬೇಕಾಗುವ ಖರ್ಚು ವೆಚ್ಚಕ್ಕಾಗಿ ಜನರಿಂದಲೇ ಹಣ ಸಂಗ್ರಹಿಸುತ್ತೇನೆ. ಈ ಮೂಲಕ ಹಗರಣದ ವಿರುದ್ಧದ ಹೋರಾಟದಲ್ಲಿ ಜನರನ್ನು ಭಾಗಿ ಮಾಡಿಕೊಳ್ಳುತ್ತೇನೆ ಎಂದರು.

ಹಣಕಾಸು ಖಾತೆ ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಪತ್ನಿ ನಿವೇಶನಕ್ಕಾಗಿ ಸರ್ಕಾರದಿಂದ 62 ಕೋಟಿ ರೂ. ಪರಿಹಾರ ಕೇಳುತ್ತಿದ್ದಾರೆ. ಕೆಸರೆಯ 3.16 ಎಕರೆಗೆ ಯಾವ ರೀತಿ ಲೆಕ್ಕಾಚಾರ ಇಟ್ಟುಕೊಂಡು ಕೋಟಿ ಕೋಟಿ ರೂ. ಪರಿಹಾರ ಕೇಳುತ್ತಿದ್ದಾರೋ ಗೊತ್ತಾಗುತ್ತಿಲ್ಲ ಎಂದರು.

ಸಿದ್ದರಾಮಯ್ಯರಿಗೆ ಮಣ್ಣಿನಾಸೆ: ಸಿದ್ದರಾಮನಹುಂಡಿ ಅಂತಹ ಸಣ್ಣ ಹಳ್ಳಿಯಿಂದ ಬಂದು ರಾಜಕೀಯವಾಗಿ ಇಷ್ಟು ಎತ್ತರಕ್ಕೆ ಬೆಳೆದಿರುವ ಸಿದ್ದರಾಮಯ್ಯ ಸಮಾಜವಾದಿ ಆಗಿದ್ದರು. ತಾವು ಅನುಸರಿಸುತ್ತಿದ್ದ ತತ್ವ ಸಿದ್ಧಾಂತ ಬಿಟ್ಟು ಈಗ ಮಣ್ಣಿಗೆ ಏಕೆ ಆಸೆ ಪಡುತ್ತಿದ್ದಾರೋ ತಿಳಿಯದು. ಅಧಿಕಾರ ಸಿಕ್ಕಿದ ಕೂಡಲೇ ವ್ಯಕ್ತಿಯ ಈ ರೀತಿ ಬದಲಾವಣೆ ಅನಿರೀಕ್ಷಿತ ಎಂದು ವಿಶ್ವನಾಥ್ ಆಶ್ಚರ್ಯ ವ್ಯಕ್ತಪಡಿಸಿದರು.

ಈ ಹಿಂದೆ 5 ವರ್ಷ ಮುಖ್ಯಮಂತ್ರಿ ಆಗಿದ್ದ ಸಿದ್ದರಾಮಯ್ಯ ತಮ್ಮ ತವರು ಜಿಲ್ಲೆಯ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಒಂದಾದರೂ ನಿವೇಶನ ನೀಡಿದ್ದರೆ? ಮಾತೆತ್ತಿದರೆ ಅಕ್ಕಿ ಕೊಟ್ಟೆ ಅಂತಾರೆ. ಆದರೆ ● 9ನೇ ಪುಟಕ್ಕೆ

ವಿಶ್ವನಾಥ್ ರೋಲ್‌ಕಾಲ್ ಗಿರಾಕಿ... ವಯಸ್ಸಾಗಿದೆ ಮರ್ಯಾದೇ ಕೊಡ್ತಿದ್ದೀನಿ...



ಭೈರತಿ ಸುರೇಶ್

ಚಾಮರಾಜನಗರ, ಜು.5– ಏ ಯಾರ್ರಿ... ಅವ್ನು ವಿಶ್ವನಾಥ್. ರಿಯಲ್ ಎಸ್ಟೇಟ್ ಒಂದು ಉದ್ಯಮ ಅಲ್ವಾ? ಅವ್ನು, ಅವನ ಮಗ ನನ್ನ ಮನೆಗೆ ಸೈಟ್ ಕೇಳೋಕೆ ಬಂದಿದ್ದು ಫೋಟೊ ಇದೆ. ಅವ್ನು ಏಕ ವಚನ ಬಳಸಿದ್ರೆ, ನನಗೂ ಕೂಡ ಅದಕ್ಕಿಂತ ಹೆಚ್ಚಿಗೆ ಮಾತನಾಡೋಕೆ ಬರುತ್ತದೆ... ಇದು ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ವಿರುದ್ಧ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ನಡೆಸಿದ ವಾಗ್ದಾಳಿ.

ಚಾಮರಾಜ ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ನಾನು ಹಳ್ಳಿಯಲ್ಲೇ ಹುಟ್ಟಿ ಬೆಳೆದಿರೋದು. ಅವರ ಅಪ್ಪನಂಗೆ ಮಾತನಾಡುತ್ತೇನೆ. ಮೊದ್ಲು ಮರ್ಯಾದೆ ಕೊಟ್ಟು ಮರ್ಯಾದೆ ತೆಗೆದುಕೊಳ್ಳಲಿ. ವಿಶ್ವನಾಥ್ ಥರ ನಾನು ರೋಲ್ ಕಾಲ್ ಗಿರಾಕಿ ಅಲ್ಲ. ವಯಸ್ಸಾಗಿದೆ ಅಂತಾ ಅಷ್ಟೇ ಬೆಲೆ ಕೊಡ್ತೀವಿ. ಅದನ್ನ ಉಳಿಸಿಕೊಳ್ಳಲಿ ಎಂದು ವಾಗ್ದಾಳಿ ನಡೆಸಿದರು.

ನನ್ನ ರಿಯಲ್ ಎಸ್ಟೇಟ್ ಗಿರಾಕಿ ಅಂತಾನಾ? ರಿಯಲ್ ಎಸ್ಟೇಟ್ ಉದ್ಯಮ ಅಲ್ವಾ? ವಿಶ್ವನಾಥ್ ನಂತೆ ನಾನೇನೂ ರೋಲ್‌ಕಾಲ್ ಗಿರಾಕಿ ಅಲ್ಲ. ಮರ್ಯಾದೆ ಕೊಟ್ಟು ಮರ್ಯಾದೆ ತಗೋಬೇಕು ಅಷ್ಟೇ. ವಯಸ್ಸಾಗಿದೆ ಅಂತ ಮರ್ಯಾದೆ ಕೊಡ್ತಾ ಇದ್ದೀನಿ. ಅದನ್ನ ಉಳಿಸ್ಕೋಬೇಕು ಎಂದು ಭೈರತಿ ಸುರೇಶ್ ಗರಂ ಆಗೇ ಹೇಳಿದರು.

ಕೇಂದ್ರ ಸಚಿವ ಕುಮಾರಸ್ವಾಮಿ ಜನತಾ ದರ್ಶನ

ಅಧಿಕಾರಿಗಳಿಲ್ಲದೆ ಅಹವಾಲು ಸ್ವೀಕಾರ!

● ಹಾರ ಹಾಕಲು, ಸೆಲ್ಫಿ ಕ್ಲಿಕ್ಕಿಸಲು ನಾ ಮುಂದು– ತಾ ಮುಂದು ಎಂದು ನುಗ್ಗಿದ ಅಭಿಮಾನಿಗಳು ● ತಮ್ಮ ಸಮಸ್ಯೆ ಹೇಳಿಕೊಳ್ಳಲು ಬಂದ ಜನ ಮೂಕ ಪ್ರೇಕ್ಷಕರಾದರು
● ಅಧಿಕಾರಿಗಳು ಭಾಗಿಯಾಗದಂತೆ ರಾಜ್ಯ ಸರ್ಕಾರದ ಸುತ್ತೋಲೆ; ಹೆಚ್‌ಡಿಕೆ ಕಿಡಿ



ಮಂಡ್ಯ ಸಂಸದರೂ ಆದ ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಶುಕ್ರವಾರ ಮಂಡ್ಯದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ವೃದ್ಧೆಯ ಅಳಲು ಆಲಿಸುತ್ತಿರುವುದು.

ಮಂಡ್ಯ, ಜು.5–ಮಂಡ್ಯ ಸಂಸದರೂ ಆದ ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಶುಕ್ರವಾರ ಮಂಡ್ಯದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ಜನತಾ ದರ್ಶನ ಕಾರ್ಯಕ್ರಮವು ಕಾರ್ಯಕರ್ತರ ಅಬ್ಬರ, ನೂಕು–ನುಗ್ಗಲು, ಸೆಲ್ಫಿ ಗೀಳಿನಿಂದಾಗಿ ಅಹವಾಲು ಸಲ್ಲಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಬಂದ ಜನರು ಭಾರೀ ಕಿರಿಕಿರಿ ಅನುಭವಿಸಬೇಕಾಯಿತು.

ಜನರ ಸಮಸ್ಯೆಗೆ ಪರಿಹಾರ ಒದಗಿಸಬೇಕಾದ ಯಾವುದೇ ಅಧಿಕಾರಿಯೂ ಈ ಕಾರ್ಯಕ್ರಮದಲ್ಲಿ ಇಲ್ಲದ ಕಾರಣ ಕುಮಾರಸ್ವಾಮಿಯವರು ಕೇವಲ ಅಹವಾಲುಗಳನ್ನು ಆಲಿಸಲಷ್ಟೇ ಜನತಾ ದರ್ಶನ ಸೀಮಿತವಾಯಿತು. ಈ ಮಧ್ಯೆ ಕಾರ್ಯಕರ್ತರು ಪದೇ ಪದೆ ವೇದಿಕೆ ಹತ್ತಿ ಕುಮಾರಸ್ವಾಮಿ ಮತ್ತು ಅವರ ಪುತ್ರ ನಿಖಿಲ್ ಕುಮಾರಸ್ವಾಮಿಯವರಿಗೆ ಹಾರ–ತುರಾಯಿಗಳನ್ನು ಹಾಕಿ ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಮುಗಿ ಬಿದ್ದಿದ್ದು, ಸಮಸ್ಯೆ ಹೇಳಿಕೊಳ್ಳಲು ಆಗಮಿಸಿದ ಜನರಿಗೆ ಮಾತ್ರವಲ್ಲದೇ, ಕುಮಾರಸ್ವಾಮಿಯವರಿಗೂ ಕಿರಿಕಿರಿಯನ್ನುಂಟು ಮಾಡಿತು. ಕೆಲವೊಮ್ಮೆ ಸಹನೆ ಕಳೆದುಕೊಂಡ ಕುಮಾರಸ್ವಾಮಿಯವರು, ಇದು ಜನರ ಸಮಸ್ಯೆಗೆ ● 6ನೇ ಪುಟಕ್ಕೆ

ಸಿಎಂ ಖುರ್ಚಿ ಮೇಲೆ ಕಣ್ಣಿಟ್ಟವರಿಂದ ಮುಡಾ ಹಗರಣ ಬಯಲು

ಕೇಂದ್ರ ಸಚಿವ ಕುಮಾರಸ್ವಾಮಿ ಪರೋಕ್ಷವಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ

- ಸಿಡಿ ಫ್ಯಾಕ್ಟರಿ ಬಂದ್; ಮುಡಾ ಫ್ಯಾಕ್ಟರಿ ಆರಂಭ
- ಮುಡಾ ಹಗರಣ ಬಯಲಾಗಲು ಕಾಂಗ್ರೆಸ್ ನಾಯಕರೇ ಕುಮ್ಮಕ್ಕು
- ರೈತರನ್ನು ಬೀದಿಗೆ ನಿಲ್ಲಿಸಿ 62 ಕೋಟಿ ಪರಿಹಾರ ಕೇಳುತ್ತಿದ್ದಾರೆ
- ಹಾಗಿದ್ದರೆ ಇತರೆ ರೈತರಿಗೂ ಅಷ್ಟೆ ಪರಿಹಾರ ಕೊಡಿಸಿ

ಮೈಸೂರು, ಜು.5(ಬಿಎಲ್‌ಯು)– ಮುಖ್ಯಮಂತ್ರಿ ಖುರ್ಚಿ ಮೇಲೆ ಕಣ್ಣಿಟ್ಟವರಿಂದಲೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾವಿರಾರು ಕೋಟಿ ಹಗರಣ ಬಯಲಾಗಿದೆ ಎಂದು ಕೇಂದ್ರ ಉಕ್ಕು ಮತ್ತು ಭಾರೀ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರ ಸ್ವಾಮಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಮುಖ್ಯಮಂತ್ರಿ ತವರು ಜಿಲ್ಲೆಯಲ್ಲೇ ಸಾವಿರಾರು ಕೋಟಿ ರೂಪಾಯಿ ಅವ್ಯವಹಾರ ನಡೆದಿದೆ. ಇಷ್ಟು ದಿನ ಬಹಿರಂಗ ಗೊಳ್ಳದ ಈ ಹಗರಣ ಈಗ ಬಯಲಾಗಿದ್ದು ಹೇಗೆ ಎಂದು ಪ್ರಶ್ನಿಸಿದರು. ಮುಖ್ಯಮಂತ್ರಿ ಖುರ್ಚಿ ಮೇಲೆ ಟವಲ್ ಹಾಕಿದ್ದವರ ಪಾತ್ರ ಇದರಲ್ಲಿರುವುದು ಸ್ಪಷ್ಟ ವಾಗಿದೆ. ಸಿಡಿ ಫ್ಯಾಕ್ಟರಿ ಬಂದ್ ಆಯಿತು. ಈಗ ಮುಡಾ ಫ್ಯಾಕ್ಟರಿ ಆರಂಭವಾಗಿದೆ ಎಂದು ಡಿ.ಕೆ.ಶಿವ ಕುಮಾರ್ ವಿರುದ್ಧ ಕುಮಾರಸ್ವಾಮಿ ಆಪಾದಿಸಿದರು.

ಮುಡಾ ಹಗರಣದ ಬಗ್ಗೆ ಬಿಜೆಪಿಯವರು ಹೋರಾಟ ಮಾಡುತ್ತಿದ್ದಾರೆ. ಆದರೆ ಈ ಹಗರಣ ಬಯಲಾಗಲು ಕಾಂಗ್ರೆಸ್ ಪಕ್ಷದವರೇ ಒಳಗೊಳಗೆ ಕುಮ್ಮಕ್ಕು ನೀಡುತ್ತಿದ್ದಾರೆ. ಈ ಬಗ್ಗೆ ನನಗೆ ಸ್ಪಷ್ಟವಾದ ಮಾಹಿತಿ ಇದೆ. ಜೊತೆಗೆ ಸಿದ್ದರಾಮಯ್ಯ ಪತ್ನಿ ಪಾರ್ವತಿಯವರಿಗೆ ಈ ಜಾಗ ಹೇಗೆ ಬಂದಿದೆ ಎಂಬ ಮಾಹಿತಿಯೂ ಇದೆ ಎಂದು ಕುಮಾರ ಸ್ವಾಮಿ ಹೇಳಿದರು. ಈಗ 62 ಕೋಟಿ ರೂಪಾಯಿ ಪರಿಹಾರ ಕೇಳುವ ಸಿದ್ದರಾಮಯ್ಯ, ಮುಡಾ ಭೂ ಸ್ವಾಧೀನದಿಂದ ಭೂಮಿ ಕಳೆದುಕೊಂಡು ಬೀದಿಗೆ ಬಿದ್ದಿರುವ ಇತರೆ ರೈತರಿಗೂ ಇಷ್ಟೇ ಪರಿಹಾರ ಕೊಡಿಸಲಿ. ತಮ್ಮ ಭೂಮಿಗೆ ಬೆಲೆ ಕಟ್ಟುವ ಸಿದ್ದ ರಾಮಯ್ಯ ಹಾಗೆಯೇ ಉಳಿದ ರೈತರ ಭೂಮಿಗೂ ಬೆಲೆ ಕಟ್ಟಲಿ ಎಂದು ಸಲಹೆ ನೀಡಿದರು. ಈ ಹಗರಣದ ಬಗ್ಗೆ ಸುದೀರ್ಘವಾಗಿ ಮಾತನಾಡುವ ಸಿದ್ದರಾಮಯ್ಯ ಕಾನೂನು ಸಲಹೆಗಾರ ಈಗ ಶಾಸಕರಾಗಿದ್ದಾರೆ. ಸಿದ್ದರಾಮಯ್ಯ ಪರ ವಾದ ಮಂಡಿಸುತ್ತಿರುವ ಆತ 62 ಕೋಟಿ ರೂಪಾಯಿ ಪರಿಹಾರ ಕೇಳಿದ್ದಾರೆ. ಹಾಗಾದರೆ ಈಗಾಗಲೇ ಮುಡಾ ಭೂ ಸ್ವಾಧೀನದಿಂದ ಭೂಮಿ ಕಳೆದುಕೊಂಡ ಇತರೆ ರೈತರ ಜಮೀನಿಗೆ ಎಷ್ಟು ಬೆಲೆ ನಿಗದಿ ಮಾಡುತ್ತೀರಾ ಎಂದು ಪ್ರಶ್ನಿಸಿದರು.

ಭೂಮಿ ಕಳೆದುಕೊಂಡ ರೈತರನ್ನು ಬೀದಿಯಲ್ಲಿ ನಿಲ್ಲಿಸಿ, ಈಗ ನಿಮ್ಮ ಪತ್ನಿ ಆಸ್ತಿಗೆ 62 ಕೋಟಿ ಪರಿಹಾರ ಕೇಳುತ್ತಿದ್ದೀರಲ್ಲ. ಇದಕ್ಕೆ ಆ ದೇವರು ಮೆಚ್ಚುವನೆ ಎಂದು ಮರು ಪ್ರಶ್ನಿಸಿದರು.

ರಾತ್ರೋರಾತ್ರಿ ರೈತರ ಭೂಮಿ ಸ್ವಾಧೀನ ಮಾಡಿ ಕೊಂಡು ಬೀದಿಗೆ ನಿಲ್ಲಿಸುತ್ತಾರೆ. ಸೂಕ್ತ ಪರಿಹಾರ ನೀಡದೆ ಮೋಸ ಮಾಡುತ್ತಾರೆ. ಸಾಮಾನ್ಯ ರೈತರ ಪರಿಸ್ಥಿತಿ ಹೀಗಿರುವಾಗ ನೀವು ಮಾತ್ರ ದೊಡ್ಡ ಮಟ್ಟದ ಪರಿಹಾರ ಕೇಳುತ್ತೀರಲ್ಲ ಇದು ಯಾವ ನ್ಯಾಯ ಎಂದು ಸಿದ್ದರಾಮಯ್ಯಗೆ ಪ್ರಶ್ನೆಗಳ ಸುರಿ ಮಳೆಗೈಯ್ದರು. ಮಂಡ್ಯದಲ್ಲಿ ಇಂದು ನಾನು ಜನತಾ ದರ್ಶನ ನಡೆಸುವ ವಿಚಾರದಲ್ಲೂ ದ್ವೇಷದ ರಾಜ ಕಾರಣ ಮಾಡುತ್ತಿದ್ದಾರೆ. ನನ್ನ ಜನತಾ ದರ್ಶನದ ವಿಚಾರವನ್ನು ಸಚಿವ ಸಂಪುಟದಲ್ಲೂ ಚರ್ಚೆ ಮಾಡಿದ್ದಾರೆ. ಈ ಮೂಲಕ ಅಧಿಕಾರಿಗಳನ್ನು ಜನತಾ ದರ್ಶನಕ್ಕೆ ಹೋಗದಂತೆ ನಿರ್ಬಂಧಿಸಿದ್ದಾರೆ. ಇಂತಹ ತಂತ್ರಗಾರಿಕೆಯಿಂದ ಅಧಿಕಾರಿಗಳನ್ನು ದೂರ ಇಡಬಹುದು, ಆದರೆ ನನ್ನಿಂದ ಜನರನ್ನು ದೂರ ಮಾಡಲು ಸಾಧ್ಯವಿಲ್ಲ ಎಂದು ಕುಮಾರ ಸ್ವಾಮಿ ಟಾಂಗ್ ನೀಡಿದರು. ಕೇಂದ್ರ ಸಚಿವರಾದ ನಂತರ ಮೊದಲ ಬಾರಿಗೆ ಚಾಮುಂಡಿಬೆಟ್ಟಕ್ಕೆ ಆಗಮಿಸಿದ ಕುಮಾರಸ್ವಾಮಿ ನಾಡ ದೇವತೆ ತಾಯಿ ಚಾಮುಂಡೇ ಶ್ವರಿ ದರ್ಶನ ಪಡೆದರು. ಈ ಸಂದರ್ಭದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಸಾ.ರಾ. ಮಹೇಶ್ ಸೇರಿದಂತೆ ಹಲವರು ಹಾಜರಿದ್ದರು.



ಕೇಂದ್ರ ಉಕ್ಕು ಮತ್ತು ಭಾರೀ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಶುಕ್ರವಾರ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ನಾಡ ದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಸಾ.ರಾ.ಮಹೇಶ್ ಉಪಸ್ಥಿತರಿದ್ದರು.

ಹಿನಕಲ್ ಸ.ನಂ. 211ರ 3.05 ಎಕರೆ ಜಮೀನಿಗೆ ಬದಲಾಗಿ ನೀಡಿರುವ 36,753 ಚದರಡಿ ನಿವೇಶನಗಳನ್ನು ರದ್ದುಗೊಳಿಸಿ

ಮುಖ್ಯ ಕಾರ್ಯದರ್ಶಿಗೆ ಶಾಸಕ ಶ್ರೀವತ್ಸ ಪತ್ರ



ಶ್ರೀವತ್ಸ

ಮೈಸೂರು, ಜು. 5(ಆರ್‌ಕೆ)– ಮೈಸೂರು ತಾಲೂಕು ಹಿನಕಲ್ ಸರ್ವೆ ನಂಬರ್ 211ರಲ್ಲಿ 3.05 ಎಕರೆ ಜಮೀನಿಗೆ ಪರಿಹಾರವಾಗಿ ವಿಜಯನಗರ 4ನೇ ಹಂತದಲ್ಲಿ ನೀಡಿರುವ ಅಭಿವೃದ್ಧಿಪಡಿಸಿದ 36,753 ಚದರಡಿ ನಿವೇಶನಗಳನ್ನು ರದ್ದುಪಡಿಸಿ ಮುಡಾ ವಾಪಸ್ ಪಡೆಯುವಂತೆ ಶಾಸಕ ಟಿ.ಎಸ್. ಶ್ರೀವತ್ಸ ಒತ್ತಾಯಿಸಿದ್ದಾರೆ. ಈ ಸಂಬಂಧ ಜು. 4ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ಅವರು, ಲೇಟ್ ಅಣ್ಣಯ್ಯ ಅವರ ಮಗ ಎ.ಪಾಪಣ್ಣ ಎಂಬುವರಿಗೆ 36,753 ಚದರಡಿಗೆ ಸರಿದೂಗುವ ನಿವೇಶನಗಳನ್ನು ಹಂಚಿಕೆ ಮಾಡಿ ಆಯುಕ್ತರು 2024ರ ಜೂ.12ರಂದು ಆದೇಶ ಮಾಡಿದ್ದಾರೆ ಎಂದು ತಿಳಿಸಿದ್ದಾರೆ. 2023ರ ಅಕ್ಟೋಬರ್ 27ರಂದೇ ಶೇ. 50:50ರ ಅನುಪಾತದಡಿ ನಿಯಮಬಾಹಿರವಾಗಿ ಹಂಚಿಕೆ ಮಾಡಲು ನಿರ್ಧರಿಸಿರುವುದನ್ನು ರದ್ದುಪಡಿಸ ಬೇಕೆಂದು ಸರ್ಕಾರ ಆದೇಶ ನೀಡಿದ್ದರೂ ಪರಿ ಹಾರವಾಗಿ ನಿವೇಶನ ಹಂಚಿಕೆ ಮಾಡಿರುವುದರಿಂದ ಈ ಪ್ರಕರಣದಲ್ಲಿ ನೀಡಿರುವ 36,753 ಚದರಡಿ ನಿವೇಶನಗಳನ್ನು ರದ್ದುಗೊಳಿಸುವಂತೆಯೂ ಶ್ರೀವತ್ಸ ಒತ್ತಾಯಿಸಿದ್ದಾರೆ.

ಕ್ರಿಮಿನಲ್ ಕೇಸು ದಾಖಲಿಸಿ

ನಿಯಮ ಬಾಹಿರವಾಗಿ ಶೇ. 50:50ರ ಅನುಪಾತದಡಿ ನಿವೇಶನಗಳನ್ನು ಹಂಚಿಕೆ ಮಾಡಿ ಸರ್ಕಾರಕ್ಕೆ ಸಾವಿರಾರು ಕೋಟಿ ರೂ. ನಷ್ಟ ಉಂಟು ಮಾಡಿರುವ ಮುಡಾ ಮಾಜಿ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಅವರನ್ನು ಸೇವೆಯಿಂದ ಅಮಾನತುಗೊಳಿಸುವಂತೆ ಶಾಸಕ ಟಿ.ಎಸ್. ಶ್ರೀವತ್ಸ ಒತ್ತಾಯಿಸಿದ್ದಾರೆ.

ಈ ಬಗ್ಗೆ ಜುಲೈ 4ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ಅವರು, ಬದಲಿ ನಿವೇಶನ ಮಂಜೂರು ಮಾಡುವ ಕುರಿತಂತೆ ಮಾರ್ಗಸೂಚಿ ತಯಾರಿಸುವ ಅಗತ್ಯವಿರುವುದರಿಂದ ಮುಡಾದಿಂದ ಕೈಗೊಂಡ ಯಾವುದೇ ನಿರ್ಣಯಗಳನ್ನು ಕೈಗೊಳ್ಳದಂತೆ 2023ರ ನವೆಂಬರ್ 4ರಂದು ಆಯುಕ್ತರಿಗೆ ಸರ್ಕಾರದ ಕಾರ್ಯದರ್ಶಿಗಳು ಪತ್ರ ಮೂಲಕ ಸೂಚನೆ ನೀಡಿದ್ದರು ಎಂದು ತಿಳಿಸಿದ್ದಾರೆ. ಸರ್ಕಾರದ ನಿರ್ದೇಶನವನ್ನು ಧಿಕ್ಕರಿಸಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿದ್ದರಿಂದ ಆಯುಕ್ತರಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ಸ್ವಾಧೀನಪಡಿಸಿಕೊಳ್ಳದೇ ಭೂಮಿಯನ್ನು ಪ್ರಾಧಿಕಾರಕ್ಕೆ ಬಳಸಿಕೊಂಡು ಅದಕ್ಕೆ ಬದಲಾಗಿ ನಿವೇಶನ ನೀಡುವಂತಹ ನಿರ್ಣಯವನ್ನು ಕೈಗೊಳ್ಳುವಂತಿಲ್ಲ ಎಂದು 2021ರ ಮೇ 4ರಂದು ಸರ್ಕಾರ ಆದೇಶಿಸಿದ್ದರೂ, ಆಯುಕ್ತರು ಕಾನೂನು ಬಾಹಿರವಾಗಿ ಮುಡಾದಿಂದ ನಿವೇಶನಗಳನ್ನು ಹಂಚಿರುವುದರಿಂದ ಅವರನ್ನು ವರ್ಗಾವಣೆ ಮಾಡಿದರೆ ಸಾಲದು, ಕ್ರಿಮಿನಲ್ ಕೇಸು ದಾಖಲಿಸಿ ಅವರನ್ನು ಅಮಾನತುಗೊಳಿಸಬೇಕು ಎಂದು ಶ್ರೀವತ್ಸ ಪತ್ರದಲ್ಲಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾಧಿಕಾರಿ ವರ್ಗಾವಣೆ ಮುಡಾ ಹಗರಣ ಮುಚ್ಚಿಹಾಕಲು ಮತ್ತೊಂದು ಹುನ್ನಾರ

ತನಿಖೆ ಮುಗಿಯುವವರೆಗಾದರೂ ಡಾ.ರಾಜೇಂದ್ರರನ್ನು ಮುಂದುವರೆಸಬೇಕಿತ್ತು: ಶ್ರೀವತ್ಸ

ಮೈಸೂರು, ಜು. 5(ಆರ್‌ಕೆ)– ಮುಡಾ ನಿವೇಶನ ಹಂಚಿಕೆ ಹಗರಣದ ತನಿಖೆ ಪ್ರಗತಿಯಲ್ಲಿರುವಾಗ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ರನ್ನು ವರ್ಗಾವಣೆ ಮಾಡಬಾರದಿತ್ತು ಎಂದು ಶಾಸಕ ಟಿ.ಎಸ್. ಶ್ರೀವತ್ಸ ತಿಳಿಸಿದ್ದಾರೆ.

'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಶೇ. 50:50 ಅನುಪಾತದಡಿ, ಪ್ರೋತ್ಸಾಹದಾಯಕ ಹಾಗೂ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಬಾರದೆಂದು ಮುಡಾ ಆಯುಕ್ತರಿಗೆ ಲಿಖಿತ ಸೂಚನೆ ನೀಡಿದ್ದ ಜಿಲ್ಲಾಧಿ ಕಾರಿಗಳು, ಅವರು ಕ್ರಮ ವಹಿಸದ ಕಾರಣ, ಕೊನೆಗೆ ಸರ್ಕಾರಕ್ಕೂ ಈ ಬಗ್ಗೆ ಪತ್ರ ಬರೆದಿದ್ದರು ಎಂದು ತಿಳಿಸಿದರು.

ಹಗರಣ ಸಂಬಂಧ ಜಿಲ್ಲಾಧಿಕಾರಿಗಳ ಪತ್ರದ ಹಿನ್ನೆಲೆಯಲ್ಲಿ ಸರ್ಕಾರವು ತಾಂತ್ರಿಕ ಸಮಿತಿ ರಚಿಸಿ ತನಿಖೆ ನಡೆಸಿ ವರದಿ ಪಡೆದಿತ್ತು ಈ ಎಲ್ಲಾ ಪ್ರಕ್ರಿಯೆ ಸಂಬಂಧ ಮಾಹಿತಿ ತಿಳಿದಿರುವುದರಿಂದ ಡಾ. ಕೆ.ವಿ.ರಾಜೇಂದ್ರ ಅವರನ್ನು ಉಳಿಸಿಕೊಂಡು ತನಿಖೆಗೆ ಬಳಸಿ ಕೊಳ್ಳಬಹುದಿತ್ತು ಎಂದ ಶ್ರೀವತ್ಸ ಆದರೆ ಡಿಸಿಯನ್ನು ವರ್ಗಾವಣೆ ಮಾಡಿ ಮುಡಾ ನಿವೇಶನ ಹಗರಣ ಮುಚ್ಚಿಹಾಕಲು ಸರ್ಕಾರ ಮತ್ತೊಂದು ಹುನ್ನಾರ ನಡೆಸಿರುವುದು ಸಾಬೀತಾಗಿದೆ ಎಂದು ಆರೋಪಿಸಿದ್ದಾರೆ.

ಮಧುರ ಗಾನ ಕಾರ್ಯಕ್ರಮ

ಮೈಸೂರು, ಜು.5(ಜಿಎ)–ಸ್ಕಾಲರ್ಸ್ ಎಜುಕೇಶನಲ್ ಅಂಡ್ ಕಲ್ಚರಲ್ ಟ್ರಸ್ಟ್‌ನಿಂದ ಜುಲೈ 7ರಂದು ಸಂಜೆ 5 ಗಂಟೆಗೆ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಭಾಂಗಣದಲ್ಲಿ ಗಾಯಕ ಆರ್.ಕೃಷ್ಣಮೂರ್ತಿ ಸಾರಥ್ಯದಲ್ಲಿ ಮಧುರ ಗಾನ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ, ನಿವೃತ್ತ ಡಿಡಿಪಿಐ ನಾಗಮಲ್ಲೇಶ್ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಹಿಂದಿ ಭಾಷೆಯ 35 ಗೀತೆಗಳನ್ನು ಹಾಡಲಾಗುವುದು. ಟ್ರಸ್ಟ್‌ನ ಟಿ.ಆರ್. ಸಿದ್ದರಾಜು, ಎಂ.ಸುರೇಶ್, ನಾರಾಯಣ ಸ್ವಾಮಿ, ಶಿವಕುಮಾರ್, ಮುರಳಿ, ಎ.ನಾಗ ರಾಜು, ತೇಜಸ್ವಿನಿ ಅನಂತರಾಮನ್, ಗಾಯನದಲ್ಲಿ ಭಾಗವಹಿಸುವರು ಎಂದರು.

ಅಭಿನಂದನೆ...



ಮೈಸೂರು ಜಿಲ್ಲಾಧಿಕಾರಿಯಾಗಿ ದಕ್ಷ ಮತ್ತು ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿ ಶುಕ್ರವಾರ ವರ್ಗಾವಣೆಗೊಂಡಿರುವ ಡಾ. ಕೆ.ವಿ. ರಾಜೇಂದ್ರ ಅವರನ್ನು ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಮಲ್ಲೇಶ್, ಉದ್ಯಮಿ ಕಡಕೊಳ ಕುಮಾರ್, ವೀರವನಿತೆ ರಾಣಿ ಚೆನ್ನಮ್ಮ ಸ್ವಯಂ ಸೇವಾ ಸಂಘದ ಪ್ರಧಾನ ಕಾರ್ಯದರ್ಶಿ ಎ.ಪಿ. ವಿರೂಪಾಕ್ಷ ಆತ್ಮೀಯವಾಗಿ ಅಭಿನಂದಿಸಿದರು.

ಹೊರಗುತ್ತಿಗೆ ನೇಮಕಾತಿ ನಿಯಮಗಳ ಮಾರ್ಪಡಿಗೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಪ್ರತಿಭಟನೆ

ಮೈಸೂರು, ಜು.5(ಜಿಎ)– ಹೊರಗುತ್ತಿಗೆ ನೇಮಕಾತಿಗಳಲ್ಲಿ ಅಳವಡಿಸಿರುವ 1 ಮತ್ತು 6ನೇ ಷರತ್ತುಗಳನ್ನು ರದ್ದುಪಡಿಸುವಂತೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಹೊರಗುತ್ತಿಗೆ ನೇಮಕಾತಿಗಳಲ್ಲಿ ಮೀಸಲಾತಿ ಅಳವಡಿಸಿ ಸರ್ಕಾರ ಹೊರಡಿಸಿರುವ ಸುತ್ತೋಲೆಯಲ್ಲಿ ನೇಮಕಾತಿಗೆ ಪಾಲಿಸಬೇಕಾದ ನಿಯಮಗಳನ್ನು ಮಾರ್ಪಡಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು. ಹಲವು ವರ್ಷಗಳಿಂದ ಉದ್ಯೋಗ ನೇಮಕಾತಿ ಪ್ರಕ್ರಿಯೆ ನಡೆಯದೆ ಅಹಿಂದ ಸಮುದಾಯದ ಲಕ್ಷಾಂತರ ನಿರುದ್ಯೋಗಿ ಯುವ ಸಮೂಹ ಬೀದಿಗೆ ಬಿದ್ದಿತ್ತು. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸುತ್ತೋಲೆ ಹೊರಡಿಸಿದೆ. ಆದರೆ, ಸುತ್ತೋಲೆಯ 1 ಮತ್ತು 6ನೇ ಷರತ್ತುಗಳು ಆದೇಶಕ್ಕೆ ಸದುದ್ದೇಶಕ್ಕೆ ವಿರುದ್ಧವಾಗಿವೆ. 1ನೇ ಷರತ್ತಿನಲ್ಲಿ ಹೊರಗುತ್ತಿಗೆ ಮೀಸಲಾತಿ ನೀತಿ 45 ದಿನಗಳಿಗಿಂತ ಕಡಿಮೆ ಅವಧಿಯ ನೇಮಕಾತಿಗೆ ಅನ್ವಯಿಸುವುದಿಲ್ಲ ಎಂದಿದೆ. ಇದು ಮೀಸಲಾತಿ ವಿರೋಧಿ ಗಳಿಗೆ ಅನುಕೂಲವಾಗಿದ್ದು, ಕೂಡಲೇ ಅದನ್ನು ರದ್ದುಪಡಿಸಿ ಆದೇಶ ನೀಡ ಬೇಕೆಂದು ಒತ್ತಾಯಿಸಿದರು.

6ನೇ ಷರತ್ತಿನಲ್ಲಿ ಯಾವುದೇ ಇಲಾಖೆಯಲ್ಲಿ ಕನಿಷ್ಠ 20 ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಸಂದರ್ಭದಲ್ಲಿ ಮಾತ್ರ ಮೀಸಲಾತಿ ನೀತಿ ಜಾರಿಗೊಳಿಸುವುದು ಅವೈಜ್ಞಾನಿಕ ಹಾಗೂ ದುರುದ್ದೇಶಪೂರಕ. ಮೀಸಲಾತಿಯನ್ನು ವಂಚಿಸಲು ಸದಾ ಸಿದ್ಧರಿರುವವರಿಗೆ ಈ ನಿಬಂಧನೆಗಳು ಸಹಕಾರಿಯಾಗಲಿವೆ.

20ಕ್ಕೂ ಹೆಚ್ಚು ನೇಮಕಾತಿಗಳಿದ್ದಾಗ ಮಾತ್ರ ಮೀಸಲಾತಿ ನೀತಿ ಅನ್ವಯಿಸುತ್ತದೆ ಎಂದು ಸರ್ಕಾರವೇ ನಿರ್ಬಂಧ ವಿಧಿಸಿದರೆ ಎಲ್ಲಾ ನೇಮಕಾತಿ ಉದ್ಯೋಗಗಳನ್ನು 20ರ ಒಳಗೇ ನಿಗದಿ ಮಾಡುತ್ತ ಹೋಗುವ ಮೀಸಲಾತಿ ವಂಚಕರ ಚಾಳಿಗೆ ರತ್ನ ಗಂಬಳಿ ಹಾಕಿ ರಹದಾರಿ ಕಲ್ಪಿಸಿಕೊಟ್ಟಂತಾಗುತ್ತದೆ ಎಂದು ದೂರಿದರು.

1 ಮತ್ತು 6ನೇ ಷರತ್ತನ್ನು ರದ್ದುಗೊಳಿಸಬೇಕು. ಈಗಾಗಲೇ ಜಾರಿಯಲ್ಲಿರುವ ರೋಸ್ಟರ್ ನಿಯಮಗಳ ಅನುಸಾರವಾಗಿ ನೇಮಕಾತಿ ಪ್ರಕ್ರಿಯೆ ಕಡ್ಡಾಯವಾಗಿರಬೇಕು ಎಂದು ಆದೇಶ ಮಾರ್ಪಾಡು ಮಾಡಿ ಮರು ಸುತ್ತೋಲೆ ಹೊರಡಿಸಬೇಕು. ಈ ಕುರಿತು ಯಾವುದೇ ಕ್ರಮ ಕೈಗೊಳ್ಳದಿದ್ದರೆ ರಾಜ್ಯ ಮಟ್ಟದಲ್ಲಿ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಸಂಚಾಲಕರಾದ ಆಲಗೂಡು ಶಿವಕುಮಾರ್, ಬೆಟ್ಟಯ್ಯ ಕೋಟೆ, ಆರ್.ಸೋಮಣ್ಣ ಕುಪ್ಪೇಗಾಲ, ದಾಸಯ್ಯ, ರಜನಿ ಶಿವಶಂಕರ್, ತಿಮ್ಮೇಗೌಡ, ಶಿವು, ಶಿವಸ್ವಾಮಿ, ಕೃಷ್ಣ ಕುಮಾರ್, ದಿಲೀಪ್, ಶ್ರೀನಿವಾಸ್, ಪ್ರಕಾಶ್, ಚಂದನ್ ಸೇರಿದಂತೆ ಹಲವರು ಭಾಗವಹಿಸಿದ್ದರು.



ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಹೊರಗುತ್ತಿಗೆ ನೇಮಕಾತಿಗಳಲ್ಲಿ 1 ಮತ್ತು 6ನೇ ಷರತ್ತುಗಳನ್ನು ರದ್ದುಪಡಿಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಸಾಧಕರಿಗೆ ಸನ್ಮಾನ



ಲಲಿತಾ ಕಲಾ ಅಕಾಡೆಮಿ ಅಧ್ಯಕ್ಷ ಪ.ಸ.ಕುಮಾರ್ ಹಾಗೂ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಮಾನಸ ಅವರನ್ನು ಸನ್ಮಾನಿಸಲಾಯಿತು. ಕಲಾನಿಕೇತನ ಕಾರ್ಯದರ್ಶಿ ಬಾಬುರಾವ್, ರಂಗಕರ್ಮಿ ರಾಜಶೇಖರ ಕದಂಬ, ಪ್ರಾಂಶುಪಾಲ ಮಹದೇವಶೆಟ್ಟಿ, ಕಲಾವಿದರಾದ ಪರಮೇಶ್, ವಿಠಲರಾವ್ ಜುಳಕಿ ಇದ್ದಾರೆ.

ನಿಧನ



ಲಯನ್ ಹೆಚ್.ಮುದ್ದೇಗೌಡ

ಮೈಸೂರು, ಜು. 5– ಮೈಸೂರಿನ ಒಂಟಿಕೊಪ್ಪಲು ನಿವಾಸಿ ಲಯನ್ ಹೆಚ್.ಮುದ್ದೇಗೌಡ (93) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಜಯಲಕ್ಷ್ಮಿ, ಪುತ್ರ ಪಿ.ಎಂ. ಶಿವಕುಮಾರ್, ಸೊಸೆ, ಪುತ್ರಿಯರಾದ ಪಿ.ಎಂ.ಶುಭ ಗಿರೀಶ್ ಮತ್ತು ಪಿ.ಎಂ. ಮೀನಾ ಪ್ರಕಾಶ್, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿ ಧಾಮದಲ್ಲಿ ಶುಕ್ರವಾರವೇ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಶ್ರೀಯುತರ ನಿಧನಕ್ಕೆ ಎಸ್.ಎಂ. ಕೃಷ್ಣ ಅಭಿಮಾನಿ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ. ದೇವೇಗೌಡ, ಬಂದಮ್ಮ ಕಾಳಮ್ಮ ದೇವಸ್ಥಾನದ ಕಾರ್ಯದರ್ಶಿ ಡಿಟಿಪಿ ರಮೇಶ್, ಒಕ್ಕಲಿಗರ ಸಂಘದ ಕಾರ್ಯದರ್ಶಿ ಚೇತನ್, ಉಪಾಧ್ಯಕ್ಷ ಒಂಟಿಕೊಪ್ಪಲ್ ಗುರುರಾಜ್, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ, ಪ್ರದೀಪ್ (ದೇವು), ಪಡುವಾರಹಳ್ಳಿ ನಟರಾಜ್ ಸಂತಾಪ ಸೂಚಿಸಿದ್ದಾರೆ.

ಕೆ.ಎಸ್.ಸರಳಾಂಬ



ಮೈಸೂರಿನ ವಿಶ್ವೇಶ್ವರನಗರ ನಿವಾಸಿ ಕೆ.ಎಸ್. ಸರಳಾಂಬ (78) ಗುರುವಾರ ನಿಧನರಾದರು. ಮೃತರು ಪುತ್ರ ಎಂ.ಎಸ್. ಸತೀಶ್ (ಫೈನಾನ್ಷಿಯಲ್ ಅಡ್ವೈಸರ್), ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಜಿ.ಎಸ್.ಭಟ್



ಸಿಎಫ್‌ಟಿಆರ್‌ಐ ನಿವೃತ್ತ ಸಿವಿಲ್ ಇಂಜಿನಿಯರ್ ಮತ್ತು ವಿಜಯನಗರ 3ನೇ ಹಂತದ ನಿವಾಸಿ ಕೆ.ಜಿ.ಎಸ್. ಭಟ್ (88) ಜುಲೈ 1ರಂದು ನಿಧನರಾದರು. ಮೃತರು ಪತ್ನಿ ಕೆ. ಜಯಲಕ್ಷ್ಮಿ, ಪುತ್ರರಾದ ಅರೂನ್ ಮತ್ತು ಅಜಿತ್, ಪುತ್ರಿ ಅನಿತಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ವಿಜಯನಗರ 4ನೇ ಹಂತದ ಮುಕ್ತಿಧಾಮದಲ್ಲಿ ಜುಲೈ 2 ರಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

6.07.2024 ಶನಿವಾರ, ಮಳೆ ನಕ್ಷತ್ರ : ಪುನರ್ವಸು 6.07.2024 ರಿಂದ 19.07.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 9 ರಿಂದ ಬೆನ್ನು ನೋವಿಗೆ ಕಾರಣಗಳು, ಲಕ್ಷಣಗಳು ಮತ್ತು ಚಿಕಿತ್ಸೆಗಳ ಬಗ್ಗೆ ತಜ್ಞ ವೈದ್ಯರಿಂದ ಸಲಹೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಮೈಸೂರು ಜಿಲ್ಲಾ ಖೋ ಖೋ ಸಂಸ್ಥೆ, ಕರ್ನಾಟಕ ರಾಜ್ಯ ಖೋ ಖೋ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ :** ರಾಜ್ಯ ಮಟ್ಟದ ಎರಡು ದಿನಗಳ ಖೋ ಖೋ ತೀರ್ಪುಗಾರರ ಪರೀಕ್ಷೆ, ಉದ್ಘಾಟನೆ : ಕರ್ನಾಟಕ ರಾಜ್ಯ ಖೋ ಖೋ ಸಂಸ್ಥೆ ಗೌರವ ಕಾರ್ಯದರ್ಶಿ ಆರ್. ಮಲ್ಲಿಕಾರ್ಜುನಯ್ಯ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಖೋ ಖೋ ಸಂಸ್ಥೆ ಅಧ್ಯಕ್ಷ ಡಾ. ಸಿ. ಕೃಷ್ಣ, ಸ್ಥಳ: ಮೈಸೂರು ವಿಶ್ವವಿದ್ಯಾನಿಲಯದ ಸ್ಪೋರ್ಟ್ಸ್ ಪೆವಿಲಿಯನ್, ಬೆಳಗ್ಗೆ 9.30ಕ್ಕೆ.
- **ರವಿವರ್ಮ ಆರ್ಟ್ ಇನ್ಸ್‌ಟಿಟ್ಯೂಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಪೇಯಿಂಟಿಂಗ್ ಮತ್ತು ಡ್ರಾಯಿಂಗ್ ಎಕ್ಸಿಬಿಷನ್, ಸ್ಥಳ: ರವಿವರ್ಮ ಆರ್ಟ್ ಇನ್ಸ್‌ಟಿಟ್ಯೂಟ್, ಚಾಮರಾಜಪುರಂ, ಮಧ್ಯಾಹ್ನ 12.30ಕ್ಕೆ
- **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ಗುಜರಾತ್ ಕರಕುಶಲ ಉತ್ಸವ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ವರ್ತುಲ ರಸ್ತೆ, ಬೆಳಗ್ಗೆ 10 ರಿಂದ.
- **ಎಸ್‌ಬಿಐ ಡಿಎಫ್‌ಹೆಚ್‌ಎಲ್ ಲಿಮಿಟೆಡ್ :** ಮಂಡ್ಯ, ಮೈಸೂರು ಮತ್ತು ಹಾಸನ ನಗರ ಸಹಕಾರಿ ಬ್ಯಾಂಕ್‌ಗಳ ಸಿಇಓ, ಕಾರ್ಯನಿರ್ವಹಣಾಧಿಕಾರಿಗಳಿಗೆ ಸ್ಥಿರ ಆದಾಯದ ಭದ್ರತೆಗಳ ಮಾರುಕಟ್ಟೆಯಲ್ಲಿ ತಂತ್ರಗಳು ಮತ್ತು ಅವಕಾಶಗಳ ಕುರಿತು ಸಮಾವೇಶ, ಸ್ಥಳ: ರೆಜೆಂಟಾ ಸೆಂಟ್ರಲ್ ಜವಾಜಿ, ಗಂಗೋತ್ರಿ ಬಡಾವಣೆ, ಬೆಳಗ್ಗೆ 10 ರಿಂದ.
- **ಡಾ.ಚಂದ್ರಶೇಖರ್ ಫೌಂಡೇಷನ್, ಕಾವೇರಿ ಸಮೂಹ ವಿದ್ಯಾಸಂಸ್ಥೆಗಳು:** 17ನೇ ಪದವಿ ಪ್ರದಾನ ಸಮಾರಂಭ, ಪದವಿ ಪ್ರದಾನ: ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮುಖ್ಯ ಅತಿಥಿಗಳು: ಚಾಮರಾಜ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಡೀನ್ ಮತ್ತು ನಿರ್ದೇಶಕರಾದ ಡಾ. ಹೆಚ್.ಜಿ. ಮಂಜುನಾಥ್, ಅಧ್ಯಕ್ಷತೆ : ಡಾ. ಚಂದ್ರಶೇಖರ್ ಫೌಂಡೇಷನ್ ಅಧ್ಯಕ್ಷ ಡಾ. ಜಿ.ಆರ್. ಚಂದ್ರಶೇಖರ್, ಅತಿಥಿಗಳು : ಸುರಕ್ಷಾ ಎಜುಕೇಷನ್ ಟ್ರಸ್ಟ್ ವ್ಯವಸ್ಥಾಪಕ ನಿರ್ದೇಶಕ ಡಾ. ಸರಳ ಚಂದ್ರಶೇಖರ್, ಕಾಲೇಜು ಡೀನ್ ಪ್ರೊ. ಎಸ್. ಶ್ರೀಕಂಠಸ್ವಾಮಿ, ಸ್ಥಳ: ಕಾವೇರಿ ವಿದ್ಯಾಸಂಸ್ಥೆ ಆವರಣ, ಬೆಳಗ್ಗೆ 10ಕ್ಕೆ.


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ – ಅನುಶೋಧ– ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು–CSIR, CFTRI, Mysuru, ಪ್ರಸ್ತುತಿ: ಡಾ. ಎ.ಜಿ. ಗೋಪಾಲಕೃಷ್ಣ, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಗಾಯನ ಹಾಗೂ ವ್ಯಾಖ್ಯಾನ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾದಿಯಲ್ಲಿ ಕಂಡ ಮುಖ– ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಮೇದಾ. ಎಂ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ನಿಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.30 ದೇವರನಾಮ–ಕೆ.ಎಂ.ಚಂದ್ರಿಕಾ, 12.45 ಜನಪದ ಸಂಗೀತ, 1.20 ಭಾವಗೀತೆಗಳು – ವೈಷ್ಣವಿ. ಎನ್, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ–ಸ್ವರ ತರಂಗ ತಂಡದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ 'ಇಂಥವರೂ ಇದ್ದಾರೆ', ರಚನೆ–ಬಿ. ಎಸ್. ಕೇಶವರಾವ್, ನಿರ್ಮಾಣ–ಉಮೇಶ್. ಎಸ್.ಎಸ್, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 5.30 ಪಶುಧನ್ ಸೆ ಬೆಹತರ್ ಜೀವನ್, ಪ್ರಾಯೋಜಕರು : ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಸಚಿವಾಲಯ, 6.50 ಕೃಷಿರಂಗ : ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ: ನಾಗಮಂಗಲ ತಾಲೂಕು ದೇವಲಾಪುರ ಹೋಬಳಿ ತಟ್ಟಹಳ್ಳಿಯ ಕೃಷಿಕ ದಂಪತಿ ಟಿ. ಕೆ. ಶಿವರಾಮ್ ಹಾಗೂ ಡಿ. ಕೆ. ಜ್ಯೋತಿ. ಪ್ರಸ್ತುತಿ : ಎನ್. ಕೇಶವಮೂರ್ತಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ : ವಿ. ರಮೇಶ್ ಮತ್ತು ವಿ. ಸುಬ್ರಮಣಿಯಂ –ಯುಗಳ ನಾದಸ್ವರ

- **ಮೈಸೂರು ವಿಶ್ವವಿದ್ಯಾನಿಲಯ, ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರ :** ಸಂವಾದ ಕಾರ್ಯಕ್ರಮ, ಉಪಸ್ಥಿತರು : ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ. ಪಿ. ವೆಂಕಟರಾಮಯ್ಯ, ಪ್ರೊ. ಕೆ.ಎನ್. ಮೋಹನ, ಪ್ರೊ. ಜಿ.ಆರ್. ಜನಾರ್ಧನ, ಪ್ರೊ. ಎಸ್.ಎನ್. ಹೆಗ್ಡೆ, ಪ್ರೊ. ಎಸ್.ಎನ್. ಪ್ರಸಾದ್, ಪ್ರೊ. ಎಂ.ಎಸ್. ಚಂದ್ರಶೇಖರ, ಸ್ಥಳ: ವಿಜ್ಞಾನ ಭವನದ ಸೆಮಿನಾರ್ ಹಾಲ್, ಮಾನಸಗಂಗೋತ್ರಿ, ಬೆಳಗ್ಗೆ 10.30 ರಿಂದ.
- **ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಮಂಡಲ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 11.30ಕ್ಕೆ.
- **ಟಿಪ್ಪು ಸುಲ್ತಾನ್ ಶಾಹೀದ್, ಕರ್ನಾಟಕ ರಾಜ್ಯ ಸೆಂಟ್ರಲ್ ವೆಲ್‌ಫೇರ್ ಮತ್ತು ಉರುಸ್ ಕಮಿಟಿ :** 248 ಹಜರತ್ ನವಾಬ್ ಹೈದರ್ ಆಲಿ ಖಾನ್ ಬಹದ್ದೂರ್ ಸ್ಯಾಂಡಲ್ ಉರುಸ್, ಉಪಸ್ಥಿತರು : ಮೌಲಾನಾ ಮೊಹಮ್ಮದ್ ಉಸ್ಮಾನ್ ಶರೀಫ್, ಮೌಲಾನಾ ಮುಫ್ತಿ ಮೊಹಮ್ಮದ್ ಶ್ಯಾಮ್ಸ್ ಉಲ್ ಹುಡಾ ಸಮಾಧಿ, ಶಾಸಕ ತನ್ವೀರ್ ಸೇಠ್, ಬಸವಲಿಂಗ ಸ್ವಾಮೀಜಿ, ಡಾ. ಮೆಹಬೂಬ್ ಖಾನ್, ನಾಸೀರುರುದ್ದೀನ್ ಬಾಬು, ಮಜೀದ್ ಅಹಮದ್, ರೆಹಮತುಲ್ಲಾ, ಕಲೀಮುಲ್ಲಾ, ಡಾ. ಸಫಿ ಸೈಯದ್ ಹುಸೇನ್ ಅಲಾಮ್ ಶಾ ವಾರ್ಸಿ, ಸ್ಥಳ: ಮೀಲಾದ್ ಬಾಗ್, ಅಶೋಕ ರಸ್ತೆ, ಮಧ್ಯಾಹ್ನ 2ಕ್ಕೆ.
- **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು: ಮಹದೇವಪ್ರಸಾದ್ ಎಚ್ ವಿ, ಕನ್ನಡ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮೇಟಗಳ್ಳಿ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪು ನಗರ, ಸಂಜೆ 4.30 ರಿಂದ.



ವಿದೇಶ ಪ್ರವಾಸ



ಹೆಚ್.ಎಸ್ ಸುಮಲತಾ ಸುನೀಶ್

ಶ್ರೀಮತಿ ಹೆಚ್ ಎಸ್ ಸುಮಲತಾ ಸುನೀಶ್ ಮೈಸೂರು ಇವರು 6-7-2024 ರಂದು ದುಬೈ (UAE) ಗೆ ಪ್ರವಾಸ ಕೈಗೊಂಡಿದ್ದಾರೆ. ಶುಭಕೋರುವವರು ತಾಯಿ ಶೋಭಾ,ತಂದೆ ಸುರೇಶ್, ಅಕ್ಕ ಸುಪ್ರಿತ, ಭಾವ ಸಿದ್ಧರಾಜು, ಸಹೋದರ ಸಂಜಯ್, ಹಗಿನವಾಳು ಗ್ರಾಮ ನಂಜನಗೂಡು ತಾ||

HOUSE TO LET

A 3 BHK Villa in 40'x40' Plot in Srirampura 2nd Stage, Ready to occupy, All 3 Bedrooms, bath attached with supply of hot water from solar water heater. Contact:

9845365026

Vegetarians preferred

ವಿಲ್ಲಾ ಸೈಟ್–ಹುಣಸೂರು ಸುರಕ್ಷಾ ಎನ್‌ಕ್ಲೇವ್

20x30, 20x40, 30x40, 30x50

4 Kms ಬಸ್ ಸ್ಟಾಂಡ್ ನಿಂದ

ಕೇವಲ 1 ಲಕ್ಷ ನೀಡಿ, ಬಾಕಿ ಬ್ಯಾಂಕ್ ಲೋನ್

Entrance Arch, DC Approved, HUDA Approved, Water Tank, 40 ಅಡಿ ರಸ್ತೆ, 75% ಬ್ಯಾಂಕ್ ಲೋನ್. Rs. 675/sft.

Call 99002 01234


WANTED

* Sales Executives for manufacturing industry
* 0-2 years experience.
* Qlfn: PUC or any Degree
* Location: Mysore, Bangalore, Davanagere & Bellary

Interested candidate may whatsapp CV to

9513777350

or email hrd@pheonixpoly.com





NOT GETTING YOUR STAR OF MYSORE & ಮೈಸೂರು ಮಿತ್ರ

Call: 98452-96447 / 99003-82840

ಮೈಸೂರು ಮಿತ್ರ – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

Diploma in Student Counselling Psychology (6th batch)

Understand children better and help them deal with their emotional issues. Become a Certified Student Counsellor and apply for jobs. **ONLINE** course on Zoom. Once a week sessions


6 months Tuesday 5 to 7:00 pm

Assignment based Video recordings, PDF Notes

WhatsApp


9886044221 | 8310819029

www.darwinpsychologycentre.com

















ನೇಮಕಾತಿ ಪತ್ರಿಕಾ ಪ್ರಕಟಣೆ

ಮೆ|| ಪನ್ನಗಾ ಎಂಟರ್‌ಪ್ರೈಸಸ್ ಮೈಸೂರು ಸಂಸ್ಥೆಯ ಮುಖಾಂತರ ಕರ್ನಾಟಕ ಸರ್ಕಾರದ ಸಂಜೀವಿನಿ – ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯನ್ನು **(NRLM)** ಅನುಷ್ಠಾನಗೊಳಿಸಲು **ಮೈಸೂರು ಜಿಲ್ಲೆ ಮತ್ತು ತಾಲ್ಲೂಕುಗಳ** ಅಭಿಯಾನ ನಿರ್ವಹಣಾ ಘಟಕದಲ್ಲಿ ಕಾರ್ಯನಿರ್ವಹಿಸಲು ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ವಿವರ, ನೇಮಕಾತಿ ಅರ್ಹತೆ ಮತ್ತು ಷರತ್ತುಗಳು, ಸಂಭಾವನೆ ಇತ್ಯಾದಿ ವಿವರಗಳನ್ನೊಳಗೊಂಡಿರುವ ವಿವರವಾದ ಸೂಚನೆಯನ್ನು **KSRLPS** ಸಂಸ್ಥೆಯ ವೆಬ್‌ಸೈಟ್: http://jobsksrlps.karnataka.gov.inರಲ್ಲಿ ಪ್ರಕಟಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಇದೇ ವೆಬ್‌ಸೈಟ್ ಲಾಗಿನ್ ಆಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. **ಅರ್ಜಿ ಸಲ್ಲಿಸುವ ಕಡೆಯ ದಿನಾಂಕ: 11.07.2024.** ನಿಗದಿಪಡಿಸಿದ ದಿನಾಂಕದ ನಂತರ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಅರ್ಜಿಗಳನ್ನು ಆನ್‌ಲೈನ್ ಮೂಲಕ ಮಾತ್ರವೇ ಸಲ್ಲಿಸತಕ್ಕದ್ದು ಮತ್ತು ಸಂಸ್ಥೆ / ಇಲಾಖೆಯಾಗಲಿ ಯಾವುದೇ ಅರ್ಜಿಗಳನ್ನು ನೇರವಾಗಿ ಸ್ವೀಕರಿಸಲಾಗುವುದಿಲ್ಲ. **ಹೆಚ್ಚಿನ ಮಾಹಿತಿಗಾಗಿ ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ಮೈಸೂರು ಹಾಗೂ ಪನ್ನಗಾ ಎಂಟರ್‌ಪ್ರೈಸಸ್, ಮೈಸೂರು** (ಫೋನ್ ನಂ: **0821-4000092**) ರವರನ್ನು ಸಂಪರ್ಕಿಸಬಹುದಾಗಿದೆ.

ನಕ್ಕರೆ ಅದೇ ಸ್ವರ್ಗ

ಪತ್ನಿ : ನೀವು ನನ್ನನ್ನು ಎಷ್ಟು ಪ್ರೀತಿಸುತ್ತೀರೀ?
ಪತಿ : ಷಹಜಹಾನ್‌ಗಿಂತ ಹೆಚ್ಚಾಗಿ ಪ್ರೀತಿಸ್ತೀನಿ.
ಪತ್ನಿ : ಹಾಗಾದ್ರೆ ನಾನು ಸತ್ರೆ ನನಗೆ ನೀವು ತಾಜ್ ಮಹಲ್ ಕಟ್ಟಿಸ್ತೀರಾ?
ಪತಿ : ಅಯ್ಯೋ ಹುಚ್ಚಿ... ನಾನು ಈಗಾಗಲೇ ಜಮೀನು ತಗೊಂಡಿದ್ದೀನಿ.. ನೀನೇ ತಡ ಮಾಡ್ತಾ ಇರೋದು...!

ಮೈಸೂರು ಮಿತ್ರ

ಶನಿವಾರ, 6 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಸಮುದ್ರದಾಳಕ್ಕೆ ಧುಮುಕು, ಮುತ್ತು ರತ್ನಗಳು ದೊರೆಯುವವು.
ಸುರಕ್ಷಿತವಾಗಿರಬೇಕೆಂದು ಅಲ್ಲಾಡದೆ ಕುಳಿತರೆ, ದಂಡೆಯು ಮರಳಷ್ಟೆ ನಿನ್ನ ಪಾಲಿಗೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೆಂಬೆಂಬ ಮರ ಮುರಿಯಬಾರದು, ಮನಸ್ಸೆಂಬ ಮಾರ್ಗ ಕತ್ತರಿಸಬಾರದು.

ನಿಮ್ಮ ಪತ್ರಗಳು

ಡೆಂಗ್ಯೂ ಬಗ್ಗೆ ಇರಲಿ ಎಚ್ಚರ...!!

ಮಾನ್ಯರೆ,

ಮಳೆಗಾಲ ಸಮೀಪಿಸುತ್ತಿದ್ದಂತೆ ಕಳೆದ ಒಂದು ತಿಂಗಳಿಂದ 1800ಕ್ಕೂ ಹೆಚ್ಚು ಡೆಂಗ್ಯೂ ಪ್ರಕರಣಗಳು ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆಯು ಸಾರ್ವಜನಿಕ ಸ್ಥಳಗಳಾದ ಸರ್ಕಾರಿ ಬಸ್ ನಿಲ್ದಾಣಗಳು, ಆಸ್ಪತ್ರೆಗಳು, ರೈಲು ನಿಲ್ದಾಣದ ಮುಂತಾದ ಕಡೆಗಳಲ್ಲಿ ಜನರ ಸುರಕ್ಷತೆಗಾಗಿ ಸುತ್ತಮುತ್ತ ನಿಂತ ನೀರು, ಮಳೆ ನೀರು, ಹಸಿ ಕಸ, ಸೊಳ್ಳೆಗಳ ಮೊಟ್ಟೆ ಶೇಖರಣೆ ಆಗುವಂತಹ ಪ್ರದೇಶಗಳಿದ್ದರೆ ಅವುಗಳನ್ನು ಶುಚಿಗೊಳಿಸಬೇಕು. ಹಾಗೆಯೇ ಸಾರ್ವಜನಿಕರು ತಮ್ಮ ಮನೆಗಳಲ್ಲಿ, ನಮ್ಮ ಮನೆಯ ಸುತ್ತಮುತ್ತಲಿನ ಪರಿಸರವನ್ನು ಕೂಡ ಸ್ವಚ್ಛತೆಯಿಂದ ಕಾಪಾಡಿಕೊಳ್ಳಬೇಕು. ಡೆಂಗ್ಯೂನ ಲಕ್ಷಣಗಳಾದಂತಹ ತೀವ್ರ ತಲೆನೋವು, ಕಣ್ಣು ನೋವು, ತೀವ್ರವಾದ ಸ್ನಾಯು ಸೆಳೆತ, ಮತ್ತು ಕೀಲು ನೋವು, ವಾಂತಿ, ಚರ್ಮದ ದದ್ದುಗಳು ಕಂಡುಬಂದಲ್ಲಿ ಹತ್ತಿರದ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಡೆಂಗ್ಯೂ ಪರೀಕ್ಷೆಗಳು ಮತ್ತು ಚಿಕಿತ್ಸೆ ಲಭ್ಯವಿದ್ದು ಪಡೆದುಕೊಳ್ಳುವಂತೆ ತಿಳಿಸಿದೆ. ಮತ್ತೊಂದು ಕಡೆ ಖಾಸಗಿ ಆಸ್ಪತ್ರೆಗಳಲ್ಲಿ ಡೆಂಗ್ಯೂ ಲಕ್ಷಣ ಪತ್ತೆ ಹಚ್ಚುವ NS1 ಮತ್ತು ಟೆಸ್ಟ್‌ಗೆ 600 ರೂ ಗಳ ಬೆಲೆಯನ್ನು ನಿಗದಿಪಡಿಸಿದೆ. ಇದರ ಬಗ್ಗೆ ಆರೋಗ್ಯ ಇಲಾಖೆ ಗಮನಹರಿಸಿ ಸಾರ್ವಜನಿಕರಿಗೆ ಅನುಕೂಲಕರವಾಗುವ ಹಾಗೆ ಮಾಡಬೇಕು.

– ಎನ್.ಅಂಕರಾಜು, ಗ್ರಂಥಪಾಲಕ, ಮೈಸೂರು

ಅಳಿವಿನಂಚಿನಲ್ಲಿ ಬಿಎಸ್‌ಎನ್‌ಎಲ್

ಮಾನ್ಯರೆ,

ನಾನು ಕಳೆದ 35 ವರ್ಷಗಳಿಂದಲೂ ಸರ್ಕಾರಿ ಸ್ವಾಮ್ಯದ ಭಾರತ್ ಸಂಚಾರ ನಿಗಮ ಲಿಮಿಟೆಡ್ ಸ್ಥಿರ ದೂರವಾಣಿಯನ್ನು ಹೊಂದಿದ್ದೆ. ಆದರೆ ಇಲಾಖೆಯಲ್ಲಿನ ಅಸಮರ್ಪಕ ಸೇವೆ ಮತ್ತು ನನಗೂ ಸ್ಥಿರ ದೂರವಾಣಿಯ ಅವಶ್ಯಕತೆ ಇಲ್ಲದ ಕಾರಣ ನಾನು ನನ್ನ ದೂರವಾಣಿಯನ್ನು ಉಪಕರಣ ಸಮೇತ ಇಲಾಖೆಗೆ ಸರೆಂಡರ್ ಮಾಡಿ ಒಂದು ವರ್ಷವಾದರೂ (07/07/2023) ಇದುವರೆಗೂ ನಾನು ದೂರವಾಣಿ ಸಂಪರ್ಕ ಪಡೆಯುವ ಸಂದರ್ಭದಲ್ಲಿ ಕಟ್ಟಿರುವ ಠೇವಣಿ ಹಣ (2,000) ವಾಪಸ್ಸು ಬಂದಿಲ್ಲ. ಇದಕ್ಕಾಗಿ ನಾಲ್ಕಾರು ಬಾರಿ ಹೋಗಿ ಇಲಾಖೆ ಅಧಿಕಾರಿಗಳನ್ನು ಕೇಳಿದರೆ ಸದ್ಯಕ್ಕೆ ಇಲಾಖೆಯಲ್ಲಿ ಹಣವಿಲ್ಲ ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾರೆ. ಕೇವಲ ರೂ. 2,000 ಹಣ ಇಲ್ಲದ ಇಲಾಖೆ ತನ್ನ ನೌಕರರಿಗೆ ವೇತನ ಕೊಡುವುದಾದರೂ ಹೇಗೆ? ಒಂದು ಕಾಲದಲ್ಲಿ ಇಡೀ ದೂರಸಂಪರ್ಕ ವ್ಯವಸ್ಥೆಯನ್ನೇ ತನ್ನ ಮುಷ್ಠಿಯಲ್ಲಿ ಇಟ್ಟುಕೊಂಡಿದ್ದ ಇಲಾಖೆ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವುದು ಶೋಚನೀಯ ಸಂಗತಿ. ಇಲಾಖೆ ಆಧುನಿಕ ತಂತ್ರಜ್ಞಾನಕ್ಕೆ ಹೊಂದಿಕೊಳ್ಳದೇ, ತನ್ನ ಅಳಿವಿನ ಅಂಚಿನಲ್ಲಿದೆ ಎನ್ನಬಹುದು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಪ್ರಜಾಪ್ರಭುತ್ವದಲ್ಲಿ ಮಠಾಧೀಶರು ಮೂಗು ತೂರಿಸಿರುವುದು ಸರಿಯಲ್ಲ

ಮಾನ್ಯರೆ,

ಇತ್ತೀಚೆಗೆ ನಡೆದ ಕೆಂಪೇಗೌಡರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿರುವ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ, ಸಿದ್ದರಾಮಯ್ಯನವರು ಮುಖ್ಯ ಮಂತ್ರಿಯಾಗಿ ಅಧಿಕಾರ ಅನುಭವಿಸಿದ್ದಾರೆ. ಇನ್ನು ಮುಂದೆ ಡಿ. ಕೆ.ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟುಕೊಟ್ಟು ಅವರಿಗೆ ಒಳ್ಳೆಯದಾಗಲಿ ಎಂದು ಹರಸಬೇಕು ಎಂದು ಹೇಳುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅನಗತ್ಯ ಮೂಗು ತೂರಿಸಿದ್ದಾರೆ.

ಶ್ರೀ ಚಂದ್ರಶೇಖರಸ್ವಾಮೀಜಿ ಮಾತುಗಳು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅವಮಾನಿಸುವ ಮತ್ತು ಮುಖ್ಯಮಂತ್ರಿ ಹುದ್ದೆಯು ಸ್ಥಾನಮಾನಗಳನ್ನು ಆಸ್ವಾದಿಸಿ, ಅನುಭವಿಸುವ ಸುಖ ಲೋಲುಪತೆಯ ಸ್ಥಾನಕ್ಕಿಳಿಸಿ ಹುದ್ದೆಯ ಮಹತ್ವ ಜವಾಬ್ದಾರಿ ಕರ್ತವ್ಯಗಳನ್ನು ಗೌಣವಾಗಿಸಿದ್ದಾರೆ. ಕೆಂಪೇಗೌಡರ ಜಯಂತಿ ಸಂದರ್ಭದಲ್ಲಿ ಒಕ್ಕಲುತನದ ಸಮಸ್ಯೆಗಳು, ಕೃಷಿ ಸಮುದಾಯ ಎದುರಿಸುತ್ತಿರುವ ನಷ್ಟ ಕಷ್ಟಗಳ ಬಗ್ಗೆ ಮಾತಾಡಿ ಈ ಸಮುದಾಯಗಳ ಧ್ವನಿಯಾಗುವ ಒಂದು ಉತ್ತಮ ಅವಕಾಶವನ್ನು ಹಾಳುಮಾಡಿ ತಮ್ಮ ಬೇಜವಾಬ್ದಾರಿತನವನ್ನು ತೋರಿದ್ದಾರೆ.

ಒಂದು ರಾಜ್ಯಮಟ್ಟದ ವೇದಿಕೆಯಲ್ಲಿ ಕರ್ನಾಟಕದ ಕೃಷಿಕ ಸಮುದಾಯಗಳು ಮತ್ತು ಕುಟುಂಬಗಳ ಈಗಿನ ಸ್ಥಿತಿಗತಿಗಳ ಹೇಳಿ, ಅವುಗಳ ನಿವಾರಣೆಗೆ ಒಕ್ಕೂಟ ಸರಕಾರ ರಾಜ್ಯದ ತೆರಿಗೆ ಪಾಲನ್ನು ಕೊಡಲು ತಾಕೀತು ಮಾಡಿ, ರಾಜ್ಯ ಸರ್ಕಾರವು ಸರಿಯಾದ ಕೃಷಿಕ ಸ್ನೇಹಿ ನೀತಿ ಅನುಸರಿಸಲು ಹೇಳಿದ್ದರೆ ಸ್ವಾಮಿಗಳು ರಾಜ್ಯದ ಧ್ವನಿಯಾಗುತ್ತಿದ್ದರು. ಬದಲಿಗೆ ಸ್ವಾಮಿಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ತಮ್ಮ ಅಜ್ಞಾನವನ್ನು ತೋರಿ ಮುಖ್ಯಮಂತ್ರಿ ಹುದ್ದೆಯು ಮಠಾಧೀಶರ ಶಿಫಾರಸ್ಸಿನ ಸ್ಥಾನವೇನೋ ಎಂಬಂತೆ ಮಾತಾಡಿ ಮಠಗಳು ಪ್ರಜಾಪ್ರಭುತ್ವ ವ್ಯವಸ್ಥೆಗೆ ಅನಗತ್ಯ ಹೊರೆ ಎಂಬುದನ್ನು ತಮಗರಿವಿಲ್ಲದೇ ಹೇಳಿದ್ದಾರೆ. ಇನ್ನು ಮುಂದಾದರೂ ಮಠಾಧೀಶರು ರಾಜಕೀಯ ವ್ಯವಸ್ಥೆ ಬಗ್ಗೆ ಹೇಳಿಕೆ ನೀಡುವುದು ಸೂಕ್ತವಲ್ಲ.

–ಉಗ್ರ ನರಸಿಂಹೇಗೌಡ, ಸರ್ವೋದಯ ಕರ್ನಾಟಕ, ಮೈಸೂರು.

ಅಂಡರ್ ಬ್ರಿಡ್ಜಿನ ಗುಂಡಿಗಳ ಮುಚ್ಚಿ ರಸ್ತೆ ಸರಿಪಡಿಸಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಹವಮಾನ ವೈಪರೀತ್ಯದಿಂದಾಗಿ ಮಳೆ ಬರುವುದು ಹೋಗುವುದು ತೋಚದಾಗಿದೆ. ಹೀಗಿರುವಾಗ ಮೈಸೂರಿನಂತಹ ಸುಂದರ ನಗರ ಸ್ವಚ್ಛ ನಗರದಲ್ಲಿ ಅಲ್ಲಲ್ಲಿ ರಸ್ತೆಯಲ್ಲಿ ಗುಂಡಿಗಳು ಕಾಣಿಸಿಕೊಂಡು ಜನತೆಗೆ ಓಡಾಡಲು ಹಾಗೂ ವಾಹನಗಳ ಸಂಚಾರ ಕಷ್ಟಸಾಧ್ಯವಾಗಿದೆ. ಸರಸ್ವತಿಪುರಂನ ಅಗ್ನಿಶಾಮಕ ಠಾಣೆಯ ನೇರ ರಸ್ತೆಯ ರೈಲು ಸೇತುವೆಯ ಅಂಡರ್ ಬ್ರಿಡ್ಜ್‌ನ ಕೆಳಗೆ ದೊಡ್ಡ ದೊಡ್ಡ ಗುಂಡಿಗಳಾಗಿದ್ದು ಮಳೆ ಬಂದಾಗ ನೀರು ತುಂಬಿಕೊಳ್ಳುತ್ತದೆ.

ಈ ಬ್ರಿಡ್ಜ್‌ನ ಕೆಳಗೆ ನೀರು ತುಂಬಿದಾಗಲು ಹಾಗೇ ಇರುವಾಗಲು ವಾಹನಗಳು ಚಲಿಸಲು ತುಂಬಾ ಅಪಾಯಕಾರಿ ಎನಿಸುತ್ತದೆ. ಈ ರಸ್ತೆಯಲ್ಲಿ ಜನದಟ್ಟಣೆ ಓಡಾಟ ಎಲ್ಲಾ ಸಮಯದಲ್ಲೂ ಅಧಿಕವಾಗಿರುತ್ತದೆ. ಕಚೇರಿಗೆ ಹೋಗುವವರೂ ಹಾಗೂ ಇನ್ನಿತರ ಅವರದೇ ಆದ ಕೆಲಸ ಕಾರ್ಯಗಳಿಗೆ ತರಾತುರಿಯಲ್ಲಿ ಹೋಗುವಾಗ ಮುಂದಾಗುವ ಅಪಘಾತವನ್ನು ತಪ್ಪಿಸಲು ಇದೊಂದು ಎಚ್ಚರಿಕೆಯ ಕರಗಂಟೆಯಲ್ಲವೇ? ಆದ ಕಾರಣ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಈ ಮೂಲಕ ಮನವಿ.

–ಅನಿಲ್ ರಾಜ, ಸಹ ಶಿಕ್ಷಕರು, ಮೈಸೂರು



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

ದಿಕ್ಕುದೆಸೆ

ದೇಶದಲ್ಲಿ ಚಿನ್ನವಿದ್ದರೆ ಚಿಂತೆ ಇಲ್ಲ!

ಪ್ರಧಾನಿ ಮೋದಿಯವರು ಅಧಿಕಾರಕ್ಕೆ ಬಂದ ನಂತರ ಚಿನ್ನ ಖರೀದಿ ಪ್ರಕ್ರಿಯೆಗೆ ಭಾರೀ ವೇಗ ದೊರೆತಿದೆ. ವಿಶ್ವ ಚಿನ್ನ ಕೌನ್ಸಿಲ್‌ನ (ಡಬ್ಲ್ಯುಜಿಸಿ) ವರದಿಯಂತೆ 2023 ರಲ್ಲಿ ಭಾರತವು ಹದಿನಾರು ಟನ್ ಚಿನ್ನ ಖರೀದಿಸಿತ್ತು. 2024ರ ಮೊದಲ ತ್ರೈಮಾಸಿಕದಲ್ಲಿ ಆರ್‌ಬಿಐ ಹತ್ತೊಂಬತ್ತು ಟನ್ ಚಿನ್ನ ಖರೀದಿಸಿದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಕಳೆದ ವರ್ಷ ಮಾರ್ಚ್‌ನಲ್ಲಿ ದೇಶದ ಬಳಿ 793.63 ಟನ್‌ಗಳಷ್ಟು ಚಿನ್ನದ ಸಂಗ್ರಹವಿತ್ತು. ಈ ವರ್ಷ ಮಾರ್ಚ್ 31ಕ್ಕೆ ಆರ್‌ಬಿಐ 822.1 ಟನ್ ಚಿನ್ನ ಹೊಂದಿದೆ. ಒಟ್ಟಾರೆಯಾಗಿ ಪ್ರಧಾನಿ ಮೋದಿಯವರ ಕಳೆದ ಹತ್ತು ವರ್ಷಗಳ ಆಡಳಿತಾವಧಿಯಲ್ಲಿ ದೇಶವು ಸುಮಾರು 265 ಟನ್ ಚಿನ್ನ ಖರೀದಿಸಿದೆ. ಇದರ ಪರಿಣಾಮ ದೇಶದ ಕರೆನ್ಸಿ ರೂಪಾಯಿಯ ಮೌಲ್ಯ ಸ್ಥಿರವಾಗಿದ್ದು, ಶಕ್ತಿಶಾಲಿಯಾಗಿದೆ. ದೇಶವು ಡಾಲರ್ ಮೇಲಿನ ಅವಲಂಬನೆ ಕಡಿಮೆ ಮಾಡುತ್ತಿದೆ.



ಚಿನ್ನದ ಬೆಲೆ ವರ್ಷ ಕಳೆದಂತೆ ಏರುತ್ತಾ ಇದೆ. 1950 ರಲ್ಲಿ ರೂ. 99 ಇದ್ದ ಹತ್ತು ಗ್ರಾಂ ಚಿನ್ನ 2024 ರಲ್ಲಿ ರೂ. 74,000 ದಾಟಿದೆ. ಚಿನ್ನದ ಬೆಲೆ ಕೇವಲ ಪೂರೈಕೆ ಮತ್ತು ಜನಸಾಮಾನ್ಯರ ಬೇಡಿಕೆಯನ್ನು ಅವಲಂಬಿಸಿಲ್ಲ. ಜಾಗತಿಕ ಭೂ ರಾಜಕೀಯ ಪರಿಸ್ಥಿತಿ, ಯುದ್ಧಗಳು, ಅಸ್ಥಿರ ಸರ್ಕಾರಗಳು, ಹಣದುಬ್ಬರ, ಆರ್ಥಿಕ ಹಿಂಜರಿಕೆ ಮೊದಲಾದ ವಿಷಯಗಳು ಜಾಗತಿಕ ಮಟ್ಟದಲ್ಲಿ ಚಿನ್ನದ ಬೆಲೆಯಲ್ಲಿ ಏರುಪೇರುಗಳನ್ನು ಉಂಟು ಮಾಡುತ್ತವೆ. ದೇಶಗಳ ಆರ್ಥಿಕತೆ, ಕರೆನ್ಸಿ ಮೌಲ್ಯ ಕುಸಿಯದಂತೆ ಸರಕಾರಗಳು ಜನಸಾಮಾನ್ಯರಂತೆ ಚಿನ್ನ ಖರೀದಿ ಆರಂಭಿಸಿದಲ್ಲಿ ಚಿನ್ನದ ಬೆಲೆಯಲ್ಲಿ ಏರಿಕೆಯುಂಟಾಗುತ್ತದೆ. ಅಮೇರಿಕವು ಜಾಗತಿಕ ಮಟ್ಟದಲ್ಲಿ ನಡೆಸುತ್ತಿರುವ ಡಾಲರ್ ಭಯೋತ್ಪಾದನೆಯಿಂದಲೂ ಚಿನ್ನದ ಬೆಲೆ ಹೆಚ್ಚುತ್ತಿದೆ.

ಅಮೇರಿಕದ ಫೆಡರಲ್ ಬ್ಯಾಂಕಿನಲ್ಲಿ ಜಗತ್ತಿನಲ್ಲೇ ಅತೀ ಹೆಚ್ಚು ಅಂದರೆ 8134 ಟನ್ ಚಿನ್ನದ ಸಂಗ್ರಹವಿದೆ. ಈ ಕಾರಣದಿಂದ ಅಮೇರಿಕದ ಡಾಲರ್ ವಿಶ್ವದಲ್ಲಿ ಶಕ್ತಿಶಾಲಿಯಾದ ಸ್ವೀಕಾರಾರ್ಹ ವಿನಿಮಯ ಕರೆನ್ಸಿಯಾಗಿದೆ. ಅಮೇರಿಕವು ಡಾಲರ್ ಪ್ರಾಬಲ್ಯವನ್ನು ಮುಂದುವರಿಸಿಕೊಂಡು ಹೋಗಲು ಅನುಸರಿಸುತ್ತಿರುವ ಆರ್ಥಿಕ ನೀತಿಗಳಿಂದ ವಿಶ್ವದ ಅನೇಕ ದೇಶಗಳ ಆರ್ಥಿಕತೆ ನಾಶವಾಗಿದೆ. ಡಾಲರ್ ದಬ್ಬಾಳಿಕೆಯಿಂದ ಮುಕ್ತಿ ಪಡೆಯಲು ವಿಶ್ವದ ಅನೇಕ ದೇಶಗಳು ಚಿನ್ನ ಖರೀದಿಸತೊಡಗಿವೆ.

ಇನ್‌ವೆಸ್ಕೋ 2023ರಲ್ಲಿ ನಡೆಸಿರುವ ಸಮೀಕ್ಷೆಯಂತೆ 57 ದೇಶಗಳ ರಿಸರ್ವ್ ಬ್ಯಾಂಕ್‌ಗಳು ಕಳೆದ ಹತ್ತು ವರ್ಷಗಳಲ್ಲಿ ತಮ್ಮ ಚಿನ್ನದ ಸಂಗ್ರಹವನ್ನು ಹೆಚ್ಚಿಸಿಕೊಂಡಿವೆ. 2023ರಲ್ಲಿ ಟರ್ಕಿಯ ಕರೆನ್ಸಿ ಟರ್ಕಿಶ್ ಲೀರಾ (ಎಲ್) ಮೌಲ್ಯ ಕುಸಿದಾಗ ಆ ದೇಶ ಹನ್ನೆರಡು ಟನ್ ಚಿನ್ನ ಖರೀದಿಸಿತ್ತು. ಕಜಕಿಸ್ಥಾನ ಆರ್ಥಿಕ ಸಂಕಷ್ಟದಿಂದ ಪಾರಾಗಲು ತನ್ನಲ್ಲಿದ್ದ ಆರು ಟನ್ ಚಿನ್ನ ಮಾರಾಟ ಮಾಡಿ ವಿದೇಶಿ ಮೀಸಲು ನಿಧಿ ಹೆಚ್ಚಿಸಿತ್ತು. 1980ರ ದಶಕದಲ್ಲಿ ಕಾಂಗ್ರೆಸ್ ಸರಕಾರ ಭಾರೀ ಪ್ರಮಾಣದಲ್ಲಿ ಮಾಡಿದ ಸಾಲವನ್ನು ಪಾವತಿಸಲಾಗದೇ ಒದ್ದಾಡುತ್ತಿತ್ತು. 1991 ರಲ್ಲಿ ಕಾಂಗ್ರೆಸ್ ಬೆಂಬಲದಿಂದ ಚಂದ್ರಶೇಖರ ಪ್ರಧಾನಿಯಾದಾಗ ಆರ್ಥಿಕ ಬಿಕ್ಕಟ್ಟು ತೀವ್ರಗೊಂಡಿತ್ತು. ದೇಶ ದಿವಾಳಿ ಅಂಚಿಗೆ ತಲುಪಿತ್ತು. ಆ ವರ್ಷ ಜನವರಿಯಲ್ಲಿ 1.2 ಬಿಲಿಯನ್ ಡಾಲರ್ ಇದ್ದ ದೇಶದ ವಿದೇಶಿ ವಿನಿಮಯ ಮೀಸಲು ಮುಂದಿನ ಆರು ತಿಂಗಳಲ್ಲಿ 600 ಮಿಲಿಯನ್ ಡಾಲರ್‌ಗೆ ಇಳಿದಿತ್ತು. ಒಂದು ಹಂತದಲ್ಲಿ ಕೇವಲ 300 ಮಿ. ಡಾಲರ್‌ಗೆ ಇಳಿದಿತ್ತು. ಈ ಮೀಸಲಿನಿಂದ ಮುಂದಿನ ಮೂರು ವಾರಗಳವರೆಗೆ ಮಾತ್ರ ಪೆಟ್ರೋಲ್, ಡೀಸೆಲ್ ಮೊದಲಾದ ಅವಶ್ಯಕ ವಸ್ತುಗಳನ್ನು ಖರೀದಿಸಬಹುದಿತ್ತು. ಆದಾಯ ಕಡಿಮೆಯಾಗಿ ಖರ್ಚು ಜಾಸ್ತಿಯಾಗಿ ದೇಶದ ವಿತ್ತೀಯ ಕೊರತೆ ವಿಕೋಪಕ್ಕೆ ಹೋಗಿತ್ತು. ಸಾಲದಲ್ಲಿ ಮುಳುಗಿದವರಿಗೆ ಯಾರು ಕೂಡಾ ಹೆಚ್ಚುವರಿಯಾಗಿ ಸಾಲ ನೀಡುವುದಿಲ್ಲ. ಕೆಲವು ದೇಶಗಳಿಂದ ಸಾಲ ಪಡೆಯುವ ಪ್ರಧಾನಿ ಚಂದ್ರಶೇಖರ ಪ್ರಯತ್ನ ಫಲಿಸಲಿಲ್ಲ. ಆ ವರ್ಷ ಭಾರತವು ತನ್ನ ಬಜೆಟ್ ಮಂಡಿಸಲಾಗದೇ ದೈನೇಸಿ ಸ್ಥಿತಿಗೆ ತಲುಪಿತ್ತು. ಆ ಪರಿಸ್ಥಿತಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಆಗಿದ್ದ ವೆಂಕಟರಮಣನ್ ಅವರು ಸರಕಾರದ ಬಳಿ ಇರುವ ಚಿನ್ನವನ್ನು ಒತ್ತೆ ಇಲ್ಲವೇ ಮಾರಾಟ ಮಾಡಿ ತಾತ್ಕಾಲಿಕವಾಗಿ ಬಿಕ್ಕಟ್ಟಿನಿಂದ ಪಾರಾಗುವ ಸಲಹೆ ನೀಡಿದರು.

ಅದಕ್ಕಾಗಿ ಸರಕಾರವು ಆ ವರ್ಷ ಜು.4 ರಿಂದ 18ರ ನಡುವೆ ಎರಡು ಕಂತಿನಲ್ಲಿ ಚಿನ್ನವನ್ನು ದೇಶದಿಂದ ಹೊರಕ್ಕೆ ಸಾಗಿಸಿತು. ಮೊದಲ ಹಂತದಲ್ಲಿ ಕಳ್ಳ ಸಾಗಣೆಯಲ್ಲಿ ಮುಟ್ಟುಗೋಲು ಹಾಕಿದ ಇಪ್ಪತ್ತು ಟನ್ ಚಿನ್ನವನ್ನು ಸ್ವಿಸ್ ಬ್ಯಾಂಕಿನಲ್ಲಿಟ್ಟು ಸಾಲ ಪಡೆಯಲಾಯಿತು. ಎರಡನೇ ಬಾರಿ ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಜಪಾನ್‌ನಲ್ಲಿ 47 ಟನ್ ಚಿನ್ನದ ಗಟ್ಟಿಗಳನ್ನು ಇರಿಸಿ 400 ದಶಲಕ್ಷ ಡಾಲರ್ ಸಾಲ ಪಡೆಯಲಾಯಿತು. ಪ್ರತಿಭಟನೆಗಳಾಗದಂತೆ ಸರಕಾರವು ಅತ್ಯಂತ ರಹಸ್ಯವಾಗಿ ಚಿನ್ನವನ್ನು ಸಾಗಿಸಿತ್ತು. ಅಂದಿನ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಕಟವಾದ ಸುದ್ದಿಯಂತೆ ಅಕ್ಷರಶಃ ದೇಶವು ಕಳ್ಳತನದಿಂದ ಚಿನ್ನವನ್ನು ಸಾಗಿಸಿತ್ತು. ಆ ದಿನಗಳಲ್ಲಿ ಭಾರತಕ್ಕೆ ಆ ರೀತಿಯ ಕ್ರಮ ಅನಿವಾರ್ಯವಾಗಿತ್ತು. 1950 ರಲ್ಲಿದ್ದ ಒಂದು ನೂರು ರೂ.ಗೆ ಇಂದಿನ ದಿನಗಳಲ್ಲಿ ಕೇವಲ ಒಂದೆರಡು ಕೆಜಿ ಅಕ್ಕಿ ಖರೀದಿಸಬಹುದು. ಆದರೆ ಅಂದು ಅಷ್ಟೇ ಮೊತ್ತಕ್ಕೆ ಖರೀದಿಸಿದ ಚಿನ್ನಕ್ಕೆ ಇಂದು ಸಾವಿರಾರು ರೂ. ದೊರೆಯುತ್ತದೆ. ಚಿನ್ನಕ್ಕಿರುವ ಈ ಮೌಲ್ಯ ವರ್ಧನ ಸಾಮರ್ಥ್ಯವು ಎಲ್ಲರನ್ನೂ ಆಕರ್ಷಿಸುತ್ತಿದೆ. ಆದ್ದರಿಂದ ಜನಸಾಮಾನ್ಯರಂತೆ ಸರಕಾರಗಳು ಕೂಡಾ ಕರೆನ್ಸಿ ಭದ್ರತೆ, ಸ್ಥಿರತೆಗಾಗಿ ಹಾಗೂ ಆರ್ಥಿಕ ಬಿಕ್ಕಟ್ಟು ಪರಿಹರಿಸುವ ಲೋಹವೆಂಬ ಕಾರಣಗಳಿಂದ ಖರೀದಿಸುತ್ತಿವೆ.

ಜಾಗತಿಕ ಭೂ ರಾಜಕೀಯ ಪರಿಸ್ಥಿತಿಯಿಂದ ಎದುರಾಗಬಹುದಾದ ಆರ್ಥಿಕ ಹೊಡೆತಗಳನ್ನು ತಡೆಯಲು ಜಗತ್ತಿನ ಅನೇಕ ದೇಶಗಳು ವಿಶೇಷವಾಗಿ ಭಾರತ ಮತ್ತು ಚೀನಾ ಸ್ಪರ್ಧೆಗೆ ಬಿದ್ದವರಂತೆ ಚಿನ್ನ ಖರೀದಿಸುತ್ತಿವೆ. ಚೀನಿ ಸರಕಾರವು ದೇಶದ ಆರ್ಥಿಕತೆಯ ಸ್ಥಿರತೆಗಾಗಿ, ದೇಶದ ಆರ್ಥಿಕತೆ ಮತ್ತು ರಾಜಕೀಯದ ಮೇಲೆ ಅಮೇರಿಕವು ಹಿಡಿತ ಸಾಧಿಸದಂತೆ ಡಾಲರ್ ಮೇಲೆ ಅತಿಯಾದ ಅವಲಂಬನೆ ತಪ್ಪಿಸಲು ಚೀನಾ ಯತ್ನಿಸುತ್ತಿದೆ. ಅದೇ ರೀತಿ ಭವಿಷ್ಯದಲ್ಲಿ ಚೀನಾ, ಅಮೇರಿಕಾ ನಡುವಿನ ರಾಜತಾಂತ್ರಿಕ ಸಂಬಂಧ ಹದಗೆಡುವ ಸಾಧ್ಯತೆಗಳಿವೆ. ಇಂತಹ ಸಂದರ್ಭಗಳಲ್ಲಿ ಅಮೇರಿಕದ ಬ್ಯಾಂಕ್‌ಗಳಲ್ಲಿ ಬಿಲಿಯನ್ ಗಟ್ಟಲೆ ಡಾಲರ್‌ಗಳಿರುವ ಚೀನಿ ಸರಕಾರದ ಖಾತೆಗಳನ್ನು ಅಮೇರಿಕನ್ ಸರಕಾರ ಸ್ತಂಭನಗೊಳಿಸಿದಲ್ಲಿ ಚೀನಾ ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸಬೇಕಾದ ಸಾಧ್ಯತೆಗಳಿವೆ. ಇಂತಹ ಸಂಭಾವ್ಯತೆಗಳನ್ನು ಎದುರಿಸಲು ಚೀನಾದ ಪೀಪಲ್ಸ್ ಬ್ಯಾಂಕ್ ಆಫ್ ಚೀನಾ ಭಾರೀ ಪ್ರಮಾಣದಲ್ಲಿ ಚಿನ್ನ ಖರೀದಿಸುತ್ತಿದೆ. ಈ ಕಾರಣದಿಂದ ಚಿನ್ನದ ಬೆಲೆಯಲ್ಲಿ ಭಾರೀ ಏರಿಕೆಯಾಗುತ್ತಿದೆ. ಪ್ರಸ್ತುತ ಚೀನಾದ ರಾಷ್ಟ್ರೀಯ ಬ್ಯಾಂಕ್‌ನಲ್ಲಿ 2264 ಟನ್ ಮೀಸಲು ಚಿನ್ನವಿದೆ. ಇದು ಆ ದೇಶದ ವಿದೇಶಿ ವಿನಿಮಯ ಮೀಸಲಿನಲ್ಲಿ ಶೇ. 4.9 ರಷ್ಟಾಗಿದೆ. 2024 ರಲ್ಲಿ ಚೀನಾ ಇದುವರೆಗೆ 29 ಟನ್ ಚಿನ್ನ ಖರೀದಿಸಿದೆ. ಕಳೆದ ಹದಿನೆಂಟು ತಿಂಗಳಲ್ಲಿ ಚೀನಾದ ಬ್ಯಾಂಕ್‌ನಲ್ಲಿ ಚಿನ್ನದ ಪ್ರಮಾಣವು 316 ಟನ್ ಅಂದರೆ ಶೇ. 16 ರಷ್ಟು ಏರಿಕೆಯನ್ನು ದಾಖಲಿಸಿದೆ.

ಇತ್ತೀಚಿನ ವರ್ಷಗಳಲ್ಲಿ ಭಾರತವು ದೊಡ್ಡ ಪ್ರಮಾಣದಲ್ಲಿ ಚಿನ್ನ ಸಂಗ್ರಹಿಸುತ್ತಿದೆ. ಚೀನಾ ಯಾತಕ್ಕಾಗಿ ಚಿನ್ನ ಸಂಗ್ರಹಿಸುತ್ತಿದೆಯೋ ಅದೇ ಉದ್ದೇಶಗಳಿಗಾಗಿ ಭಾರತವು ಚಿನ್ನ ಖರೀದಿಸುತ್ತಿದೆ. ಹದಿನೈದು ವರ್ಷಗಳ ಹಿಂದೆ 2009 ರಲ್ಲಿ ಪ್ರಧಾನಿ ಮನಮೋಹನ್ ಸಿಂಗ್‌ರ ಸಮಯದಲ್ಲಿ ಐಎಂಎಫ್‌ನಿಂದ ಭಾರತೀಯ ರಿಸರ್ವ್ ಬ್ಯಾಂಕ್ 200 ಟನ್ ಚಿನ್ನ ಖರೀದಿಸುವುದರೊಂದಿಗೆ ಆರ್‌ಬಿಐ 557 ಟನ್ ಚಿನ್ನ ಹೊಂದಿತ್ತು. ಕಳೆದ 65 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ಆರ್‌ಬಿಐ ಮಾಡಿದ ಚಿನ್ನದ ದಾಸ್ತಾನಿನ ಪ್ರಮಾಣವಾಗಿತ್ತು. ಪ್ರಧಾನಿ ಮೋದಿಯವರು ಅಧಿಕಾರಕ್ಕೆ ಬಂದ ನಂತರ ಚಿನ್ನ ಖರೀದಿ ಪ್ರಕ್ರಿಯೆಗೆ ಭಾರೀ ವೇಗ ದೊರೆತಿದೆ. ವಿಶ್ವ ಚಿನ್ನ ಕೌನ್ಸಿಲ್‌ನ (ಡಬ್ಲ್ಯುಜಿಸಿ) ವರದಿಯಂತೆ 2023 ರಲ್ಲಿ ಭಾರತವು ಹದಿನಾರು ಟನ್ ಚಿನ್ನ ಖರೀದಿಸಿತ್ತು. 2024ರ ಮೊದಲ ತ್ರೈಮಾಸಿಕದಲ್ಲಿ ಆರ್‌ಬಿಐ ಹತ್ತೊಂಬತ್ತು ಟನ್ ಚಿನ್ನ ಖರೀದಿಸಿದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಕಳೆದ ವರ್ಷ ಮಾರ್ಚ್‌ನಲ್ಲಿ ದೇಶದ ಬಳಿ 793.63 ಟನ್‌ಗಳಷ್ಟು ಚಿನ್ನದ ಸಂಗ್ರಹವಿತ್ತು. ಈ ವರ್ಷ ಮಾರ್ಚ್ 31ಕ್ಕೆ ಆರ್‌ಬಿಐ 822.1 ಟನ್ ಚಿನ್ನ ಹೊಂದಿದೆ. ಒಟ್ಟಾರೆಯಾಗಿ ಪ್ರಧಾನಿ ಮೋದಿಯವರ ಕಳೆದ ಹತ್ತು ವರ್ಷಗಳ ಆಡಳಿತಾವಧಿಯಲ್ಲಿ ದೇಶವು ಸುಮಾರು 265 ಟನ್ ಚಿನ್ನ ಖರೀದಿಸಿದೆ. ಇದರ ಪರಿಣಾಮ ದೇಶದ ಕರೆನ್ಸಿ ರೂಪಾಯಿಯ ಮೌಲ್ಯ ಸ್ಥಿರವಾಗಿದ್ದು, ಶಕ್ತಿಶಾಲಿಯಾಗಿದೆ. ದೇಶವು ಡಾಲರ್ ಮೇಲಿನ ಅವಲಂಬನೆ ಕಡಿಮೆ ಮಾಡುತ್ತಿದೆ. ದೇಶಕ್ಕೆ ಗೌರವದ ವಿಚಾರವೆಂದರೆ ಡಾಲರ್‌ನಂತೆ ಭಾರತದ ರೂಪಾಯಿಯನ್ನು ಜಗತ್ತಿನ ಸುಮಾರು 26 ದೇಶಗಳು ವಿನಿಮಯ ಕರೆನ್ಸಿಯಾಗಿ ಸ್ವೀಕರಿಸಿವೆ. ಇರಾನ್, ರಷ್ಯಾಗಳು ಭಾರತದೊಂದಿಗೆ ರೂಪಾಯಿಯಲ್ಲಿ ವ್ಯವಹರಿಸಲು ಒಪ್ಪಿಗೆ ನೀಡಿವೆ.

ವಿದೇಶಗಳಲ್ಲಿರುವ ಚಿನ್ನವನ್ನು ದೇಶಕ್ಕೆ ತರುತ್ತಿರುವ ಆರ್‌ಬಿಐ

ಭಾರತೀಯ ರಿಸರ್ವ್ ಬ್ಯಾಂಕ್ ವಿದೇಶಿ ಬ್ಯಾಂಕ್‌ಗಳಲ್ಲಿ ಇಟ್ಟಿರುವ ಚಿನ್ನವನ್ನು ದೇಶಕ್ಕೆ ಮತ್ತೆ ತರುವ ಪ್ರಕ್ರಿಯೆಯನ್ನು ತೀವ್ರಗೊಳಿಸಿದೆ. 1991 ರಲ್ಲಿ ವಿದೇಶಗಳಿಂದ ಸಾಲ ಪಡೆಯಲು ಇಂಗ್ಲೆಂಡ್‌ನ ಬ್ಯಾಂಕ್‌ಗಳಲ್ಲಿ ಪೂರಕ ಭದ್ರತಾ ರೂಪದಲ್ಲಿರಿಸಿದ್ದ ಒಂದು ಲಕ್ಷ ಕೆಜಿಯಷ್ಟು ಚಿನ್ನವನ್ನು (100 ಟನ್) ಈ ವರ್ಷದ ಮೇ ತಿಂಗಳಲ್ಲಿ ಆರ್‌ಬಿಐ ಮರಳಿ ತಂದಿದೆ. ಈ ಮೂಲಕ ದೇಶದ ಖಜಾನೆಯ ಮೌಲ್ಯದಲ್ಲಿ ಹೆಚ್ಚಳವಾಗಿದೆ. ಇತ್ತೀಚಿನ ಮಾಹಿತಿಯಂತೆ ಮಾರ್ಚ್ 31 ರಂದು ಆರ್‌ಬಿಐ ಬಳಿ ಇರುವ 822.1 ಟನ್‌ನಲ್ಲಿ 413.8 ಟನ್ ಚಿನ್ನ ವಿದೇಶಗಳಲ್ಲಿ ಇದೆ. ಈ ದಾಸ್ತಾನು ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಬ್ಯಾಂಕ್ ಆಫ್ ಇಂಟರ್‌ನ್ಯಾಷನಲ್ ಸೆಂಟಲ್‌ಮೆಂಟ್‌ಗಳ ವಶದಲ್ಲಿದೆ. ಭಾರತವು ಚಿನ್ನವನ್ನು ವಿದೇಶಿ ಪಾವತಿ ಬಾಕಿ ಸುಸ್ತಿಯಾಗುವುದನ್ನು ತಪ್ಪಿಸಲು ಹಾಗೂ ವ್ಯೂಹಾತ್ಮಕ ಸಾಗಾಟ ಬೆಂಬಲ ಮತ್ತು ಭದ್ರತಾ ಉದ್ದೇಶಕ್ಕೆ ವಿದೇಶಿ ಬ್ಯಾಂಕ್‌ಗಳಲ್ಲಿ ದಾಸ್ತಾನು ಮಾಡಿದೆ. ಮೇ ತಿಂಗಳಲ್ಲಿ ತರಲಾದ ಒಂದು ನೂರು ಟನ್ ಚಿನ್ನದಿಂದ ವಿದೇಶಗಳಲ್ಲಿರುವ ಚಿನ್ನದ ಮೀಸಲು ಪ್ರಮಾಣ ಶೇ. 47ಕ್ಕೆ ಇಳಿಕೆಯಾಗಿದೆ. ಭಾರತವೀಗ ದೇಶದೊಳಗೆ ಸಾಕಷ್ಟು ಚಿನ್ನವನ್ನು ದಾಸ್ತಾನು ಮಾಡುವ ಸಾಮರ್ಥ್ಯ ಗಳಿಸಿಕೊಂಡಿದೆ. ಮೇ ತಿಂಗಳಲ್ಲಿ ತರಲಾದ ಚಿನ್ನವನ್ನು ಮುಂಬೈಯಲ್ಲಿರುವ ಆರ್‌ಬಿಐ ಹಳೆಯ ಕಚೇರಿ ಕಟ್ಟಡ ಹಾಗೂ ನಾಗಪುರಗಳಲ್ಲಿ ಸುರಕ್ಷಿತವಾಗಿ ಇಡಲಾಗಿದೆ.

ಭಾರತ ಏತಕ್ಕಾಗಿ ಚಿನ್ನವನ್ನು ಮರಳಿ ತರುತ್ತಿದೆ?

ಬ್ಯಾಂಕ್ ಆಫ್ ಇಂಗ್ಲೆಂಡ್‌ನಲ್ಲಿ ಚಿನ್ನವನ್ನಿಡಲು ಆರ್‌ಬಿಐ ಆ ಬ್ಯಾಂಕ್‌ಗೆ ಭಾರಿ ಮೊತ್ತದ ಭದ್ರತಾ ಮತ್ತು ದಾಸ್ತಾನು ಶುಲ್ಕ ನೀಡಬೇಕಾಗಿದೆ. ಚಿನ್ನ ವಾಪಾಸು ತಂದಿರುವುದರಿಂದ ದೇಶಕ್ಕೆ ಶುಲ್ಕ ಉಳಿತಾಯವಾಗಿದೆ. ರಷ್ಯಾ-ಯುಕ್ರೇನ್ ಯುದ್ಧದಿಂದ ಅಮೇರಿಕ, ಇ.ಯು ದೇಶಗಳು ರಷ್ಯಾ ಮೇಲೆ ನೂರಾರು ನಿರ್ಬಂಧಗಳನ್ನು ವಿಧಿಸಿದೆ. ಯೂರೋಪ್ ಹಾಗೂ ಅಮೇರಿಕದ ಸರಕಾರಗಳು ರಷ್ಯಾದ ಸುಮಾರು 300 ಬಿಲಿಯನ್ ಡಾಲರ್ ಮೌಲ್ಯದ ವಿದೇಶಿ ವಿನಿಮಯ ಕರೆನ್ಸಿ ಆಸ್ತಿಗಳನ್ನು ಸ್ತಂಭನಗೊಳಿಸಿವೆ. ಆದರೆ ರಷ್ಯಾದ ಆರ್ಥಿಕತೆ ಸ್ಥಿರವಾಗಿರಲು ಕಾರಣ ಅದರ ಬಳಿ ಇರುವ ತೈಲ ನಿಕ್ಷೇಪ ಹಾಗೂ ತನ್ನ ಬ್ಯಾಂಕ್‌ನಲ್ಲೇ ಇರಿಸಿಕೊಂಡಿರುವ ಸುಮಾರು 2332 ಟನ್ ಚಿನ್ನ. ಇವುಗಳ ಬಲದಿಂದ ಪೂರ್ವ ದೇಶಗಳೊಂದಿಗೆ ವ್ಯಾಪಾರ ವೃದ್ಧಿಸಿತು. ಭಾರತವು ರಷ್ಯಾಕ್ಕೆ ನೀಡಿದ ದೃಢವಾದ ಬೆಂಬಲ ವರದಾನವಾಯಿತು. ಭಾರತವು ರಷ್ಯಾದಿಂದ ತೈಲ ತರಿಸಿ ಜಗತ್ತಿಗೆ ರಫ್ತು ಮಾಡಿ ರಷ್ಯಾ ಆರ್ಥಿಕತೆಯನ್ನು ಉಳಿಸಿತು. ಇರಾನ್ ಮೇಲೆ ಹಾಕಿರುವ ನೂರಾರು ನಿರ್ಬಂಧಗಳಿಂದ ಆರ್ಥಿಕವಾಗಿ ತೀವ್ರ ಸಮಸ್ಯೆಯಲ್ಲಿದೆ. ಇದರಿಂದ ಹೊರ ಬರಲು ವಿದೇಶಿ ಬ್ಯಾಂಕ್‌ಗಳಲ್ಲಿದ್ದ ತನ್ನ ಚಿನ್ನದ ದಾಸ್ತಾನನ್ನು ವಾಪಾಸು ನೀಡುವ ಪ್ರಸ್ತಾಪ ಮಾಡಿತು. ಆದರೆ ನಿಮ್ಮ ಮೇಲೆ ನಿರ್ಬಂಧ ವಿಧಿಸಲಾಗಿದೆ. ಆದ್ದರಿಂದ ಚಿನ್ನ ನಿಮ್ಮದೇ ಆದರೂ ನಾವು ಕೊಡೋದಿಲ್ಲ ಎಂದು ನಿರ್ದಾಕ್ಷಿಣ್ಯವಾಗಿ ಈ ಬ್ಯಾಂಕ್‌ಗಳು ಇರಾನ್ ಪ್ರಸ್ತಾಪವನ್ನು ತಿರಸ್ಕರಿಸಿದವು. ಕೆಲವೇ ವರ್ಷಗಳ ಹಿಂದೆ ಶ್ರೀಮಂತವಾಗಿದ್ದ ಮಧ್ಯ ಅಮೇರಿಕ ಖಂಡದ ವೆನೆಜುವೆಲಾ ಎಂಬ ದೇಶದ ರಾಜಕಾರಣಿಗಳು ಕರ್ನಾಟಕಕ್ಕಿಂತ ಹೆಚ್ಚಾಗಿ ಎಲ್ಲವನ್ನೂ ಉಚಿತವಾಗಿ ನೀಡಿದ್ದರಿಂದ ಇಂದು ದಿವಾಳಿಯಾಗಿದೆ. ಇತ್ತೀಚೆಗೆ ಅಲ್ಲಿ ನಡೆದ ಚುನಾವಣೆಯಲ್ಲಿ ನಿಕೋಲಸ್ ಮಡುರೊ ಅಧ್ಯಕ್ಷರಾಗಿ ಆಯ್ಕೆಯಾದರು. ದೇಶದ ಪರಿಸ್ಥಿತಿ ಸುಧಾರಿಸಲು ಬ್ಯಾಂಕ್ ಆಫ್ ಇಂಗ್ಲೆಂಡ್‌ನಲ್ಲಿದ್ದ ಚಿನ್ನವನ್ನು ಮರಳಿಸಬೇಕೆಂದು ಪ್ರಸ್ತಾಪ ನೀಡಿದರು. ಬ್ಯಾಂಕ್ ಚಿನ್ನ ನೀಡಲು ನಿರಾಕರಿಸಿದಾಗ ಮಡುರೊರವರು ಇಂಗ್ಲೆಂಡ್‌ನ ನ್ಯಾಯಾಲಯದ ಮೊರೆ ಹೊಕ್ಕರು. ಆದರೆ ಇಂಗ್ಲೆಂಡ್‌ನ ನ್ಯಾಯಾಲಯ ವಿಚಿತ್ರವಾದ ತೀರ್ಪು ನೀಡಿತು. ನಾವು ಮಡುರೋರನ್ನು ವೆನೆಜುವೆಲಾ ಅಧ್ಯಕ್ಷರಾಗಿ ಮಾನ್ಯತೆ ನೀಡಿಲ್ಲ. ಸೋತ ಜಾನ್‌ಗ್ವೈಡೋ ಅವರು ಪ್ರಸ್ತಾಪ ಸಲ್ಲಿಸಿದರೆ ಮಾತ್ರ ಪರಿಶೀಲಿಸಬಹುದು ಎಂದಿತು. ಇಂದಿನವರೆಗೆ ಬ್ಯಾಂಕ್ ಆಫ್ ಇಂಗ್ಲೆಂಡ್ ವೆನೆಜುವೆಲಾಕ್ಕೆ ಅವರದೇ ಸ್ವಂತ ಚಿನ್ನ ನೀಡದೇ ಧೂರ್ತತೆ ತೋರಿದೆ. ಲಿಬಿಯಾದ ಅಧ್ಯಕ್ಷ ಗಡಾಫಿ ಹತ್ಯೆಯ ನಂತರ ಯೂರೋಪಿಯನ್ ದೇಶಗಳ ಬ್ಯಾಂಕ್‌ಗಳು ತಮ್ಮಲ್ಲಿರುವ ಆ ದೇಶದ ಸುಮಾರು 146 ಟನ್ ಚಿನ್ನವನ್ನು ಮರಳಿ ನೀಡಲು ನಿರಾಕರಿಸಿವೆ.

ಜಗತ್ತಿನ ದೊಡ್ಡಣ್ಣ ಅಮೇರಿಕವು ಸಾಲವೆಂಬ ಜ್ವಾಲಾಮುಖಿಯ ಮೇಲೆ ಕೂತಿದೆ. ಅಮೇರಿಕಾದ ಜಿಡಿಪಿ 28 ಟ್ರಿಲಿಯನ್ ಡಾಲರ್ ಮೀರಿ ಸಾಲವು 35 ಟ್ರಿಲಿಯನ್ ಡಾಲರ್ ಇದೆ. ಈ ವರ್ಷ ಅಮೇರಿಕವು ಪಾವತಿಸಿರುವ ಬಡ್ಡಿ 870 ಬಿಲಿಯನ್ ಡಾಲರ್. ಸಾಲದ ಪರಿಸ್ಥಿತಿ ಇದೇ ರೀತಿ ಮುಂದುವರಿದಲ್ಲಿ ಅಮೇರಿಕ ಭಾರೀ ಆರ್ಥಿಕ ಬಿಕ್ಕಟ್ಟು ಎದುರಿಸಬೇಕಾಗಬಹುದು. ಇಂತಹ ಸಂದರ್ಭಗಳಲ್ಲಿ ಅಮೇರಿಕವು ತನ್ನ ದೇಶದ ಬ್ಯಾಂಕ್‌ಗಳಲ್ಲಿ ಸುರಕ್ಷಾ ದೃಷ್ಟಿಯಿಂದ ಜಗತ್ತಿನ ಹತ್ತಾರು ದೇಶಗಳು ಇಟ್ಟಿರುವ ಚಿನ್ನದ ದಾಸ್ತಾನನ್ನು, ಭದ್ರತಾ ಬಾಂಡ್‌ಗಳನ್ನು ವಾಪಾಸು ನೀಡಲು ನಿರಾಕರಿಸಬಹುದು. ಅಂತಹ ಪರಿಸ್ಥಿತಿ ಎದುರಾದರೆ ಆ ದೇಶಗಳು ತಮ್ಮ ಸಂಪತ್ತನ್ನು ಕಳೆದುಕೊಳ್ಳಬೇಕಾಗಬಹುದು.

ಭಾರತವನ್ನು ಸುಮಾರು 350 ವರ್ಷಗಳ ಕಾಲ ಇಂಗ್ಲೆಂಡ್ ಲೂಟಿ ಹೊಡೆಯಿತು. ಈಗಲೂ ಆ ದೇಶದ ಸ್ವಭಾವ ಅದೇ ರೀತಿ ಇದೆ. ಭವಿಷ್ಯದಲ್ಲಿ ಇಂಗ್ಲೆಂಡ್‌ನಲ್ಲಿರುವ ಚಿನ್ನ ವಾಪಾಸು ಪಡೆಯಲು ನಿರ್ಧರಿಸಿ ಪ್ರಸ್ತಾವನೆ ಸಲ್ಲಿಸಿದರೆ, ಆ ದೇಶ ನಿರಾಕರಿಸಿದರೆ ಆಶ್ಚರ್ಯವಿಲ್ಲ. ಆದ್ದರಿಂದ ಇಂತಹ ಸಾಧ್ಯತೆಗಳಿಗೆ ಅವಕಾಶ ನೀಡದಂತೆ ವಿದೇಶಗಳಲ್ಲಿರುವ ದೇಶದ ಸಂಪತ್ತನ್ನು ವಾಪಾಸು ತರುವ ಸ್ತುತ್ಯಾರ್ಹ ಉಪಕ್ರಮವನ್ನು ಮೋದಿ ಸರಕಾರ ಆರಂಭಿಸಿದೆ.

ಕರ್ನಾಟಕ ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಲಡಾಕ್ ಕೇಂದ್ರಾಡಳಿತಕ್ಕೆ ಭೇಟಿ

ಮೈಸೂರು ಒಡನಾಟ ನೆನದ ಲೆಫ್ಟಿನೆಂಟ್ ಗವರ್ನರ್ ಬ್ರಿಗೇಡಿಯರ್ ಡಾ.ಬಿ.ಡಿ.ಶರ್ಮಾ

ಬೆಂಗಳೂರು, ಜು.5– ಅಧ್ಯಯನ ಪ್ರವಾಸದಲ್ಲಿರುವ ಕರ್ನಾಟಕ ವಿಧಾನಮಂಡಲದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯು ಲಡಾಖ್ ಕೇಂದ್ರಾಡಳಿತ ಪ್ರದೇಶದ ಲೆಫ್ಟಿನೆಂಟ್ ಗವರ್ನರ್ ಬ್ರಿಗೇಡಿಯರ್ ಡಾ.ಬಿ.ಡಿ. ಶರ್ಮಾ ಅವರನ್ನು 'ರಾಜ್ ನಿವಾಸ್'ನಲ್ಲಿ ಶುಕ್ರವಾರ ಭೇಟಿ ಮಾಡಿತು.

ಸಮಿತಿಯ ಅಧ್ಯಕ್ಷ ಸಿ.ಸಿ.ಪಾಟೀಲ್ ಸಮಿತಿಯ ಕಾರ್ಯ ಚಟುವಟಿಕೆಗಳ ಬಗ್ಗೆ ವಿಸ್ತತವಾಗಿ ವಿವರಿಸಿದರು. ಈ ವೇಳೆ ಲೆಫ್ಟಿನೆಂಟ್ ಗವರ್ನರ್ ಶರ್ಮಾ ಅವರು ಬ್ರಿಗೇಡಿಯರ್ ಆಗಿದ್ದಾಗ ಮೈಸೂರು ಸಂಸ್ಥಾನದಲ್ಲಿ ಕಾರ್ಯ ನಿರ್ವಹಿಸಿದ್ದು, ಮೈಸೂರು ಮಹಾಸಂಸ್ಥಾನದೊಂದಿಗಿನ ಒಡನಾಟದ ಬಗ್ಗೆ ಹಂಚಿಕೊಂಡರು.



ಲಡಾಖ್ ಕೇಂದ್ರಾಡಳಿತ ಪ್ರದೇಶದ ಲೆಫ್ಟಿನೆಂಟ್ ಗವರ್ನರ್ ಬ್ರಿಗೇಡಿಯರ್ ಡಾ.ಬಿ.ಡಿ.ಶರ್ಮಾ ಅವರು ಕರ್ನಾಟಕ ವಿಧಾನಮಂಡಲದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ಸದಸ್ಯ ಜಿ.ಟಿ.ದೇವೇಗೌಡರಿಗೆ ಉಡುಗೊರೆ ನೀಡುತ್ತಿರುವುದು.

ಲೆಫ್ಟಿನೆಂಟ್ ಗವರ್ನರ್ ಸಲಹೆಗಾರ ಡಾ.ಪವನ್ ಕೊತ್ವಾಲ್, ಲಡಾಖ್ ಕೇಂದ್ರಾಡಳಿತ ಪ್ರದೇಶದ ಕಾರ್ಯ ಚಟುವಟಿಕೆ, ಆರ್ಥಿಕ ಪರಿಸ್ಥಿತಿ, ಆರೋಗ್ಯ, ಶಿಕ್ಷಣ ಕ್ಷೇತ್ರಕ್ಕೆ ನೀಡುತ್ತಿರುವ ಪ್ರೋತ್ಸಾಹದ ಬಗ್ಗೆ ವಿವರಿಸಿದರು. ಡಿಜಿಪಿ ಡಾ. ಎಸ್.ಡಿ.ಸಿಂಗ್ ಜಂವಾಲ್ ಅಲ್ಲಿನ ಕಾನೂನು ಸುವ್ಯವಸ್ಥೆ ಬಗ್ಗೆ ತಿಳಿಸಿದರು.

ಈ ಸಂದರ್ಭದಲ್ಲಿ ಸಮಿತಿ ಸದಸ್ಯರಾದ ಜಿ.ಟಿ.ದೇವೇಗೌಡ, ಲಕ್ಷ್ಮಣ ಸಂಗಪ್ಪ ಸವದಿ, ಗುಬ್ಬಿ ಶ್ರೀನಿವಾಸ್, ಹೆಚ್.ಸಿ.ಬಾಲಕೃಷ್ಣ, ಎಸ್.ಆರ್. ವಿಶ್ವನಾಥ್, ಬಿ.ಕೆ.ಹರಿಪ್ರಸಾದ್, ರಾಘವೇಂದ್ರ ಹಿಟ್ನಾಳ್, ಸುರೇಶ್ ಗೌಡ, ಶೀಲ್ ನಮೋಶಿ, ಶರಮಾ, ಪ್ರತಾಪ್ ಸಿಂಹ ನಾಯಕ್, ಉಪ ಕಾರ್ಯದರ್ಶಿ ಶ್ರೀನಿಧಿ, ಅಧೀನ ಕಾರ್ಯದರ್ಶಿ ಬಾಲ ಸುಬ್ರಮಣ್ಯ, ಶಾಖಾಧಿಕಾರಿ ಗಂಗಾಧರ್ ಹಾಜರಿದ್ದರು.

ಸಚಿವರಿಗೆ ಅಭಿನಂದನೆ...



ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜ್ ಅವರನ್ನು ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಮಾಜಿ ಮೇಯರ್ ಬಿ.ಕೆ.ಪ್ರಕಾಶ್, ಕೆಪಿಸಿಸಿ ವಕ್ತಾರ ಹೆಚ್.ಎ. ವೆಂಕಟೇಶ್, ಕಾಂಗ್ರೆಸ್ ಮುಖಂಡರಾದ ಭಾಸ್ಕರ್ ಎಲ್.ಗೌಡ, ಎನ್.ಎಸ್.ಗೋಪಿನಾಥ್ ಮತ್ತಿತರರು ಅಭಿನಂದಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 2496522/23

SITE FOR SALE
MUDA Khata,
East Facing Corner
Site, 35 Lacs
8.7 mtr x 12 Mtrs
9342123373

HOUSE FOR RENT
2BHK, East Facing,
FF, Car Parking,
Jayalakshmipuram
Vijayanagara Area,
COOK WANTED
9845293278

ಬೇಕಾಗಿದ್ದಾರೆ
ಶ್ರೀ ಸರ್ವಿಸ್ ಸ್ಟೇಷನ್ ಪೆಟ್ರೋಲ್ ಬಂಕ್ ಅಲ್ಲಿ ಪಂಪ್ ಕ್ಯಾಷಿಯರ್ ಹುದ್ದೆಗೆ ಮಹಿಳೆಯರು ಬೇಕಾಗಿದ್ದಾರೆ. ಅನುಭವಿಗಳಿಗೆ ಮೊದಲ ಆದ್ಯತೆ.
ಸರಸ್ವತಿಪುರಂ, ಮೈಸೂರು
9880567272

SITE FOR SALE
#179, NORTH WEST
CORNER, BVL LAYOUT ,
T NARASIPURA ROAD,
MYSURU
E-W 8.5 X N-S 11.16 mtrs
CONTACT :
9902434877

BEAUTY PARLOUR
For Rent /
Sale in Prime
Location in
Kuvempunagar
9880402729

SITES for SALE
JP Nagar Ring Road
30x40
33 Lakhs
Near Gurur Bus Stop,
Ramabainagar,Mysore.
DTCP approved (Corporation limits)
1.5 Kms from JP Nagar Ring Road
8660105902

ಪ್ರಧಾನ ಅರ್ಚಕರು ಬೇಕಾಗಿದ್ದಾರೆ
ಮೈಸೂರು ನಗರದ ಬೃಂದಾವನ ಬಡಾವಣೆಯಲ್ಲಿರುವ ಗಣಪತಿ ದೇವಾಲಯಕ್ಕೆ ಪ್ರಧಾನ ಅರ್ಚಕರು ಬೇಕಾಗಿದ್ದಾರೆ. ಅರ್ಹತೆ ಹಾಗೂ ಅನುಭವದ ಆಧಾರದ ಮೇಲೆ ಪರಿಗಣಿಸಲಾಗುವುದು. ಆಸಕ್ತರು ಬೆಳಗ್ಗೆ 9.00ರಿಂದ ಸಂಜೆ 6.00 ಗಂಟೆಯವರೆಗೆ ಕೆಳಕಂಡ ದೂರವಾಣಿಯನ್ನು ಸಂಪರ್ಕಿಸಿ.
9845074871

ಬೇಕಾಗಿದ್ದಾರೆ
ಕೆಲಸಕ್ಕೆ ಜನ ಬೇಕಾಗಿದ್ದಾರೆ ಪ್ರತಿಷ್ಠಿತ ಕಂಪನಿಯಾದ ಮ್ಯಾಕ್ಡೊನಾಲ್ಡ್ಸ್ ಜೆಎಲ್‌ಬಿ ರಸ್ತೆ, ಕಾಳಿದಾಸ ರೋಡ್, ಮೈಸೂರು ಫೋರಂ ಮಾಲ್.
ಸಂಬಳ: 13000–14500
ವಯಸ್ಸು : 18 ರಿಂದ 28
8105607961
9035685914

SITE FOR SALE
20X30
E/F & W/F
IN BANNUR ROAD
8792207164
6361799533

ಸುವರ್ಣ ಯಾತ್ರ
1. ನೇಪಾಳ ಪ್ರವಾಸ ಒಂಭತ್ತು ದಿನಗಳು ಮುಕ್ತಿನಾಥ ಪಶುಪತಿನಾಥ ಕಠ್ಮಂಡು – 27–7–24
2) ಗುಜರಾತ್ ಪ್ರವಾಸ – ಎರಡು ಜ್ಯೋತಿರ್ಲಿಂಗ ಸೇರಿ 8 ದಿನಗಳು– 18–7–24
3. ಕಾಶಿ ಅಯೋಧ್ಯ ಪ್ರವಾಸ 7 ದಿನಗಳು 23–7–24 ಹಾಗೂ 1–08–24
9480843945
8660233673

ಸಂಪು
ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

100% TEAK WOOD
FACTORY FINISH
DOORS & FRAMES
@ FACTORY DEPOT RATES

10 YEARS WARRANTY*
9901291267
9731591267

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

CHANGE OF NAME
I, NAGEVENI M. W/o C V Manohar residing at No.435, 1st Stage, Vishweshwaranagar, Mysore - 570008 have changed my name from NAGEVENI M. to C. KAVYA MANOHAR vide affidavit sworn before Notary C R Seetharam, Mysore dated 05-07-2024

ಸೈಟ್ ಮಾರಾಟಕ್ಕಿದೆ
ಅಳತೆ 60x60 ಪೂರ್ವ ಮತ್ತು ಉತ್ತರ ಕಾರ್ನರ್ ಸೈಟ್ ನಂ. 179, ಮುಡಾ ಅಪ್ರೂವ್ಡ್ ಕ್ರೀಷಾ ಲೇಔಟ್ ಇಲವಾಲ ಮೇನ್ ರೋಡ್
Rate Sqft 2800/-
9964958335
9632329036

ಸೈಟುಗಳು ಮಾರಾಟಕ್ಕಿವೆ
ಇಲವಾಲ ನಂತರ,
ಹುಣಸೂರು ರಸ್ತೆ, ಮೈಸೂರು.
ಅಳತೆಗಳು 30x40
Ready for Rigistration
& EMI ದೊರೆಯುತ್ತದೆ
9880774395

ಸಂಪು
ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

HOUSE FOR SALE
30'X40'
HEBBAL RING ROAD
KIADB LAYOUT
Ground Floor - PARKING + 1BHK
1st Floor - 2 BHK
2nd Floor - 2 BHK DUPLEX
Behind Bharat Petrol Bunk
8618213845 | 7795448940

SITES FOR SALE
MUDA Approved
50mtr from
Alanahalli Ring
Road MYSURU
9482195111

FOR SALE
1. 20x30, 30x40, Sites @ Bogadi, Rainbow School
2. 18x40 Site in Kuvempu Ngr
3. 2&3 BHK Flats at RK Nagar
4. 70x140 Farm House Plots @ KRS Back Water Attach 20L
5. 50x30 Site@Saraswathi Puram Semi Commercial
6. 20x30, Sites For Sale At Yelwala
30x40 Sites attached to Brahmins Lyt
PRAKRUTHI PROPERTIES
95386 90359, 90359 90359

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಮಾರುವವರು ಕೊಳ್ಳುವವರು
15X30, 18X40,
20X30 ಕುವೆಂಪುನಗರ
20X45 ಶಾರದಾದೇವಿನಗರ
30X40 ಶ್ರೀರಾಂಪುರ. 40X60
ಹಳೆ ಮನೆ ಹೊಸ ಮನೆ ಸೈಟ್ ಮಾರುವವರು ಕೊಳ್ಳುವವರು ಸಂಪರ್ಕಿಸಿ
8618495118

40x60 ಸೈಟ್ ಆದಿತ್ಯ ಸರ್ಕಲ್ ಹತ್ತಿರ, ದಟ್ಟಗಳ್ಳಿ 30x40 ಡ್ಯೂಪ್ಲೆಕ್ಸ್ ಹೊಸ ಮನೆ 4 Bed Floor ಆಲ್ ಟೀಕ್ ಇಂಟೀರಿಯರ್ ಕಿಚನ್ ವಾಸ್ತು ಪ್ರಕಾರವಾಗಿರುವ ಮನೆ ಶಾರದಾ ಪಬ್ಲಿಕ್ ಸ್ಕೂಲ್ ಹತ್ತಿರ 20x30 ಗ್ರೌಂಡ್ ಫ್ಲೋರ್ ಮತ್ತು ಫಸ್ಟ್ ಫ್ಲೋರ್ ಮನೆ ದಟ್ಟಗಳ್ಳಿ– 55 ಲಕ್ಷ
9945042875

ಪ್ರಸಿದ್ಧ ಕೇರಳ
ಶ್ರೀ ಭಗವತಿ ಜ್ಯೋತಿಷ್ಯರು
ಪಂ॥ ಕುಮಾರ್ ಪ್ರಸಾದ್ ಗುರೂಜಿ
Mob: 9731839596
ಸ್ತ್ರೀ–ಪುರುಷಪ್ರೇಮ, ಸಂತಾನ, ದಾಂಪತ್ಯ, ಸಮಸ್ಯೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ, ಅಷ್ಟಮಂಗಳ, ಪ್ರಶ್ನೆಯಿಂದ, ನೇರ ಉತ್ತರ ಹಾಗೂ ಶಾಶ್ವತ, ಪರಿಹಾರಕ್ಕಾಗಿ, ಚೋಟನಿಕರ, ಭಗವತಿ ತಾಯಿ, ರಾಜರಾಜೇಶ್ವರಿ, ಕುಟ್ಟಿಚೇತನ್, ಕೇರಳದ, ಮಾಂತ್ರಿಕ ಶಕ್ತಿಯಿಂದ, 2 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ಮನೆ ವಿಳಾಸ: ಲಕ್ಷ್ಮಿ ನಿವಾಸ ನಂ.19/D2, ಬುದ್ಧ ಮಾರ್ಗ, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ DC ಆಫೀಸ್ ಎದುರು, ಸಿದ್ಧಾರ್ಥ ಲೇಔಟ್, ಮೈಸೂರು

ಸಂಪು
ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಪ್ರದರ್ಶನಕಾರರು ಬೇಕಾಗಿದ್ದಾರೆ
ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಜಿಲ್ಲೆಯ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ನಮ್ಮ ಭಾರತ ಮಕ್ಕಳ ಚಲನಚಿತ್ರವನ್ನು ಪ್ರದರ್ಶನ ಮಾಡಲು ಹಂಚಿಕೆದಾರರು ಬೇಕಾಗಿದ್ದಾರೆ. ಚಿತ್ರವು ಅಂಗೀಕೃತವಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಕುಮಾರಸ್ವಾಮಿ, ನಿರ್ದೇಶಕರು
9448263260

SITE FOR SALE
NEW HOUSE READY
FOR REGISTRATION
35X50
30X50,
20X30 30X40
9945321020

ಸಂಪು
ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

Job Opening for Female
(Day Shift)
1) Telecalling
2) Data Entry Job
Salary Up to 15000 Rs. Plus Incentive Work Location : Hebbal 1st Stage Mysore
7338224174

ಬೇಕಾಗಿದೆ/ಮಾರಾಟಕ್ಕಿದೆ
ವಿಜಯನಗರ 3ನೇ ಹಂತ
60x40 ನಿವೇಶನ ಬೇಕಾಗಿದೆ
ಎನ್.ಆರ್.ಮೊಹಲ್ಲಾ
ಕರುಣಾಪುರ
68x36 ಸೈಟು ಮಾರಾಟಕ್ಕಿದೆ
9980611751

OFFICE SPACE FOR RENT
667/A, 1st Floor
Chitrabanu Road,
Kuvempunagar,
Mysore-570023
Area: Approx .520 Sqft
9901814202

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು
ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು, ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ
ರೂ.25,000 ಗಳಿಸಬಹುದು.
8884439666

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
10 years Guarantee
Bajaj Finserv Available
SUNZONE SOLAR SYSTEM
Vishwamanava Double Road,
Kuvempunagar, Mysuru
9845175443

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ
ಸಂಪು, ಟ್ಯಾಂಕ್ ಮತ್ತು ಸೋಲಾರ್
ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಶಿಕ್ಷಕರು ಬೇಕಾಗಿದ್ದಾರೆ
ಮೈಸೂರು ವಸತಿ ಶಾಲೆಯಲ್ಲಿ ಉಳಿದುಕೊಳ್ಳಲು ಸಿದ್ಧರಿರಬೇಕು
ವಿದ್ಯಾರ್ಹತೆ: PUC/BA, B.Ed. ವೇತನ: Rs.12000/-
+ಉಚಿತ ವಸತಿ+
ಸಸ್ಯಾಹಾರಿ ಊಟ
9341369901,7760222124
8088586087

SITE FOR SALE
BSNL LAYOUT
HANCHYA NEXT TO
MANASI NAGAR AND
Satagalli B Zone
30x40, West Face
Mysore East Properties
9916766389

ದಾಖಲಾತಿ ಕಳೆದಿದೆ
ಎ.ಎನ್. ನಾಗಮಣಿ, #1300, ಶ್ರೀ ನಿಲಯ, ಇಅಂಡ್‌ಎಫ್ ಬ್ಲಾಕ್, 8ನೇ ಕ್ರಾಸ್, ಅನಿಕೇತನ ರಸ್ತೆ, ಕುವೆಂಪುನಗರ, ಮೈಸೂರು, ನಾನು ದಿನಾಂಕ 13–6–2024 ರಂದು ಬ್ಯಾಂಕ್‌ಗೆ ಹೋಗುವಾಗ ನನ್ನ ಪೆನ್ಷನ್ ಸ್ಲಿಪ್ ಮೂಲ ಪ್ರತಿ PPO No. 232886 / RPR ಅನ್ನು ಕಳೆದುಕೊಂಡಿರುತ್ತೇನೆ. ಸಿಕ್ಕಿದವರು ಸಂಪರ್ಕಿಸಿ:
Mob: 9986641185

AFFIDAVIT
Mr. Rasool, whose father's name is Mahamed Imam Sab, but in passport his father's name was incorrectly mentioned as Mohammed Imam so now onwards his father's name is officially declared as Mahamed Imam Sab for passport purpose (Passport No. L6248990).
Sd/- Rasool

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ತುರಗನೂರು ಗ್ರಾಮದಲ್ಲಿ ವಾಸವಾಗಿರುವ ಸಹನ ಟಿ.ಎನ್. ಬಿನ್ ನಾಗರಾಜು ಪ್ರಮಾಣೀಕರಿಸುವುದೇನೆಂದರೆ, ನನ್ನ ಹೆಸರು ನನ್ನ ಆಧಾರ್ ಕಾರ್ಡ್ (ನಂ. 3628 6496 4131) ಮತ್ತು ಇತರೆ ಎಲ್ಲಾ ದಾಖಲಾತಿಗಳಲ್ಲಿ ನನ್ನ ಹೆಸರು ಸಹನ ಟಿ.ಎನ್. (Sahana T.N.) ಎಂದು ನಮೂದಾಗಿರುತ್ತದೆ. ಆದರೆ ಬನ್ನೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನಲ್ಲಿರುವ ಖಾತೆಯಲ್ಲಿ (ಖಾತೆ ಸಂಖ್ಯೆ 64039696363) ನನ್ನ ಹೆಸರು Sahana ಎಂಬುದಾಗಿ ನಮೂದಾಗಿರುತ್ತದೆ. ಸದರಿ ಖಾತೆಯಲ್ಲಿ ನಮೂದಾಗಿರುವ ನನ್ನ ಹೆಸರು Sahana ಎಂಬುದನ್ನು ತೆಗೆ, ನನ್ನ ದಾಖಲಾತಿಗಳಂತೆ ಸಹನ ಟಿ.ಎನ್. (Sahana T.N.) ಎಂದು ತಿದ್ದುಪಡಿ ಮಾಡಿಕೊಳ್ಳಲು ಈ ಪ್ರಮಾಣ ಪತ್ರದ ಮೂಲಕ ನೋಟರಿ ಸಿದ್ದಪ್ಪಾಜಿ ರವರು ಎದುರು ಪ್ರಮಾಣೀಕರಿಸುತ್ತೇನೆ.
ಸಹಿ/– Sahana T.N.

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ತುರಗನೂರು ಗ್ರಾಮದಲ್ಲಿ ವಾಸವಾಗಿರುವ ಲಕ್ಷ್ಮೀ ಟಿ.ಎಸ್. ಬಿನ್ ಸಿದ್ದಪ್ಪ ಪ್ರಮಾಣೀಕರಿಸುವುದೇನೆಂದರೆ, ನನ್ನ ಹೆಸರು ನನ್ನ ಆಧಾರ್ ಕಾರ್ಡ್ (ನಂ. 7953 2779 0290) ಮತ್ತು ಇತರೆ ಎಲ್ಲಾ ದಾಖಲಾತಿಗಳಲ್ಲಿ ನನ್ನ ಹೆಸರು ಲಕ್ಷ್ಮೀ ಟಿ.ಎಸ್. (Lakshmi T.S.) ಎಂದು ನಮೂದಾಗಿರುತ್ತದೆ. ಆದರೆ ಬನ್ನೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನಲ್ಲಿರುವ ಖಾತೆಯಲ್ಲಿ (ಖಾತೆ ಸಂಖ್ಯೆ 64040126316) ನನ್ನ ಹೆಸರು Lakshmi ಎಂಬುದಾಗಿ ನಮೂದಾಗಿರುತ್ತದೆ. ಸದರಿ ಖಾತೆಯಲ್ಲಿ ನಮೂದಾಗಿರುವ ನನ್ನ ಹೆಸರು Lakshmi ಎಂಬುದನ್ನು ತೆಗೆ, ನನ್ನ ದಾಖಲಾತಿಗಳಂತೆ ಲಕ್ಷ್ಮೀ ಟಿ.ಎಸ್. (Lakshmi T.S.) ಎಂದು ತಿದ್ದುಪಡಿ ಮಾಡಿಕೊಳ್ಳಲು ಈ ಪ್ರಮಾಣ ಪತ್ರದ ಮೂಲಕ ನೋಟರಿ ಸಿದ್ದಪ್ಪಾಜಿ ರವರು ಎದುರು ಪ್ರಮಾಣೀಕರಿಸುತ್ತೇನೆ.
ಸಹಿ/– Lakshmi T.S.

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ತುರಗನೂರು ಗ್ರಾಮದಲ್ಲಿ ವಾಸವಾಗಿರುವ ಕೀರ್ತನ ಎನ್. ಬಿನ್ ನಾಗರಾಜು ಪ್ರಮಾಣೀಕರಿಸುವುದೇನೆಂದರೆ, ನನ್ನ ಹೆಸರು ನನ್ನ ಆಧಾರ್ ಕಾರ್ಡ್ (ನಂ. 7546 3463 0994) ಮತ್ತು ಇತರೆ ಎಲ್ಲಾ ದಾಖಲಾತಿಗಳಲ್ಲಿ ನನ್ನ ಹೆಸರು ಕೀರ್ತನ ಎನ್. (Keerthana N.) ಎಂದು ನಮೂದಾಗಿರುತ್ತದೆ. ಆದರೆ ಬನ್ನೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನಲ್ಲಿರುವ ಖಾತೆಯಲ್ಲಿ (ಖಾತೆ ಸಂಖ್ಯೆ 64120874828) ನನ್ನ ಹೆಸರು Keerthana ಎಂಬುದಾಗಿ ನಮೂದಾಗಿರುತ್ತದೆ. ಸದರಿ ಖಾತೆಯಲ್ಲಿ ನಮೂದಾಗಿರುವ ನನ್ನ ಹೆಸರು Keerthana ಎಂಬುದನ್ನು ತೆಗೆ, ನನ್ನ ದಾಖಲಾತಿಗಳಂತೆ ಕೀರ್ತನ ಎನ್. (Keerthana N.) ಎಂದು ತಿದ್ದುಪಡಿ ಮಾಡಿಕೊಳ್ಳಲು ಈ ಪ್ರಮಾಣ ಪತ್ರದ ಮೂಲಕ ನೋಟರಿ ಸಿದ್ದಪ್ಪಾಜಿ ರವರು ಎದುರು ಪ್ರಮಾಣೀಕರಿಸುತ್ತೇನೆ.
ಸಹಿ/– Keerthana N.

ಕೆಲಸಕೆ ಬೇಕಾಗಿದ್ದಾರೆ
ಸೆಕ್ಯುರಿಟಿ ಗಾರ್ಡ್ (ಪುರುಷರು): ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ, ಲಕ್ಷ್ಮಿ ಕಾಂತನಗರ, ಬಸವನಗುಡಿ ಸರ್ಕಲ್, ಬೋಗಾದಿ ರಿಂಗ್ ರೋಡ್, ರೂಪ ನಗರ, SBM ಲೇಔಟ್, ಬಸವನಹಳ್ಳಿ, ದಾಸನಕೊಪ್ಪಲು, ಹಿನಕಲ್, ಬನ್ನಿಮಂಟಪ, ಕೇರಗಳ್ಳಿ, ದಟ್ಟಗಳ್ಳಿ, ಕೂರ್ಗಳ್ಳಿ, ಶ್ರೀರಾಂಪುರ, ಜನತಾನಗರ, ಟಿ.ಕೆ.ಲೇಔಟ್, ಸರಸ್ವತಿಪುರಂ ESI, PF ಕೊಡಲಾಗುವುದು.
ಆಸಕ್ತಿ ಇದ್ದವರು ಸಂಪರ್ಕಿಸಿ:
8310098788

30x40 ಮನೆ ಮಾರಾಟಕ್ಕಿದೆ (MUDA)
4ನೇ ಹಂತ, 2ನೇ ಘಟ್ಟ,
ವಿಜಯನಗರ, NPS ಶಾಲೆಯ
ಹತ್ತಿರ, ಮೈಸೂರು–17. ನೆಲ
1150 sqft & 1 ನೇ ಮಹಡಿ,
750 sqft. Clear
Documents. Rs.1.35Cr
Owner:
9342677390

AFFIDAVIT
Mr. Shabana Begum, wife of Rasool, whose father's name is Abdul Rahaman Beig, but in her passport her father's name was incorrectly mentioned as Rahaman Baig so now onwards her father's name is officially declared as Abdul Rahaman Beig, for passport purpose (Passport No. L6248991).
Sd/- Shabana Begum

ದಾಖಲಾತಿ ಕಳೆದಿದೆ
ಭವಾನಿ ಶಂಕರ್ ಕೆ., ನಂ. 1366, 3ನೇ ಹಂತ, ಕೆಸರೆ, ಆರ್.ಎಸ್. ನಾಯ್ಡು ನಗರ, ಮೈಸೂರು, ನನ್ನ ತಂದೆಯವರಾದ ಲೇಟ್ ಎನ್. ಕೃಷ್ಣ ರವರ ಹೆಸರಿನಲ್ಲಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮೈಸೂರು ನಗರ, ಎನ್.ಆರ್. ಮೊಹಲ್ಲಾ, ಕೆಸರೆ ಬಡಾವಣೆ, 3ನೇ ಹಂತ, ಆರ್.ಎಸ್. ನಾಯ್ಡು ನಗರ, ಮನೆ ನಂ. 1366 ರ ಮಂಜೂರಾತಿ ಪತ್ರ, ಸ್ವಾಧೀನ ಪತ್ರ ಮತ್ತು ಕ್ರಯಪತ್ರಗಳು ಮನೆಗೆ ಬಣ್ಣ ಬಳಿಸುವ ಸಂಧರ್ಭದಲ್ಲಿ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9740130743

ನಿವೇಶನ ಮಾರಾಟಕ್ಕಿದೆ
30x60, ಪೂರ್ವ ದಿಕ್ಕು,
ಮೌಲಿಮ್‌ನಗರ (ಟೀಚರ್ಸ್ ಲೇಔಟ್), ಮುಡಾ
ಅನುಮೋದಿತ, ರಿಂಗ್ ರೋಡ್
ಹತ್ತಿರ, ಮೈಸೂರು. ಸಂಪರ್ಕಿಸಿ:
Mob: 9886673392

ಬೇಕಾಗಿದ್ದಾರೆ
ಮಹಿಳೆಯರು ಬೇಕಾಗಿದ್ದಾರೆ
ಟೈಲರಿಂಗ್ ತಿಳಿದಿರುವ ಹಾಗೂ
ಸಹಾಯಕ ಹುದ್ದೆಗೆ ಮಹಿಳೆಯರು
ಬೇಕಾಗಿದ್ದಾರೆ. J K Tyre ಹತ್ತಿರ
ಹೆಬ್ಬಾಳ ಇಂಡಸ್ಟ್ರೀಯಲ್
ಏರಿಯಾ ಮೈಸೂರು
9513233305

HOUSE FOR SALE
20X30 GROUND FLOOR,
FIRST FLOOR & SECOND
FLOOR, BUILT UP AREA 1500
SQ FT. NEAR SANKRANTI
CIRCLE, HEBBAL
2ND STAGE, MYSORE.
9980422451, 9740661527
9739866407, 9901156248
BROKER EXCUSE

ಉದ್ಯೋಗವಕಾಶ
ಮಹಿಳೆಯರು, ಯುವತಿಯರು, ನಮ್ಮ ಶಾಖೆಗಳಲ್ಲಿ ವಯಸ್ಸಾದ ಹಿರಿಯ ನಾಗರೀಕರನ್ನು ನೋಡಿಕೊಳ್ಳಲು ಹೋಂ ನರ್ಸ್‌ಗಳು ಬೇಕಾಗಿದ್ದಾರೆ, ತಿಂಗಳ ವೇತನ :13000 ರಿಂದ 20000 ರೂ ವರೆಗೆ ಉಚಿತ ಊಟ ಮತ್ತು ವಸತಿಯೊಂದಿಗೆ ವಯೋಮಿತಿ :18–50 ವರ್ಷ ವಯಸ್ಸಿನವರು
9739292222
9035113222

ನಾಟಿ ಸ್ಟೈಲ್ ನಾನ್ ವೆಜ್ ಕುಕ್ ಬೇಕಾಗಿದ್ದಾರೆ
ರುಚಿಗೆ ತಕ್ಕಂತೆ
ಸಂಬಳ ವಸತಿ ವ್ಯವಸ್ಥೆ ಇದೆ
9900171642

NEW HOUSE SALE HEBBAL
3 Floors Rent Earning
New House,
MUDA, 30x40,
North Facing,
Price -1.90 Cr,
Near CITB CHOULTRY
8660105902

HOUSE SALE near Vijayanagar 4th stg
3 BHK Duplex, 4 yrs Old
House,E/F Door,27x42,
Price - 1.15 Cr
Near SVEI School, Panchacharya Layout
8660105902

NEW HOUSE FOR RENT
2 BHK HOUSE
VIJAYA NAGARA
2ND STAGE
9008951024

ಬೇಕಾಗಿದ್ದಾರೆ
ಪ್ರತಿಷ್ಠಿತ ಕಂಪನಿಯಲ್ಲಿ ಫೀಲ್ಡ್ ಎಕ್ಸಿಕ್ಯೂಟೀವ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ಅನುಭವ ಅವಶ್ಯಕತೆ ಇಲ್ಲ ಹೊಸಬರಿಗೆ ಮೊದಲ ಆದ್ಯತೆ.
ವಿದ್ಯಾರ್ಹತೆ : PUC ಪಾಸ್/ಫೇಲ್
8553738081
8951019994

WANTED
Accountant - Female
Minimum 1 Yr Experince
Work in Furniture
Showroom
Salary : 12 K- 18 K
Timing : 11 am - 7.30 pm
Address: Sharadadevi
Nagar, Mysore
8050744784

ನಿಮ್ಮ ಮನೆಯಲ್ಲಿ ನಲ್ಲಿ ಮತ್ತು ಸ್ಯಾನಿಟರಿ ಕೆಲಸ, ಟೈಲ್ಸ್ ಕೆಲಸ, ತರಾಸಿ ಸೋರಿಕೆ, ಬಣ್ಣದ ಕೆಲಸ, ಎಲೆಕ್ಟ್ರಿಕಲ್ ಕೆಲಸ ಹಾಗೂ ಸಿವಿಲ್ ಅಲ್ಟ್ರೇಷನ್ ಕೆಲಸದ ತೊಂದರೆ ಇದ್ದರೆ... ಕರೆ ಮಾಡಿ...
VASANTHA BUILDERS
9164573142,8151035074

ಗುಂಡ್ಲುಪೇಟೆಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ
ಮುಖ್ಯರಸ್ತೆ ಹೊಂದಿಕೊಂಡಂತೆ
ಕಡಿಮೆ ಬೆಲೆಗೆ
ಸೈಟ್‌ಗಳು ಲಭ್ಯವಿದೆ
7760591291
6363798472

ನಮ್ಮಲ್ಲಿ ಬಾದಾಮಿ, ಗೋಡಂಬಿ, ಪಿಸ್ತಾ, ಒಣದ್ರಾಕ್ಷಿ, ಖರ್ಜೂರ, ಅಂಜೂರ ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ. ಸಂಪರ್ಕಿಸಿ:
ರಾಜ್ ಗುರು ಡ್ರೈಫ್ರೂಟ್ಸ್,
ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
9845460211
7022293342

ಮಾರಾಟಕ್ಕಿವೆ
ಮನೆಗಳು–ವಸಂತನಗರ E/F & 30x40 ಬೋರ್‌ವೆಲ್ ಇದೆ ಲಾಲ್‌ಬಹದ್ದೂರ್ ಶಾಸ್ತ್ರಿನಗರ E/F 30x40 ಬೋರ್‌ವೆಲ್ ಇದೆ. ಸೈಟುಗಳು ಲಾಲ್ ಬಹದ್ದೂರ್ ಶಾಸ್ತ್ರಿನಗರ, 40x60 W/F, ಪೊಲೀಸ್ ಲೇಔಟ್ 3ನೇ ಹಂತ 2000 ಸ್ಕ್ವೇರ್ ಫೀಟ್ S/F. ಜಮೀನು–ಸಾತಗಳ್ಳಿ ಸಾಟಲೈಟ್ ರಿಂಗ್ ರೋಡ್ ಹತ್ತಿರದಲ್ಲಿ 33 ಕುಂಟೆ ಲೇಔಟ್ ಪಕ್ಕದಲ್ಲಿ ಬನ್ನೂರು ರಿಂಗ್ ರೋಡಿನ 2 ಕಿಲೋ ಮೀಟರಿನಲ್ಲಿ 20 ಕುಂಟೆ ಮೇನ್ ರೋಡ್‌ನಲ್ಲಿ ಇದೆ.
9844985868

ಬೇಕಾಗಿದ್ದಾರೆ
ಹೊಸದಾಗಿ ಪ್ರಾರಂಭವಾಗುತ್ತಿರುವ ಸಸ್ಯಹಾರಿ ಹೋಟೆಲ್‌ಗೆ ಈ ಕೆಲಸಗಾರರು ಬೇಕಾಗಿದ್ದಾರೆ. ಮ್ಯಾನೇಜರ್ – 1, ಸೌತ್ ಇಂಡಿಯನ್ ಭಟ್ಟರು–2, ನಾರ್ತ್ ಇಂಡಿಯನ್ ಭಟ್ಟರು–2 ಚೈನೀಸ್‌ಕುಕ್–2, ತಂದೂರಿ ಭಟ್ಟರು–2, ಕಾಫೀ ಟೀ ಮೇಕರ್ಸ್–2, ವೆಯಿಟರ್ಸ್–5, ಕ್ಯಾಪ್ಟನ್–2, ಅಡುಗೆ ಸಹಾಯಕರು–2, ಚಾಟ್‌ಮೇಕರ್–2, ವಾಶಿಂಗ್ – 5, ಹೌಸ್ ಕೀಪಿಂಗ್–2, ಕ್ಲೀನರ್–2, ಜ್ಯೂಸ್ ಮೇಕರ್ಸ್–2, ಕಿಚನ್ ಸೂಪರ್‌ವೈಸರ್ಸ್–
8317454665

HOUSE / SITE FOR SALE
40X60 Ground & First House
Sale at Ramakrishna Nagar
40x60 Site Sale at
Kuvempunagar, Dattagalli,
Ramakrishna Nagar
9663136318
6362370753

ಶ್ರೀ ಲಲಿತಾ ತ್ರಿಪುರ ಸುಂದರಿ ಟೂರಿಸ್ಟ್, ಮೈಸೂರು
26–7–24 ಶಿರಡಿ ಪ್ರವಾಸ 6 ದಿನ
ಹೊರನಾಡು, ಶೃಂಗೇರಿ, ಬಿಜಾಪುರ, ಶನಿಸಿಂಗನಾಪುರ, ತ್ರಯಂಬಕೇಶ್ವರ, ಪಂಡರಾಪುರ, ಶಿರಡಿ, ನಾರಾಯಣಪುರ ಇತ್ಯಾದಿ ಒಂದು ಸೀಟಿಗೆ ರೂ. 13,000/–
10–8–24 ಆಂಧ್ರ ಪ್ರವಾಸ
ತಿರುಪತಿ, ಅಲಮೇಲು, ತುಂಗಾಪುರ, ಕಾಳಹಸ್ತಿ, ಶ್ರೀಶೈಲಂ, ಮಹಾನಂದಿ, ಹೈದ್ರಾಬಾದ್, ಮಂತ್ರಾಲಯ ಇತ್ಯಾದಿ ರೂ. 14,000/–
ಕಾಫಿ, ತಿಂಡಿ, ಊಟ, ವಸತಿ ಸೇರಿದೆ.
ಕುಮಾರ್: 7204954527

ಬೇಕಾಗಿದ್ದಾರೆ
Telecaller (Female)
R-155 7th Main
Hebbal Industrial Estate
Mysore-16
9448247741
9448186377

SITE FOR SALE
30/40, EAST FACE,
KBL GARDENIA,
ATTACHED TO
VIJAYNAGAR 4TH STAGE
8217042841

JOIN WITH US
ಭಾರತದ ಅತ್ಯಂತ ವಿಶ್ವಾಸಾರ್ಹ
ಬ್ಯಾಂಕ್ ಸಮೂಹದಲ್ಲಿ
Business ಅವಕಾಶದ
Full Time ನಿವೃತ್ತರಿಗೆ
ಸ್ವಯಂ ನಿವೃತ್ತಿಗೆ,
ಗೃಹಿಣಿಯರಿಗೆ ಸುವರ್ಣಾವಕಾಶ
7760936369

ಕರ್ನಾಟಕದಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ
ಕಂಪನಿ, ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (ಸಂಬಳ: 18000rs ಇಂದ 30000rs + ಇನ್ಸೆಂಟಿವ್) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ:
9632831680,7411273440

ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ಮೈಸೂರಿನ ದೇವೇಗೌಡ ಸರ್ಕಲ್‌ನಲ್ಲಿ ಕೆಲಸ ಮಾಡಲು 45 ವರ್ಷದೊಳಗಿನ SSLC Pass ಆಗಿರುವ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ESI & PF ನೊಂದಿಗೆ ಆಕರ್ಷಕ ವೇತನ ನೀಡಲಾಗುವುದು.
9901236401
9535784363

ಮುಡಾ ಅಪ್ರೂವ್ಡ್ ಸೈಟ್ ಮಾರಾಟಕ್ಕಿದೆ
ಬ್ರಾಹ್ಮಿನ್ ಲೇಔಟ್ 'A' ಬ್ಲಾಕ್ 60 ಅಡಿ ರಸ್ತೆಗೆ ಒಂದೇ ಸೈಟ್‌ನಲ್ಲಿ 30x40, 30x24 ಹಾಗೂ 10x10, 5 ಅಂಗಡಿ ಮಳಿಗೆಗೆ ಸ್ಥಳಾವಕಾಶವುಳ್ಳ ಸೈಟ್ ಮಾರಾಟಕ್ಕಿವೆ. ಒಟ್ಟು ವಿಸ್ತೀರ್ಣ 2900 ಸ್ಕ್ವೇರ್ ಫೀಟ್ ಚ.ಅ.ಗೆ 1850
8618644886
9880280299

MUDA Commercial SITE FOR SALE
40x60 South Facing
Commercial Site For Sale
at Teasury Layout
100 feet Road Opposite
Royal City Club
Contact Vishwanath Gowda
9590911111

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೊಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
ಸೆಂಟ್ ಮೇರೀಸ್ ಆಸ್ಪತ್ರೆ
ಸಿಲ್ಕ್ ಫ್ಯಾಕ್ಟರಿ ಸರ್ಕಲ್, ಮೈಸೂರು
9916908454

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/
ಲಿಂಗಾಯತ/
ನಾಯಕ/SC & ಎಲ್ಲಾ
ಜಾತಿಯ ವಧು–ವರರಿಗಾಗಿ
ಕೂಡಲೇ ಸಂಪರ್ಕಿಸಿ
(II Marriages Also)
9343175000

ಟೀಚರ್ಸ್ ಟ್ರೇನಿಂಗ್
ನೀವೂ ಒಬ್ಬ ಟೀಚರ್ ಆಗ ಬೇಕು ?
SSLC ಪಾಸ್ PUC,
Degree ಪಾಸ್/ಫೇಲ್ !
NURSERY TEACHERS TRAINING
ಟ್ರೈನಿಂಗ್ ನಂತರ ತಕ್ಷಣ ಕೆಲಸ
ಬನ್ನಿ, ಸೇರಿ, ಪಾಸಾಗಿ , ಸಂಪಾದಿಸಿ
I PUC ಓದುತ್ತಿರುವವರು ಸಹ ಸೇರಬಹುದು
ವಿವರಗಳಿಗೆ Watsapp/Call
9113980741

ಬೇಕಾಗಿದ್ದಾರೆ
ಹೆಬ್ಬಾಳು ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ ITI, Diploma, 8th to 2nd PUC ವರೆಗೆ. ಊಟ ವಸತಿ ESI, PF ಮತ್ತು ವಾಹನ ಸೌಲಭ್ಯ ಇರುತ್ತದೆ. ಸಂಬಳ 11500 ರಿಂದ 18000 ಇರುತದೆ.
8951869646
9902645646

ಸೈಟುಗಳು ಮಾರಾಟಕ್ಕಿವೆ
40x60 (E/F)
SBM ಬೋಗಾದಿ
31x44 (E/N)
ಕಾರ್ನರ್ ರಾಮಕೃಷ್ಣನಗರ
(ವಿವೇಕಾನಂದ ಸರ್ಕಲ್ ಹತ್ತಿರ)
9341050560
ಮಧ್ಯವರ್ತಿಗಳು ಕ್ಷಮಿಸಿ

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮೈಸೂರು ಮಿತ್ರ

ಹಕ್ಕುಪತ್ರಕ್ಕೆ ಆಗ್ರಹಿಸಿ ಮನವಿ ಸಲ್ಲಿಕೆ



ಮನವಿ ಪತ್ರ ಸಲ್ಲಿಸುತ್ತಿರುವ ಬಡಾವಣೆಯ ನಿವಾಸಿಗಳು.

ಪಾಂಡವಪುರ,ಜು.5– ಪಟ್ಟಣದ ಮಹಾತ್ಮಗಾಂಧಿ ಬಡಾವಣೆಯಲ್ಲಿ ಕಳೆದ 25 ವರ್ಷಗಳಿಂದ ವಾಸಿಸುತ್ತಿರುವ 25ಕ್ಕೂ ಹೆಚ್ಚು ಹಂದಿಜೋಗಿ ಕುಟುಂಬಗಳಿಗೆ ಸರ್ಕಾರದಿಂದ ಹಕ್ಕುಪತ್ರ ನೀಡುವಂತೆ ಆಗ್ರಹಿಸಿ ಶುಕ್ರವಾರ ಪುರಸಭೆ ಮುಖ್ಯಾಧಿಕಾರಿ ವೀಣಾ ಅವರಿಗೆ ಬಡಾವಣೆ ನಿವಾಸಿಗಳು ಮನವಿ ಸಲ್ಲಿಸಿದರು.

ಮಹಾತ್ಮಗಾಂಧಿ ಬಡಾವಣೆಯ ಪುರಸಭೆ ಸದಸ್ಯ ಚಂದ್ರು ಅವರ ನೇತೃತ್ವದಲ್ಲಿ ಪುರಸಭೆಗೆ ಆಗಮಿಸಿದ ಹಂದಿ ಜೋಗಿ ಸಮುದಾಯದ ನಿವಾಸಿಗಳು ಹಕ್ಕು ಪತ್ರ ವಿತರಣೆ ಮಾಡುವಂತೆ ಮುಖ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪುರಸಭೆ ಮುಖ್ಯಾಧಿಕಾರಿ ವೀಣಾ ಅವರು ಮಹಾತ್ಮಗಾಂಧಿ ಬಡಾವಣೆಯ ಹಂದಿಜೋಗಿ ಸಮುದಾಯದ ನಿವಾಸಿಗಳಿಗೆ ಹಕ್ಕುಪತ್ರ ವಿತರಣೆ ಮಾಡುವ ಬಗ್ಗೆ ಸೂಕ್ತ ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಬಡಾವಣೆ ನಿವಾಸಿಗಳಾದ ಕುಮಾರ, ಹರೀಶ, ಮಂಜುಳ, ಪವಿತ್ರ, ರವಿ, ಮಂಜುಳ, ಭಾಗ್ಯ, ಸ್ವಾಮಿ, ರೂಪ, ವೆಂಕಟೇಶ್, ಗೌರಮ್ಮ, ವಿಷಕಂಠ, ಗೀತಾ ಸೇರಿದಂತೆ ಹಲವರು ಹಾಜರಿದ್ದರು.

ಹೊರಗುತ್ತಿಗೆ ನೇಮಕಾತಿ ಷರತ್ತು ರದ್ದಿಗೆ ಆಗ್ರಹಿಸಿ ಪ್ರತಿಭಟನೆ

ಮಂಡ್ಯ, ಜು.5– ಹೊರಗುತ್ತಿಗೆ ನೇಮಕಾತಿ ಮೀಸಲಾತಿ ನೀಡಿ, ಷರತ್ತುಗಳ ಮೂಲಕ ಕಿತ್ತು ಕೊಳ್ಳುತ್ತಿರುವ ಸರ್ಕಾರದ ವಿರುದ್ಧ ಇಂದು ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿ ಎದುರು ದಸಂಸ ಪ್ರತಿಭಟನೆ ನಡೆಸಿತು.

ಈ ವೇಳೆ ಮಾತನಾಡಿದ ಗುರುಪ್ರಸಾದ್ ಕೆರಗೋಡು, ಇತ್ತೀಚೆಗೆ ರಾಜ್ಯ ಸರ್ಕಾರ ಹೊರಡಿಸಿರುವ ಸುತ್ತೋಲೆಯಲ್ಲಿ ಹೊರಗುತ್ತಿಗೆ ನೇಮಕಾತಿಗಳಲ್ಲಿ ಮೀಸಲಾತಿ ನಿಯಮಗಳನ್ನು ಜಾರಿಗೆ ತರಲು ಆದೇಶ ನೀಡಿರುವುದನ್ನು ದಸಂಸ ಸ್ವಾಗತಿಸುತ್ತದೆ. ಹಲವಾರು ವರ್ಷಗಳಿಂದ ಉದ್ಯೋಗದ ನೇಮಕಾತಿಗಳೇ ನಡೆಯದೆ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳ ಲಕ್ಷಾಂತರ ನಿರುದ್ಯೋಗಿ ಯುವಕರ ಸಮೂಹವು ಕಂಗಾಲಾಗಿದ್ದ ಸಂದರ್ಭದಲ್ಲಿ ಸರ್ಕಾರದ ಈ ಆದೇಶದಿಂದ ಅಹಿಂದ ಸಮುದಾಯದ ನಿರುದ್ಯೋಗಿ ಯುವಕರು ಸಂತೋಷಗೊಂಡಿದೆ ಎಂದು ಹರ್ಷ ವ್ಯಕ್ತಪಡಿಸಿದರು.



ಷರತ್ತುಗಳನ್ನು ರದ್ದುಪಡಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ದಸಂಸ ಕಾರ್ಯಕರ್ತರು.

ಆದರೆ, ಸರ್ಕಾರದ ಸುತ್ತೋಲೆಯ 1 ಮತ್ತು 6 ನೇ ಷರತ್ತುಗಳು ಸರ್ಕಾರದ ಸದುದ್ದೇಶದ ಹೊರಗುತ್ತಿಗೆಯಲ್ಲಿನ ಮೀಸಲಾತಿ ನೀತಿಗೇ ತದ್ವಿರುದ್ಧವಾಗಿದೆ ಎಂದು ಗುರುಪ್ರಸಾದ್ ಅಸಮಾಧಾನ ವ್ಯಕ್ತಪಡಿಸಿದರು.

1ನೇ ಷರತ್ತಿನಲ್ಲಿ 45 ದಿನಗಳಿಗಿಂತ ಕಡಿಮೆ ಅವಧಿಗೆ ನೇಮಕಾತಿ ಮಾಡಿಕೊಳ್ಳುವಾಗ ಮೀಸಲಾತಿ ಅನ್ವಯವಾಗುವುದಿಲ್ಲ ಎಂದಿದೆ ಇದು ಮೀಸಲಾತಿ ವಿರೋಧಿಗಳಿಗೆ ಅನುಕೂಲವಾಗಿದ್ದು ಇದನ್ನು ರದ್ದುಪಡಿಸಿ. ಎಷ್ಟೇ ಅವಧಿಗೆ ನೇಮಕಾತಿ ಮಾಡಿಕೊಂಡರೂ ಮೀಸಲಾತಿ ನೀತಿಯನ್ನು ಕಡ್ಡಾಯವಾಗಿ ಅನುಸರಿಸುವಂತೆ ಆದೇಶಿಸಬೇಕು ಎಂದು ಆಗ್ರಹಿಸಿದರು.

ಇನ್ನು 6ನೇ ಷರತ್ತಿನ ಪ್ರಕಾರ ಯಾವುದೇ ಇಲಾಖೆಯಲ್ಲಿ ಹೊರಗುತ್ತಿಗೆಯಲ್ಲಿ ನೇಮಕಾತಿ ಮಾಡಿಕೊಳ್ಳುವಾಗ 20ಕ್ಕಿಂತ ಹೆಚ್ಚು ಜನರನ್ನು ನೇಮಕ ಮಾಡಿಕೊಂಡರೆ ಮಾತ್ರ ಮೀಸಲಾತಿ ನೀತಿಯನ್ನು ಅನುಸರಿಸಬೇಕು ಎಂದಿದೆ. ಇದೂ ಕೂಡ ನ್ಯಾಯ ಸಮ್ಮತವಾಗಿಲ್ಲ ಎಂದು ತಮ್ಮ ಅಸಮಧಾನ ವ್ಯಕ್ತಪಡಿಸಿದ ಅವರು ಮೀಸಲಾತಿಯನ್ನು ವಂಚಿಸಲು ಸದಾ ಸಿದ್ಧ ಇರುವವರಿಗೆ ಈ ನಿಬಂಧನೆ ಸಹಕಾರಿಯಾಗಲಿದೆ. 20ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ನೇಮಕಾತಿಗಳಿದ್ದಾಗ ಮಾತ್ರ ಮೀಸಲಾತಿ ನೀತಿ ಅನ್ವಯಿಸುತ್ತದೆ ಎಂದು ಸರ್ಕಾರವೇ ನಿರ್ಬಂಧ ಒಡ್ಡಿದರೆ ಎಲ್ಲಾ ನೇಮಕಾತಿ ಉದ್ಯೋಗಗಳನ್ನು 20ರ ಒಳಗೆ ನಿಗದಿಪಡಿಸುತ್ತ ಮೀಸಲಾತಿಯನ್ನು ವಂಚಿಸಬಹುದಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಹಾಗಾಗಿ ರಾಜ್ಯ ಸರ್ಕಾರ ಸದರಿ 1 ಮತ್ತು 6 ನೇ ಷರತ್ತನ್ನು ವಾಪಾಸ್ಸಡುಗೊಳಿಸಿ ಉದ್ಯೋಗಗಳ ಸಂಖ್ಯೆ ಎಷ್ಟೇ ಇರಲಿ ಮತ್ತು ಎಷ್ಟೇ ಅವಧಿಯದ್ದಾಗಿರಲಿ ಅಲ್ಲಿ ರೋಸ್ಟರ್ ನಿಯಮಗಳ ಅನುಸಾರವಾಗಿ ನೇಮಕಾತಿ ಪ್ರಕ್ರಿಯೆಗಳು ಕಡ್ಡಾಯವಾಗಿ ಇರಲೇಬೇಕು ಎಂದು ಒತ್ತಾಯಿಸಿದರು.

ಸರ್ಕಾರ ಸದರಿ ಆದೇಶವನ್ನು ವಾಪಾಸ್ಸು ಮಾಡಿ ಮರು ಸುತ್ತೋಲೆಯನ್ನು ಹೊರಡಿಸಲು ಜರೂರು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಈ ಸಂಬಂಧ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಿದರು.

ಧರಣಿಯಲ್ಲಿ ವೈ.ರಾಜಶೇಖರ್, ಹುಲ್ಲಕೆರೆ ಮಹದೇವ್, ಲಕ್ಷ್ಮಣ್ ಹೊಸಕೊಟೆ, ರವಿಚಂದ್ರ ಗಜಾಂ, ಹರಳಕೆರೆ ಗೋವಿಂದರಾಜು, ಹಾರೋಹಳ್ಳಿ ಸೋಮು, ಕಂಚನಹಳ್ಳಿ ನಾಗರಾಜು ಇನ್ನಿತರರು ಭಾಗವಹಿಸಿದ್ದರು.

ಹಾಲು ಉತ್ಪಾದಕರ ಸಂಘದಲ್ಲಿ ರಾಜಕೀಯ ಬೆರೆಸಬೇಡಿ

ಕೆ.ಆರ್.ಪೇಟೆ,ಜು.5– ಹಾಲು ಉತ್ಪಾದಕರ ಸಹಕಾರ ಸಂಘಗಳು ರೈತರ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮಳೆ, ಬೆಳೆ ಇಲ್ಲದ ಸಂದರ್ಭದಲ್ಲಿಯೂ ರೈತರನ್ನು ಕೈಹಿಡಿದು, ಸಂಕಷ್ಟದಿಂದ ಪಾರು ಮಾಡಿವೆ. ಕೇಳಿದ್ದನ್ನು ಕೊಡುವ ಇಂತಹ ಕಾಮಧೇನು, ಕಲ್ಪವೃಕ್ಷದಂತಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ರಾಜಕೀಯ ಬೆರೆಸದೇ ಅವುಗಳ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಮನ್‌ಮುಲ್ ನಿರ್ದೇಶಕ ಡಾಲು ರವಿ ಹೇಳಿದರು.



ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಇದೇ ರೀತಿ ಡೇರಿಗೆ ಗುಣಮಟ್ಟದ ಅತಿ ಹೆಚ್ಚು ಹಾಲು ಪೂರೈಕೆ ಮಾಡಿದ ಉತ್ಪಾದಕರಿಗೆ ಮನ್‌ಮುಲ್ ನಿರ್ದೇಶಕ ಡಾಲು ರವಿ ಬಹುಮಾನ ವಿತರಣೆ ಮಾಡಿದರು.

ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಬೀರುವಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಹಾಗೂ ಎಸ್ಎಸ್ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಡೇರಿಗೆ ಗುಣಮಟ್ಟದ ಅತೀ ಹೆಚ್ಚು ಹಾಲು ಪೂರೈಕೆ ಮಾಡಿದ ಉತ್ಪಾದಕರಿಗೆ ಬಹುಮಾನ ವಿತರಣೆ ಮಾಡಿ ಮಾತನಾಡಿದರು.

2023–24ನೇ ಸಾಲಿನಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಹಾಲು ಉತ್ಪಾದಕರ ಮಕ್ಕಳಾದ ಎಂ.ವಿದ್ಯಾ, ಡಿ.ಶಮಿತ ಅವರಿಗೆ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ಬಿ.ಎಮ್.ಜೀವಾ, ಬಿ.ಕೆ.ದಿವ್ಯಾ, ಜಯಲಕ್ಷ್ಮಿ, ಬಿ.ಕೆ.ಮಂಜುನಾಥ ಅವರಿಗೆ ನಗದು ಬಹುಮಾನ ನೀಡಿ ಸನ್ಮಾನಿಸಿ ಗೌರವಿಸಲಾಯಿತು. ಗುಣಮಟ್ಟದ ಹಾಲು ಪೂರೈಕೆ ಮಾಡಿದ ಬೀರುವಳ್ಳಿ ಸೌಮ್ಯ, ತಮ್ಮೇಗೌಡ, ಗೌರಮ್ಮ ಆಲೇನಹಳ್ಳಿ ರಾಜಶೇಖರ್, ಆನಂದ್, ಎ.ಎನ್.ಕುಮಾರ್, ನಂದಿಪುರ ಧರ್ಮೇಗೌಡ, ಬಿ.ಆರ್.ರವಿ, ರತ್ನಮ್ಮ, ಗಂಗಾಧರ, ತಮ್ಮಯ್ಯ, ಆರತಿ, ಅದೇ ರೀತಿ ಅತಿ ಹೆಚ್ಚು ಗುಣಮಟ್ಟದ ಎಮ್ಮೆ ಹಾಲು ಪೂರೈಕೆ ಮಾಡಿದ ರತ್ನಮ್ಮಜಯರಾ ಮೇಗೌಡ ಅವರಿಗೆ ಪ್ರಥಮ ಬಹುಮಾನ, ಪುಟ್ಟಮ್ಮ ಜವರೇಗೌಡ ಅವರಿಗೆ ದ್ವಿತೀಯ ಬಹುಮಾನ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

ಸಂಘದ ಅಧ್ಯಕ್ಷ ಬಿ.ಎಲ್.ಬಲ್ಲೇಶ್ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿದ್ದರು. ಮನ್‌ಮುಲ್ ಮಾರ್ಗದ ವಿಸ್ತರಣಾಧಿಕಾರಿ ಬಿ.ಸಿ.ಮಧು, ಸಂಘದ ಸಿಇಓ ಬಿ.ಆರ್.ಯೋಗೇಶ್ ಸಂಘದ 2023–24ನೇ ಸಾಲಿನ ವಾರ್ಷಿಕ ವರದಿ ಮಂಡಿಸಿದರು. ಕಾರ್ಯಕ್ರಮದಲ್ಲಿ ಮನ್‌ಮುಲ್ ಮಾರ್ಗದ ವಿಸ್ತರಣಾಧಿಕಾರಿ ಬಿ.ಸಿ.ಮಧು, ಸಂಘದ ಉಪಾಧ್ಯಕ್ಷ ರುಕ್ಮಿಣಮ್ಮ ನಿರ್ದೇಶಕರಾದ ಬಿ.ಎಸ್.ಶಿವರಾಮೇಗೌಡ, ಬಿ.ಜೆ.ಶಶಿಧರ್, ಹೇಮಾ, ಎ.ಬಿ.ವಿರೂಪಾಕ್ಷ ದ್ಯಾವನಾಯಕ್, ಬಿ.ಎನ್.ಧನಂಜಯ, ವಸಂತಮ್ಮ ಸಾವಿತ್ರಮ್ಮ ಸಂಘದ ಕಾರ್ಯದರ್ಶಿ ಬಿ.ಆರ್.ಯೋಗೇಶ್, ಸಿಬ್ಬಂದಿ ವರ್ಗದವರಾದ ಬಿ.ಜಿ.ಯೋಗೇಂದ್ರ ಬಿ.ಆರ್.ರಕ್ಷಿತ್, ಸಣ್ಣತಾಯಮ್ಮ ಸೇರಿದಂತೆ ಸಂಘದ ಮಾಜಿ ಅಧ್ಯಕ್ಷರು, ಮಾಜಿ ನಿರ್ದೇಶಕರು, ಅರೇನಹಳ್ಳಿ, ಬೀರುವಳ್ಳಿ, ನಂದಿಪುರ ಗ್ರಾಮಗಳ ಎಲ್ಲಾ ಷೇರುದಾರರು, ಹಲವು ಮುಖಂಡರು, ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಜುಲೈ 12ರಂದು ತ್ರೈಮಾಸಿಕ ಕೆಡಿಪಿ ಸಭೆ

ಮಂಡ್ಯ,ಜು.5– ಮಂಡ್ಯ ತಾಲೂಕು ಪಂಚಾಯಿತಿ 2024–25ನೇ ಸಾಲಿನ ಜೂ.2024ರ ಅಂತ್ಯದವರೆಗಿನ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ಪಿ.ರವಿಕುಮಾರ್‌ಗೌಡ ಅವರ ಅಧ್ಯಕ್ಷತೆಯಲ್ಲಿ ಜುಲೈ 12 ರಂದು ಮಧ್ಯಾಹ್ನ 2.30 ಗಂಟೆಗೆ ಮಂಡ್ಯ ಜಿಲ್ಲಾಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇಲುಕೋಟೆಯಲ್ಲಿ ಡೆಂಗ್ಯೂ ಬಗ್ಗೆ ಮುನ್ನೆಚರಿಕೆ ವಹಿಸಿ

ಡೆಂಗ್ಯೂ, ಮಲೇರಿಯಾ ಜಾಗೃತಿ ಜಾಥಾದಲ್ಲಿ ಸೂಚನೆ



ಮಲೇರಿಯಾ, ಡೆಂಗ್ಯೂ ಜ್ವರದ ಬಗ್ಗೆ ಮೇಲುಕೋಟೆಯಲ್ಲಿ ಜಾಗೃತಿ ಜಾಥಾ

ಮೇಲುಕೋಟೆ, ಜು.5– ಡೆಂಗ್ಯೂ ಜ್ವರ ಬರದಂತೆ ಮುಂಜಾಗ್ರತೆ ವಹಿಸುವ ಅಗತ್ಯವಿದ್ದು ಮನೆ, ಶಾಲೆ, ದೇವಾಲಯಗಳ ಬಳಿ ನೀರು ನಿಲ್ಲದಂತೆ ಎಚ್ಚರವಹಿಸಬೇಕು ಎಂದು ಮೇಲುಕೋಟೆ ವೈದ್ಯಾಧಿಕಾರಿ ಡಾ.ವರ್ಷ ಕರೆ ನೀಡಿದರು.

ಮೇಲುಕೋಟೆಯಲ್ಲಿ ಆರೋಗ್ಯ ಇಲಾಖೆ, ಗ್ರಾಪಂ, ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆ ಹಾಗೂ ಮೈಸೂರು ರಾಯಲ್ ತಾಂತ್ರಿಕ ಮಹಾವಿದ್ಯಾಲಯ ಕಾಲೇಜಿನ ಎನ್‌ಎಸ್‌ಎಸ್ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಡೆಂಗ್ಯೂ ಮತ್ತು ಮಲೇರಿಯಾ ರೋಗತಡೆಯ ಸಂಬಂಧ ಜಾಗೃತಿ ಮೂಡಿಸುವ ಜಾಥಾದಲ್ಲಿ ಮಾತನಾಡಿದರು.

ಮೇಲುಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ 68 ಹಳ್ಳಿಗಳು ಸೇರಿದ್ದು ಈವರೆಗೆ ಯಾವುದೇ ಡೆಂಗ್ಯೂ ಪ್ರಕರಣ ವರದಿಯಾಗಿಲ್ಲ. ಡೆಂಗ್ಯೂ ಈಗ ವೇಗವಾಗಿ ಹರಡುತ್ತಿದೆ. ನಮ್ಮ ಪರಿಸರವನ್ನು ಸ್ವಚ್ಛವಾಗಿಟ್ಟುಕೊಂಡು ಸೊಳ್ಳೆಗಳ ನಿರ್ಮೂಲನೆ ಮಾಡಬೇಕಾಗಿದೆ. ನಿಂತ ಕಲುಷಿತ ನೀರು ಸೊಳ್ಳೆಗಳ ವಾಸಸ್ಥಾನವಾಗಿದ್ದು ಗ್ರಾಮದ ಯಾವುದೇ ಸ್ಥಳದಲ್ಲಿ ನೀರು ನಿಲ್ಲದಂತೆ ಎಚ್ಚರ ವಹಿಸಬೇಕಾಗಿದೆ ವಿದ್ಯಾರ್ಥಿಗಳು ಮನೆಮನೆಗೆ ತೆರಳಿ ಈ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ಆರೋಗ್ಯ ನಿರೀಕ್ಷಕ ನಟರಾಜು, ಮೇಲುಕೋಟೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ರಾಜೇಶ್ವರ್, ಸದಸ್ಯ ಜಯರಾಮೇಗೌಡ, ಬಾಲಕರ ಶಾಲೆಯ ಮುಖ್ಯ ಶಿಕ್ಷಕ ಸಂತಾನರಾಮನ್, ಎಂಐಟಿ ಕಾಲೇಜಿನ ಎನ್‌ಎಸ್‌ಎಸ್ ಶಿಬಿರಾಧಿಕಾರಿ ರವಿಕುಮಾರ್, ಸಿವಿಲ್ ಮುಖ್ಯಸ್ಥ ಪ್ರೊ.ಎನ್.ನಕುಲ್, ಮುತ್ತುರಾಜ್ ಟಿ.ಎನ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಕಿಕ್ಕೇರಿ ಗ್ರಾಪಂ ಉಪಾಧ್ಯಕ್ಷರಾಗಿ ಜ್ಯೋತಿ ದಯಾನಂದ್



ಕಿಕ್ಕೇರಿ ಗ್ರಾಪಂ ಕಚೇರಿಯಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷರಾಗಿ ಜ್ಯೋತಿ ದಯಾನಂದ್ ಅವಿರೋಧವಾಗಿ ಆಯ್ಕೆಯಾದರು. ಈ ವೇಳೆ ಎಸ್.ಕೆ.ಬಾಲಕೃಷ್ಣ, ಕೆ.ಎಸ್.ಪ್ರಭಾಕರ್, ಐಕನಹಳ್ಳಿ ಕೃಷ್ಣೇಗೌಡ, ಕೆ.ಆರ್.ಕೃಷ್ಣ, ಕೆ.ಬಿ.ಚಂದ್ರಶೇಖರ್, ಕೆ.ಜಿ.ಪುಟ್ಟರಾಜು, ತಾಯಮ್ಮ, ಸರಸ್ವತಿ, ಜ್ಯೋತಿ, ರೇಣುಕಮ್ಮ, ಭಾರತಿ ಹಾಜರಿದ್ದರು.

ಜು.10 ರಂದು ಸಾರ್ವಜನಿಕರ ಕುಂದು ಕೊರತೆ ಸಭೆ

ಮಂಡ್ಯ,ಜು.5–ಮಂಡ್ಯ ಲೋಕಾಯುಕ್ತ ವಿಭಾಗದ ಅಧಿಕಾರಿಗಳು ಜು.10ರಂದು ಜಿಲ್ಲೆಯ ಪಾಂಡವಪುರ ತಾಲೂಕು ಕಚೇರಿ ಆವರಣದಲ್ಲಿ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1.30ಗಂಟೆವರೆಗೆ ಸಾರ್ವಜನಿಕರ ಕುಂದುಕೊರತೆ ಸಭೆ ಸಾರ್ವಜನಿಕರಿಂದ ದೂರು/ಅಹವಾಲು ಸ್ವೀಕಾರ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಮಂಡ್ಯ ಕರ್ನಾಟಕ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಬಿ.ಪಿ.ಬ್ಯಾಟರಾಯನಗೌಡ, ಆರ್.ಎಂ.ಮೋಹನ್‌ರೆಡ್ಡಿ, ಡಿವೈಎಸ್‌ಪಿ ಹೆಚ್.ಟಿ.ಸುನೀಲ್‌ಕುಮಾರ್ ಪಾಲ್ಗೊಳ್ಳಲಿದ್ದಾರೆ.

ಒಂದನೇ ಪುಟದಿಂದ

ಅಹವಾಲು ಸ್ವೀಕಾರ!

ಪರಿಹಾರ ಕಂಡುಕೊಳ್ಳುವ ಕಾರ್ಯಕ್ರಮ. ಕಾರ್ಯಕರ್ತರು ವೇದಿಕೆಯಿಂದ ಕೆಳಗೆ ಇಳಿಯಿರಿ. ಜನರಿಗೆ ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು. ಆದರೂ ಕಾರ್ಯಕರ್ತರು ನಿಯಂತ್ರಣಕ್ಕೆ ಬಾರದಿದ್ದಾಗ ಸಚಿವರು, ತಮಗೆ ಹಾರ–ತುರಾಯಿ ಹಾಕಬಾರದು. ಕಾರ್ಯಕರ್ತರೆಲ್ಲಾ ಕೆಳಗೆ ಇಳಿಯಿರಿ ಎಂದು ಗರಂ ಆದರು. ಪೊಲೀಸರು ಹಾಗೂ ಸಚಿವರ ಅಂಗ ರಕ್ಷಕರು ಪರಿಸ್ಥಿತಿ ನಿಯಂತ್ರಿಸಲು ಹೆಣಗಾಡಿದರು. ಅಂತಿಮವಾಗಿ ಅಂಬೇಡ್ಕರ್ ಭವನದ ಬಾಗಿಲು ಹಾಕಿ, ಕಾರ್ಯಕರ್ತರನ್ನು ನಿಯಂತ್ರಿಸಿ, ಜನರಿಗೆ ಅಹವಾಲು ಸಲ್ಲಿಸಲು ಅವಕಾಶ ಮಾಡಿಕೊಡಲಾಯಿತು.

ಕಾರ್ಯಕ್ರಮ ಬೆಳಗ್ಗೆ 10 ಗಂಟೆಗೆ ಆರಂಭವಾಗುತ್ತದೆ ಎಂದು ಘೋಷಿಸಿದ್ದರೂ, ಕುಮಾರಸ್ವಾಮಿ ಅಂಬೇಡ್ಕರ್ ಭವನಕ್ಕೆ ಬಂದದ್ದು ಮಧ್ಯಾಹ್ನ 12.15ಕ್ಕೆ. ಮೊದಲಿಗೆ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ಜನತಾ ದರ್ಶನಕ್ಕೆ ಅಧಿಕಾರಿಗಳು ಹೋಗಬಾರದು ಎಂದು ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ ಎಂದು ಕಿಡಿಕಾರಿದರು. ನನ್ನಿಂದ ಅಧಿಕಾರಿಗಳನ್ನು ದೂರ ಮಾಡಬಹುದು, ಜನರನ್ನು ದೂರ ಮಾಡಲು ಸಾಧ್ಯವಿಲ್ಲ ಎಂದರಲ್ಲದೆ, ಈ ಹಿಂದೆ ಬೆಂಗಳೂರು ಗ್ರಾಮಾಂತರದಲ್ಲಿ ಸಂಸದರಾಗಿದ್ದ ಡಿ.ಕೆ.ಸುರೇಶ್ ಜನತಾ ದರ್ಶನಕ್ಕೆ ಅಧಿಕಾರಿಗಳನ್ನು ಕರೆದುಕೊಂಡು ಹೋಗುತ್ತಿರಲಿಲ್ಲವೇ ಎಂದು ಪ್ರಶ್ನಿಸಿದರು. ಕೊನೆಗೆ ಇದು ಸರ್ಕಾರಿ ಕಾರ್ಯಕ್ರಮವಲ್ಲ. ಆದ್ದರಿಂದ ನಮ್ಮ ಪಕ್ಷದ ಮಾಜಿ ಶಾಸಕರು ವೇದಿಕೆಗೆ ಬನ್ನಿ. ನಿಮ್ಮ ನಿಮ್ಮ ತಾಲೂಕಿನ ಸಮಸ್ಯೆಗಳನ್ನು ನೀವು ಕೇಳಿದರೆ ಒಳ್ಳೆಯದು. ಅದಕ್ಕೆ ಯಾವ ರೀತಿ ಸ್ಪಂದಿಸಬೇಕು ಎಂಬುದನ್ನು ಆಮೇಲೆ ನಿರ್ಧರಿಸೋಣ ಎನ್ನುವ ಮೂಲಕ ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ ಸೇರಿದಂತೆ ಮಾಜಿ ಶಾಸಕರನ್ನು ವೇದಿಕೆಗೆ ಕರೆದು ಅವರೊಂದಿಗೆ ಕುರಿತು ಅಹವಾಲು ಸ್ವೀಕರಿಸಿದರು. ಪ್ರಾರಂಭದಲ್ಲಿ ವೇದಿಕೆಯ ಕೆಳಗಿದ್ದ ವಿಕಲಚೇತನರ ಬಳಿಗೆ ತೆರಳಿದ ಕುಮಾರಸ್ವಾಮಿ, ಅವರೆಲ್ಲರ ಸಮಸ್ಯೆಗಳನ್ನು ಆಲಿಸಿ ಮನವಿ ಪತ್ರಗಳನ್ನು ಪಡೆದರು. ಈ ಸಂದರ್ಭದಲ್ಲೂ ಕಾರ್ಯಕರ್ತರ ಕಿರಿಕಿರಿ ತಪ್ಪಲಿಲ್ಲ.

ನಂತರ ವೇದಿಕೆ ಹತ್ತಿದ ಕುಮಾರಸ್ವಾಮಿ ಅವರು, ಕಾರ್ಯಕರ್ತರ ಕಿರಿಕಿರಿ ನಡುವೆಯೂ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು. ಮಧ್ಯಾಹ್ನ ವೇದಿಕೆಗೇ ಊಟ ತರಿಸಿಕೊಂಡು, ಸೇವಿಸುತ್ತಲೇ ಸಮಸ್ಯೆಗಳನ್ನು ಆಲಿಸಿದರು. ಈ ನಡುವೆ ಸಂಜೆ 4.30ರ ಸುಮಾರಿನಲ್ಲಿ ಶ್ರವಣಬೆಳಗೊಳ ಶಾಸಕ ಹಾಗೂ ರಾಜ್ಯ ಒಕ್ಕಲಿಗರ ಸಂಘದ ನೂತನ ಅಧ್ಯಕ್ಷ ಬಾಲಕೃಷ್ಣ ನೇತೃತ್ವದಲ್ಲಿ ಬಂದ ನಿಯೋಗದೊಂದಿಗೆ ಸುಮಾರು ಒಂದೂವರೆ ಗಂಟೆ ಕಾಲ ಚರ್ಚೆ ನಡೆಸಿದರು. ಬಳಿಕ ಅಹವಾಲು ಸ್ವೀಕರಿಸಿದ ಕುಮಾರಸ್ವಾಮಿ, 7 ಗಂಟೆಯವರೆಗೆ ಸಮಸ್ಯೆಗಳನ್ನು ಆಲಿಸಿದರು.

ಒಟ್ಟಾರೆ ಕುಮಾರಸ್ವಾಮಿಯವರ ಜನತಾ ದರ್ಶನ ಕಾರ್ಯಕ್ರಮ ಕೇವಲ ಅಹವಾಲು ಆಲಿಕೆಗೆ ಸೀಮಿತವಾಗಿತ್ತು. ಕುಮಾರಸ್ವಾಮಿ ಅವರ ಬಳಿ ಅಹವಾಲು ತೋಡಿಕೊಳ್ಳಲು ಬಂದವರಲ್ಲಿ ಚಿಕಿತ್ಸಾ ವೆಚ್ಚಕ್ಕೆ ಸಹಾಯ ಮಾಡುವಂತೆ, ಉದ್ಯೋಗ ಕಲ್ಪಿಸುವಂತೆ ಮತ್ತು ವಿದ್ಯಾಭ್ಯಾಸಕ್ಕೆ ಆರ್ಥಿಕ ಸಹಾಯ ನೀಡುವಂತೆ ಮನವಿ ಸಲ್ಲಿಸಿದವರೇ ಹೆಚ್ಚಾಗಿದ್ದರು ಎಂದು ಹೇಳಲಾಗಿದೆ. ಅಲ್ಲದೇ ಕಂದಾಯ, ಕೃಷಿ ಜಮೀನು, ವಿದ್ಯುತ್ ಸಮಸ್ಯೆ, ಗ್ರಾಮಗಳಲ್ಲಿ ರಸ್ತೆ ಸಮಸ್ಯೆ ಮುಂತಾದವು ಕೇಳಿಬಂತು.

ಈ ಕಾರ್ಯಕ್ರಮದಲ್ಲಿ ಕುಮಾರಸ್ವಾಮಿಯವರೊಂದಿಗೆ ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಸಾ.ರಾ.ಮಹೇಶ್, ಶಾಸಕರಾದ ಹೆಚ್.ಟಿ.ಮಂಜು, ಕೆ.ವಿವೇಕಾನಂದ, ಮಾಜಿ ಶಾಸಕರಾದ ಕೆ.ಸುರೇಶ್‌ಗೌಡ, ರವೀಂದ್ರ ಶ್ರೀಕಂಠಯ್ಯ, ಡಾ.ಕೆ.ಅನ್ನದಾನಿ, ಕೆ.ಟಿ.ಶ್ರೀಕಂಠೇಗೌಡ, ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರ, ಉಪಾಧ್ಯಕ್ಷ ಎಂ.ಎಸ್.ರಘುನಂದನ್, ಟಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಮುಖಂಡರಾದ ನಲ್ಲಿಗೆರೆ ಬಾಲು, ಬಿ.ಆರ್.ಸುರೇಶ್, ಕೇಂದ್ರ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಕೃಷ್ಣಯ್ಯ ಉಪಸ್ಥಿತರಿದ್ದರು.

ಸಿಎಂ ಸಿದ್ದರಾಮಯ್ಯ ಮುಗಿಸಲು ಕಾಂಗ್ರೆಸ್ಸಿಗರಿಂದಲೇ ಪಿತೂರಿ

ಮಂಡ್ಯ, ಜು.5–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮುಗಿಸಲು ಕಾಂಗ್ರೆಸ್ಸಿಗರಿಂದಲೇ ಪಿತೂರಿ ನಡೆಯುತ್ತಿದೆ. ಹಳೆಯ ಸುದ್ದಿಯಾದ ಮೈಸೂರು ಮುಡಾ ಹಗರಣ ಈಗ ದೊಡ್ಡ ಪ್ರಚಾರ ಪಡೆಯುವುದರ ಹಿಂದೆ ಕಾಂಗ್ರೆಸ್ಸಿಗರ ಸಂಚು ಇದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಾಂಬ್ ಸಿಡಿಸಿದ್ದಾರೆ.

ಶುಕ್ರವಾರ ಮಂಡ್ಯದ ಕಾಳಿಕಾಂಬ ದೇವಸ್ಥಾನದಲ್ಲಿ ದೇವರ ದರ್ಶನ ಪಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸ್ಥಾನಕ್ಕಾಗಿ ಟವಲ್ ಹಾಸಿ ಕುಳಿತಿರುವವರ ಕೈವಾಡ ಈ ಪ್ರಕರಣದಲ್ಲಿ ಇದೆ. ಈಗಿನ ಮುಖ್ಯಮಂತ್ರಿಗಳನ್ನು ತೆಗೆದು ತಾವು ಮುಖ್ಯಮಂತ್ರಿಗಳಾಗಬೇಕು ಎಂದು ಅವರು ಕಾಯುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಇಮೇಜ್ ಹಾಳು ಮಾಡಲು ಪ್ಲಾನ್ ಮಾಡಿದ್ದಾರೆ. ಮುಡಾದಲ್ಲಿ ಸಿಎಂ ಮಾಡಿರುವ ವ್ಯವಹಾರಗಳ ದಾಖಲಾತಿಗಳನ್ನು ತೆಗೆದು ವಕೀಲರ ಸಲಹೆಯನ್ನು ಪಡೆದುಕೊಂಡು ಅವರನ್ನು ಮುಗಿಸಲು ಕಾಂಗ್ರೆಸ್ಸಿಗರಿಂದಲೇ ಪಿತೂರಿ ನಡೆದಿದೆ ಎಂದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ ಎಂದು ಕುಮಾರಸ್ವಾಮಿಯವರು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಪರೋಕ್ಷವಾಗಿ ಉಲ್ಲೇಖಿಸಿದರು.

ಬೇಬಿ ಬೆಟ್ಟದಲ್ಲಿ ಟ್ರಯಲ್ ಬ್ಲಾಸ್ಟ್ ನಿಲ್ಲಿಸಲು ಯತ್ನ

ಮಂಡ್ಯ, ಜು.5–ಟ್ರಯಲ್ ಬ್ಲಾಸ್ಟ್ ನಿಲ್ಲಿಸುವಂತೆ ರಾಜ್ಯ ಸರ್ಕಾರದೊಂದಿಗೆ ಮಾತುಕತೆ ನಡೆಸುತ್ತೇನೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ರೈತರಿಗೆ ಭರವಸೆ ನೀಡಿದರು.

ಶುಕ್ರವಾರ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ರೈತ ಹಿತರಕ್ಷಣಾ ಸಮಿತಿ ಟ್ರಯಲ್ ಬ್ಲಾಸ್ಟ್ ಖಂಡಿಸಿ ನಡೆಸುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ನಿರ್ಮಿಸಿರುವ ಕೆಆರ್‌ಎಸ್ ಅಣೆಕಟ್ಟೆಗೆ ಯಾವುದೇ ರೀತಿಯ ಸಮಸ್ಯೆಗಳು ಉದ್ಭವವಾಗಬಾರದು ಎಂಬುದು ನನ್ನ ಅಭಿಪ್ರಾಯ. ಆದರೆ ಬೇಬಿಬೆಟ್ಟ ಭಾಗದಲ್ಲಿ ಹೆಚ್ಚಿನ ಗಣಿಗಾರಿಕೆ ನಡೆಯುತ್ತಿದೆ. ಈ ಹಿಂದೆ ಸಣ್ಣ ಮಟ್ಟದಲ್ಲಿ ಕೆಲವರು ಜಲ್ಲಿ ಒಡೆಯುತ್ತಿದ್ದರು. ಆದರೆ ಇತ್ತೀಚೆಗೆ ಮೂಲಭೂತ ಸೌಕರ್ಯ ಹೆಸರಿನಲ್ಲಿ ದೊಡ್ಡ ಬ್ಲಾಸ್ಟ್ ಮಾಡುತ್ತಿದ್ದು, ಅದರಿಂದ ಕೆಆರ್‌ಎಸ್ ಮೇಲೆ ಪರಿಣಾಮ ಬೀರುವ ಆತಂಕ ಕಳೆದ 8–10 ವರ್ಷಗಳಿಂದ ಇದೆ. ಕೋರ್ಟ್ ಆದೇಶದ ಮೇರೆಗೆ ಟ್ರಯಲ್ ಬ್ಲಾಸ್ಟ್‌ಗೆ ಜಿಲ್ಲಾಡಳಿತ ಸಿದ್ಧತೆ ನಡೆಸಿದೆ. ಈ ಬಗ್ಗೆ ಚರ್ಚೆ ಮಾಡುತ್ತೇನೆ. ತಕ್ಷಣವೇ ಟ್ರಯಲ್ ಬ್ಲಾಸ್ಟ್ ನಿಲ್ಲಿಸುವಂತೆ ರಾಜ್ಯ ಸರ್ಕಾರ ಹಾಗೂ ಮುಖ್ಯ ಕಾರ್ಯದರ್ಶಿ ಜೊತೆ ಮಾತನಾಡಿ, ಟ್ರಯಲ್ ಬ್ಲಾಸ್ಟ್ ನಿಲ್ಲಿಸಲು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ನಾನು ರೈತ ಕುಟುಂಬದಿಂದಲೇ ಬಂದಿದ್ದು, ರೈತರ ಪರ ಇದ್ದೇನೆ. ಮಂಡ್ಯ, ಬೆಂಗಳೂರಿಗೆ ಕುಡಿಯುವ ನೀರನ್ನು ಕೆಆರ್‌ಎಸ್ ಕೊಡುತ್ತಿದೆ. ಕೆಆರ್‌ಎಸ್ ಅಣೆಕಟ್ಟೆ ಇಲ್ಲದಿದ್ದರೆ ಜನರ ಪರಿಸ್ಥಿತಿ ಏನೆಂಬುದು ಅರ್ಥಮಾಡಿಕೊಳ್ಳಬೇಕು. ಯಾರಿಗೂ ಟ್ರಯಲ್ ಬ್ಲಾಸ್ಟ್ ಬಗ್ಗೆ ಆತಂಕ ಬೇಡ. ತಕ್ಷಣ ನಿಲ್ಲಿಸಲು ಹೇಳುತ್ತೇನೆ. ಕೋರ್ಟ್‌ಗೂ ಸಹ ಹೆಚ್ಚುವರಿ ಅಡ್ವೋಕೇಟ್ ಅವರನ್ನು ಕಳುಹಿಸಿ ಸರಿಯಾದ ರೀತಿ ಮನವರಿಕೆ ಮಾಡಲು ಸರ್ಕಾರದೊಂದಿಗೆ ಮಾತುಕತೆ ನಡೆಸಲಿದ್ದು, ನಾನು ನಿಮ್ಮ ಜತೆ ಇದ್ದೇನೆ ಎಂದರು.ಇದೇ ಸಂದರ್ಭದಲ್ಲಿ ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ, ಕೆ.ಬೋರಯ್ಯ, ಕನ್ನಡ ಸೇನೆ ಮಂಜು, ಇಂಡುವಾಳು ಬಸವರಾಜು ಇತರರಿದ್ದರು.

ಕೀರ್ ಸ್ಟಾರ್ಮರ್ ಬ್ರಿಟನ್ ಪ್ರಧಾನಿ, ಏಂಜೆಲಾ ರೇನರ್ ಉಪ ಪ್ರಧಾನಿ

ಲಂಡನ್, ಜು.5– 14 ವರ್ಷಗಳ ಕನ್ಸರ್ವೇಟಿವ್ ಆಡಳಿತವನ್ನು ಕೊನೆಗೊಳಿಸಿದ ಲೇಬರ್ ಪಕ್ಷದ ಪ್ರಚಂಡ ವಿಜಯದ ನಂತರ ಕೀರ್ ಸ್ಟಾರ್ಮರ್ ಅವರು ಬ್ರಿಟನ್‌ನ ನೂತನ ಪ್ರಧಾನಮಂತ್ರಿಯಾಗಿ ಅಧಿಕಾರಕ್ಕೇರಿದ್ದಾರೆ. ಡೌನಿಂಗ್ ಸ್ಟ್ರೀಟ್‌ನ ಹೊರಗೆ ತನ್ನ ಮೊದಲ ಭಾಷಣದಲ್ಲಿ, ಸ್ಟಾರ್ಮರ್ ಮುಂದಿನ ಕೆಲಸದ ತುರ್ತುಸ್ಥಿತಿಯನ್ನು ಒತ್ತಿಹೇಳಿದ್ದು, ತಕ್ಷಣವೇ ಕಾರ್ಯ ಪ್ರಾರಂಭಿಸುವುದಾಗಿ ಪ್ರತಿಜ್ಞೆ ಮಾಡಿದರು. ರಿಷಿ ಸುನಕ್ ಅವರು ಚುನಾವಣಾ ಫಲಿತಾಂಶದ ನಂತರ ಪ್ರಧಾನಿ ಮತ್ತು ಕನ್ಸರ್ವೇಟಿವ್ ಪಕ್ಷದ ನಾಯಕ ಸ್ಥಾನಕ್ಕೆ ರಾಜೀನಾಮೆ ನೀಡಿದರು.



ಕೀರ್ ಸ್ಟಾರ್ಮರ್

ಕನ್ಸರ್ವೇಟಿವ್‌ಗಳಿಗೆ ದೊಡ್ಡ ಹಿನ್ನಡೆಯಲ್ಲಿ, ಮಾಜಿ ಪ್ರಧಾನಿ ಲಿಜ್ ಟ್ರಸ್ ಅವರು ಪಕ್ಷದ ಭದ್ರಕೋಟೆ ಸೌತ್ ವೆಸ್ಟ್ ನಾರ್ಫೋಕ್‌ನಿಂದ ಸೋತರು. ಅವರು 2010 ರಿಂದ ಈ ಸ್ಥಾನವನ್ನು ಹೊಂದಿದ್ದಾರೆ. ಇಂದು ನಾವು ಮುಂದಿನ ಅಧ್ಯಾಯವನ್ನು ಪ್ರಾರಂಭಿಸುತ್ತೇವೆ. ಬದಲಾವಣೆಯ ಕೆಲಸವನ್ನು ಪ್ರಾರಂಭಿಸುತ್ತೇವೆ, ರಾಷ್ಟ್ರೀಯ ನವೀಕರಣದ ಧ್ಯೇಯ ಮತ್ತು ನಮ್ಮ ದೇಶವನ್ನು ಪುನರ್ನಿರ್ಮಿಸಲು ಪ್ರಾರಂಭಿಸುತ್ತೇವೆ ಎಂದು ಸಂಸತ್ತಿನಲ್ಲಿ ಬಹುಮತವನ್ನು ಪಡೆದುಕೊಂಡ ನಂತರ ಲಂಡನ್‌ನಲ್ಲಿ ವಿಜಯೋತ್ಸವದ ಭಾಷಣದಲ್ಲಿ ಸ್ಟಾರ್ಮರ್ ಹೇಳಿದ್ದಾರೆ.

ಜುಲೈ 5 ರಂದು ನಡೆದ ರಾಷ್ಟ್ರೀಯ ಚುನಾವಣೆಯಲ್ಲಿ ಸೋಲೊಪ್ಪಿಕೊಂಡ ಬ್ರಿಟನ್ ಪ್ರಧಾನಿ ರಿಷಿ ಸುನಕ್, ವಿರೋಧ ಪಕ್ಷ ಲೇಬರ್ ಪಾರ್ಟಿ ಗೆದ್ದಿದೆ ಎಂದು ಹೇಳಿದರು. ಲೇಬರ್ ಪಾರ್ಟಿ ಈ ಸಾರ್ವತ್ರಿಕ ಚುನಾವಣೆಯಲ್ಲಿ ಗೆದ್ದಿದೆ. ಅವರ ವಿಜಯಕ್ಕಾಗಿ ಅಭಿನಂದಿಸಲು ನಾನು ಸರ್ ಕೀರ್ ಸ್ಟಾರ್ಮರ್ ಅವರಿಗೆ ಕರೆ ಮಾಡಿದ್ದೇನೆ ಎಂದು ಉತ್ತರ ಇಂಗ್ಲೆಂಡ್‌ನಲ್ಲಿ ತಮ್ಮ ಸಂಸದೀಯ ಸ್ಥಾನವನ್ನು ಗೆದ್ದ ನಂತರ ಸುನಕ್ ಹೇಳಿದ್ದಾರೆ.

ಉಪ ಪ್ರಧಾನ ಮಂತ್ರಿಯಾಗಿ ಏಂಜೆಲಾ ರೇನರ್: ಸಾರ್ವತ್ರಿಕ ಚುನಾವಣೆಯಲ್ಲಿ ಲೇಬರ್ ಅಧಿಕಾರಕ್ಕೆ ಬಂದ ನಂತರ ಹೊಸ ಯುಕೆ ಪ್ರಧಾನ ಮಂತ್ರಿ ಕೀರ್ ಸ್ಟಾರ್ಮರ್ ಶುಕ್ರವಾರ ಏಂಜೆಲಾ ರೇನರ್ ಅವರನ್ನು ಉಪಪ್ರಧಾನಿಯಾಗಿ ನೇಮಿಸಿದರು. 44 ವರ್ಷದ ರೇನರ್ ಅವರು ತಮ್ಮ ಕ್ಯಾಬಿನೆಟ್‌ಗೆ ಸ್ಟಾರ್ಮರ್‌ನ ಮೊದಲ ದೃಢಪಡಿಸಿದ ನೇಮಕಾತಿಯಾಗಿದ್ದಾರೆ. ಅದೇ ವೇಳೆ ರಾಚೆಲ್ ರೀವ್ಸ್ ಅವರು ಯುಕೆಯ ಮೊದಲ ಮಹಿಳಾ ಕುಲಪತಿಯಾಗಿ ನೇಮಕಗೊಂಡಿದ್ದಾರೆ.

ಬ್ರಿಟಿಷ್ ಸಂಸತ್ತಿಗೆ ಆಯ್ಕೆಯಾದ ಮಲಯಾಳಿ: ಕೇರಳದ ಕೊಟ್ಟಾಯಂ ಜಿಲ್ಲೆಯ ಪುಟ್ಟ ಗ್ರಾಮವಾದ ಕೈಪುಳ ಮೂಲದ ಸೋಜನ್ ಜೋಸೆಫ್ (49) ಗೆದ್ದಿದ್ದಾರೆ. ಈ ಹಿಂದೆ ಕನ್ಸರ್ವೇಟಿವ್ ಪಕ್ಷವು ಹೊಂದಿದ್ದ ಕೆಂಟ್ ಕೌಂಟಿಯ ಆಶ್‌ಫೋರ್ಡ್ ಕ್ಷೇತ್ರದಿಂದ ಜೋಸೆಫ್ ಗೆದ್ದಿದ್ದಾರೆ. ಕ್ಷೇತ್ರದಲ್ಲಿ ಲೇಬರ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಜೋಸೆಫ್, ಅವರು 2002 ರಿಂದ ಬ್ರಿಟನ್‌ನಲ್ಲಿ ವಾಸಿಸುತ್ತಿದ್ದಾರೆ. ಅವರ ತಂದೆ ಕೆ ಟಿ ಜೋಸೆಫ್, ಅವರ ಮೂವರು ಸಹೋದರಿಯರು ಮತ್ತು ಇಲ್ಲಿನ ಕುಟುಂಬದ ಮನೆಯಲ್ಲಿ ನೆರೆದಿದ್ದ ಇತರ ಸಂಬಂಧಿಕರು ಅವರ ಗೆಲುವಿನ ಸುದ್ದಿ ಕೇಳಿ ಸಂತಸ ವ್ಯಕ್ತಪಡಿಸಿದ್ದಾರೆ.

ಬಿಎಸ್‌ಪಿ ತಮಿಳುನಾಡು ರಾಜ್ಯಾಧ್ಯಕ್ಷ ಆರ್ಮ್‌ಸ್ಟ್ರಾಂಗ್ ಬರ್ಬರ ಹತ್ಯೆ

ಚೆನ್ನೈ, ಜು.5– ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ತಮಿಳುನಾಡು ಅಧ್ಯಕ್ಷ ಆರ್ಮ್‌ಸ್ಟ್ರಾಂಗ್ ಅವರನ್ನು ಇಂದು (ಜುಲೈ 5) ಪೆರಂಬೂರ್‌ನಲ್ಲಿರುವ ಅವರ ನಿವಾಸದ ಬಳಿ 6 ಮಂದಿ ಅಪರಿಚಿತ ವ್ಯಕ್ತಿಗಳ ಗುಂಪೊಂದು ಬರ್ಬರವಾಗಿ ಕೊಲೆ ಮಾಡಿದೆ ಎಂದು ಚೆನ್ನೈ ಪೊಲೀಸರು ಮಾಹಿತಿ ನೀಡಿದ್ದಾರೆ. ಸೇಂಬಿಯಂ ಪೊಲೀಸರ ವ್ಯಾಪ್ತಿಯಲ್ಲಿ ಈ ಭೀಕರ ಘಟನೆ ಸಂಭವಿಸಿದೆ ದುಷ್ಕರ್ಮಿಗಳನ್ನು ಬಂಧಿಸಲು ತೀವ್ರ ಶೋಧ ಕಾರ್ಯಾಚರಣೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ. ಚೆನ್ನೈನ ಪೆರಂಬೂರ್ ಪ್ರದೇಶದಲ್ಲಿ ಈ ಆಘಾತಕಾರಿ ಘಟನೆ ನಡೆದಿದೆ.



ವರದಿಗಳ ಪ್ರಕಾರ, ಅಪರಿಚಿತ ಗ್ಯಾಂಗ್ ಪೆರಂಬೂರಿನ ಸದಾಯಪ್ಪನ್ ಸ್ಟ್ರೀಟ್‌ನಲ್ಲಿರುವ ಅವರ ಮನೆಯ ಸಮೀಪವೇ ಅವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಿ, ಪರಾರಿಯಾಗಿದೆ ತಕ್ಷಣ ಬಿಎಸ್‌ಪಿ ರಾಜ್ಯಾಧ್ಯಕ್ಷರನ್ನು ಚಿಕಿತ್ಸೆಗಾಗಿ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಅವರ ಜೀವ ಉಳಿಸಲು ಸಾಧ್ಯವಾಗಲಿಲ್ಲ. ಸದ್ಯ ಪೊಲೀಸರು ಈ ಕೊಲೆಯ ತನಿಖೆ ನಡೆಸುತ್ತಿದ್ದಾರೆ. ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಪಳನಿಸ್ವಾಮಿ ಈ ಹತ್ಯೆಯನ್ನು ಖಂಡಿಸಿದ್ದಾರೆ. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಮತ್ತು ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಈ ಘಟನೆಯ ಬಗ್ಗೆ ಆಘಾತ ವ್ಯಕ್ತಪಡಿಸಿದ್ದಾರೆ.

ಗೃಹ ಬಳಕೆ ಪಾತ್ರೆಗೆ ಐಎಸ್‌ಐ ಗುರುತು ಕಡ್ಡಾಯ



ನವದೆಹಲಿ, ಜು.5– ಗೃಹ ಬಳಕೆಯ ಸ್ಟೈನ್‌ಲೆಸ್ ಸ್ಟೀಲ್ ಮತ್ತು ಅಲ್ಯೂಮಿನಿಯಂ ಪಾತ್ರೆಗಳ ಮೇಲೆ ಐಎಸ್‌ಐ ಗುರುತನ್ನು ಕಡ್ಡಾಯವಾಗಿ ನಮೂದಿಸಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ.

ಗ್ರಾಹಕರ ಸುರಕ್ಷತೆ ಮತ್ತು ವಸ್ತುಗಳ ಗುಣಮಟ್ಟ ಹೆಚ್ಚಿಸಲು ಸರ್ಕಾರ ಈ ಕ್ರಮಕೈಗೊಂಡಿದೆ ಎಂದು ಭಾರತೀಯ ಮಾನದಂಡ ಮಂಡಳಿಯು (ಬಿಐಎಸ್) ಶುಕ್ರವಾರ ತಿಳಿಸಿದೆ. ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಧೀನದಲ್ಲಿ ಬರುವ ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು (ಡಿಪಿಐಐಟಿ) ಗುಣಮಟ್ಟ ನಿಯಂತ್ರಣ ಕುರಿತು ಮಾರ್ಚ್ 14ರಂದು ಆದೇಶ ಹೊರಡಿಸಿತ್ತು. ಐಎಸ್‌ಐ ಗುರುತು ಇಲ್ಲದ ಸ್ಟೈನ್‌ಲೆಸ್ ಸ್ಟೀಲ್ ಮತ್ತು ಅಲ್ಯೂಮಿನಿಯಂ ಪಾತ್ರೆಗಳ ತಯಾರಿಕೆ, ಆಮದು, ಮಾರಾಟ, ವಿತರಣೆ, ಸಂಗ್ರಹಣೆ ಅಥವಾ ಮಾರಾಟ ಪ್ರದರ್ಶನವನ್ನು ನಿಷೇಧಿಸಲಾಗಿದೆ. ಈ ಆದೇಶ ಉಲ್ಲಂಘಿಸಿದರೆ ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡಿದೆ. ಗುಣಮಟ್ಟದ ನಿರ್ವಹಣೆಗಾಗಿ ಸ್ಟೈನ್‌ಲೆಸ್ ಸ್ಟೀಲ್ ವಸ್ತುಗಳಿಗೆ ಐಎಸ್14756:2022 ಮತ್ತು ಅಲ್ಯೂಮಿನಿಯಂ ಪಾತ್ರೆಗಳಿಗೆ ಐಎಸ್1660:2024 ಪ್ರಮಾಣ ಪತ್ರ ಪಡೆಯಬೇಕಿದೆ. ಈ ಮಾನದಂಡವು ಗ್ರಾಹಕರ ವಿಶ್ವಾಸವನ್ನು ಹೆಚ್ಚಿಸಲಿದೆ ಎಂದು ಹೇಳಿದೆ.

ದೇಶ - ವಿದೇಶ

ಪಾಕಿಸ್ತಾನದಲ್ಲಿ ವಾಟ್ಸಾಪ್, ಫೇಸ್‌ಬುಕ್, ಯೂಟ್ಯೂಬ್, ಇನ್‌ಸ್ಟಾಗ್ರಾಂ ನಿಷಿದ್ಧ



ಕರಾಚಿ, ಜು.5– ಎಕ್ಸ್(ಟ್ವಿಟ್ಟರ್)ನ್ನು ನಿಷೇಧಿಸಿರುವ ಪಾಕಿಸ್ತಾನ ಸರ್ಕಾರವು ಇದೀಗ, ಸಾಮಾಜಿಕ ಮಾಧ್ಯಮಗಳಾದ ಯೂಟ್ಯೂಬ್, ವಾಟ್ಸಾಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ ಹಾಗೂ ಟಿಕ್‌ಟಾಕ್ ನಿಷೇಧಕ್ಕೆ ಮುಂದಾಗಿದೆ. ಜುಲೈ 13ರಿಂದ 18ರವರೆಗೆ ಆರು ದಿನಗಳ ಕಾಲ ಇವುಗಳಿಗೆ ನಿಷೇಧ ಹೇರಲಾಗಿದೆ. ಮೊಹರಂ ತಿಂಗಳಿನಲ್ಲಿ ದ್ವೇಷಪೂರಿತ ಭಾಷಣವಾಗಲಿ, ತಪ್ಪು ಮಾಹಿತಿಯಾಗಲಿ ರವಾನೆಯಾಗದಂತೆ ನೋಡಿಕೊಳ್ಳಲು ಪಂಜಾಬ್ ಮುಖ್ಯಮಂತ್ರಿ ಮರ್ಯಮ್ ನವಾಜ್ ಈ ಕ್ರಮ ಕೈಗೊಂಡಿದ್ದಾರೆ.

ಪಾಕಿಸ್ತಾನ ಸರ್ಕಾರವು ಇದಕ್ಕಾಗಿ ಸಂಪೂರ್ಣವಾಗಿ ಸಿದ್ಧವಾಗಿದೆ ಮರ್ಯಮ್ ನವಾಜ್ ಅವರ ಕಾನೂನು ಮತ್ತು ಸುವ್ಯವಸ್ಥೆಯ ಸಂಪುಟ ಸಮಿತಿಯು ಈ ಪ್ರಸ್ತಾಪವನ್ನು ಮಂಡಿಸಿದೆ. ಈ ಮೂಲಕ ಸಂಸ್ಕೃತಿಯ ಬಗ್ಗೆ ದ್ವೇಷ ಹರಡುವುದನ್ನು ಮತ್ತು ಯಾವುದೇ ಅಪಪ್ರಚಾರ ಮಾಡುವುದನ್ನು ಹೆಚ್ಚಿನ ಪ್ರಮಾಣದಲ್ಲಿ ನಿಲ್ಲಿಸಬಹುದು ಎಂಬುದು ಅವರ ಅಭಿಪ್ರಾಯವಾಗಿದೆ. ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸುವಂತೆ ಮರ್ಯಮ್ ನವಾಜ್ ಅವರು ದೇಶದ ಪ್ರಧಾನಿ ಬಳಿ ಮನವಿ ಮಾಡಿದ್ದಾರೆ.

ಪಾಕಿಸ್ತಾನದ ಹಲವು ಅಧಿಕಾರಿಗಳು ಸಾಮಾಜಿಕ ಮಾಧ್ಯಮಗಳ ವಿರುದ್ಧ ಮಾತನಾಡುತ್ತಿದ್ದಾರೆ, ಅದರಲ್ಲಿ ಪಾಕಿಸ್ತಾನದ ಸೇನಾ ಮುಖ್ಯಸ್ಥ ಜನರಲ್ ಅಸಿಮ್ ಮುನೀರ್ ಅವರ ಹೆಸರೂ ಸೇರಿದೆ ಅವರು ಸಾಮಾಜಿಕ ಮಾಧ್ಯಮವನ್ನು ಭ್ರಷ್ಟ ಮಾಧ್ಯಮ ಎಂದು ಹೆಸರಿಸಿದ್ದಾರೆ.

ಎಲ್ಲಾ ಸಾಮಾಜಿಕ ಮಾಧ್ಯಮಗಳ ಮೇಲಿನ ನಿಷೇಧಕ್ಕೂ ಮುಂಚೆಯೇ, ಪಾಕಿಸ್ತಾನದ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶಗಳಲ್ಲಿ ಬದಲಾವಣೆಯ ಆರೋಪದ ಕಾರಣ ಪಾಕಿಸ್ತಾನದಲ್ಲಿ ಈ ವರ್ಷದ ಫೆಬ್ರವರಿ ತಿಂಗಳಲ್ಲಿ ಎಕ್ಸ್ ಅನ್ನು ನಿಷೇಧಿಸಲಾಯಿತು.

ಲೈಂಗಿಕ ಕಿರುಕುಳ: ಪಶ್ಚಿಮ ಬಂಗಾಳ ರಾಜ್ಯಪಾಲರ ವಿರುದ್ಧ ಸುಪ್ರೀಂಗೆ ಅರ್ಜಿ



ಕಲ್ಕತ್ತಾ ಜು.5– ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ.ಬೋಸ್ ಅವರಿಂದ ಲೈಂಗಿಕ ಶೋಷಣೆಗೆ ಒಳಗಾಗಿರುವುದಾಗಿ ಆರೋಪಿಸಿದ್ದ ಸಂತ್ರಸ್ತ ಮಹಿಳೆ ಇದೀಗ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದಾರೆ. ಅಧಿಕಾರದ ಅವಧಿಯಲ್ಲಿ ತಾವು ಚಲಾಯಿಸಿದ ಅಧಿಕಾರ ಮತ್ತು ಕರ್ತವ್ಯದ ಕುರಿತು ರಾಜ್ಯಪಾಲರು ಯಾವುದೇ ನ್ಯಾಯಾಲಯಕ್ಕೂ ಹೇಳಿಕೆ ನೀಡಬೇಕಿಲ್ಲ ಎಂದು ಸಂವಿಧಾನದ 361ನೇ ವಿಧಿಯ ಅಡಿಯಲ್ಲಿ ನೀಡಲಾಗಿರುವ ರಕ್ಷಣೆಯನ್ನು ಪ್ರಶ್ನಿಸಿ ಮಹಿಳೆ ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ.

ಇಂಥ ವಿಧಿಯು ಸಂವಿಧಾನದ ಅಡಿಯಲ್ಲಿ ರಾಜ್ಯಪಾಲರಿಗೆ ರಕ್ಷಣೆ ನೀಡಿರುವ ಅರ್ಥ ಲೈಂಗಿಕ ಕಿರುಕುಳವೂ ಅವರ ಕೆಲಸದ ಭಾಗವೇ? ನ್ಯಾಯ ದೊರಕಲು ಅವರು ಅಧಿಕಾರದಿಂದ ಕೆಳಗಿಳಿಯುವ ತನಕ ಕಾಯಬೇಕೇ? ಎಂದು ಸಂತ್ರಸ್ತೆ ನ್ಯಾಯಾಲಯಕ್ಕೆ ಸಲ್ಲಿಸಿದ ಮನವಿಯಲ್ಲಿ ಕಟುವಾಗಿ ಪ್ರಶ್ನಿಸಿದ್ದಾರೆ. ಒಳ್ಳೆಯ ಕೆಲಸ ಕೊಡಿಸುವುದಾಗಿ ಹೇಳಿ ಕರೆಸಿಕೊಂಡ ರಾಜ್ಯಪಾಲರು ಏ.24 ಹಾಗು ಮೇ.2ರಂದು ರಾಜ ಭವನದ ಆವರಣದಲ್ಲೇ ತನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಮಹಿಳಾ ಸಿಬ್ಬಂದಿ ಆರೋಪಿಸಿದ್ದರು.


ಪಾಕಿಸ್ತಾನದಲ್ಲಿ ಪೆಟ್ರೋಲ್‌ಗಿಂತ ಹಾಲು ದುಬಾರಿ; ಲೀಟರ್‌ಗೆ 370 ರೂಪಾಯಿ!



ಇಸ್ಲಾಮಾಬಾದ್, ಜು.5– ಕಳೆದ ಒಂದು ವರ್ಷದಿಂದ ಪಾಕಿಸ್ತಾನ ಆರ್ಥಿಕವಾಗಿ ಜರ್ಝರಿತವಾಗಿದೆ. ಖಜಾನೆ ಖಾಲಿ ಖಾಲಿ, ವಿದೇಶದಿಂದ ಸಾಲದ ಶೂಲ, ಉತ್ಪಾದನೆ, ರಫ್ತು ಪಾತಾಳಕ್ಕೆ, ಆಮದು ಏರಿಕೆ. ಹಳಿ ತಪ್ಪಿರುವ ಪಾಕಿಸ್ತಾನದಲ್ಲಿ ಇದೀಗ ತೆರಿಗೆ ಹೆಚ್ಚಳ ಮಾಡಲಾಗಿದೆ. ಇದರ ಪರಿಣಾಮ ಒಂದು ಲೀಟರ್ ಹಾಲಿನ ಬೆಲೆ 370 ರೂಪಾಯಿಗೆ ಏರಿದೆ. ಫ್ರಾನ್ಸ್, ಆಸ್ಟ್ರೇಲಿಯಾ ಸೇರಿದಂತೆ ಮುಂದುವರಿದ ದೇಶಗಳಿಗಿಂತ ಪಾಕಿಸ್ತಾನದಲ್ಲಿ ಹಾಲಿನ ದರ ದುಬಾರಿಯಾಗಿದೆ.

ಪೆಟ್ರೋಲ್ ಬೆಲೆ 277 ರೂಪಾಯಿ ಪ್ರತಿ ಲೀಟರ್‌ಗೆ. ಆದರೆ ಹಾಲಿನ ಬೆಲೆ 1.33 ಅಮೆರಿಕನ್ ಡಾಲರ್. ಪ್ಯಾರಿಸ್‌ನಲ್ಲಿ ಒಂದು ಲೀಟರ್ ಹಾಲಿನ ಬೆಲೆ 1.23 ಅಮೆರಿಕನ್ ಡಾಲರ್, ಆಸ್ಟ್ರೇಲಿಯಾ ಮೆಲ್ಬೋರ್ನ್‌ನಲ್ಲಿ 1.08 ಅಮೆರಿಕನ್ ಡಾಲರ್. ಕಳೆದ ವಾರ ಪಾಕಿಸ್ತಾನದಲ್ಲಿ ಹಾಲಿನ ಮೇಲೆ ಶೇಕಡಾ 18ರಷ್ಟು ತೆರಿಗೆ ಏರಿಕೆ ಮಾಡಲಾಗಿದೆ. ಪಾಕಿಸ್ತಾನ ಹಣಕಾಸು ಸಚಿವ ಮೊಹಮ್ಮದ್ ಔರಂಗಜೇಬ್ ಈ ಘೋಷಣೆ ಮಾಡಿದ್ದರು. ಇತ್ತ ಸಗಟು ಮಾರುಕಟ್ಟೆ ದರ ಕೂಡ ಹೆಚ್ಚಳವಾಗಿದೆ. ಹೀಗಾಗಿ ಸರಿಸುಮಾರು ಶೇಕಡಾ 25ರಷ್ಟು ದರದಲ್ಲಿ ಏರಿಕೆಯಾಗಿದೆ. ಇದರ ಪರಿಣಾಮ ಹಾಲು 370 ರೂಪಾಯಿ ತಲುಪಿದೆ.

ಫಸ್ಟ್ ನೈಟ್ ರೂಮ್‌ನಲ್ಲೇ ನೇಣು ಬಿಗಿದುಕೊಂಡ ವರ!




ನವದೆಹಲಿ, ಜು.5– ಉತ್ತರ ಪ್ರದೇಶದ ಇಟವಾ ಜಿಲ್ಲೆಯಲ್ಲಿ ನವವಿವಾಹಿತ ವ್ಯಕ್ತಿ ತಮ್ಮ ಮೊದಲ ರಾತ್ರಿಯಂದೇ ಆತ್ಮಹತ್ಯೆಗೆ ಶರಣಾಗಿದ್ದಾರೆ. ಪತ್ನಿ ತವರು ಮನೆಗೆ ವಿದಾಯ ಹೇಳಿ, ಗಂಡನ ಮನೆಗೆ ಬಂದ ಕೆಲವೇ ಸಮಯದಲ್ಲಿ ಪತಿ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಈ ಘಟನೆ ಇಟವಾ ಪೊಲೀಸ್ ಸ್ಟೇಷನ್‌ನ ಉಸ್ರಾಹರ್ ಪ್ರದೇಶದಲ್ಲಿ ನಡೆದಿದೆ. ನಿವೃತ್ತ ಸೈನಿಕ ಗ್ಯಾನ್ ಸಿಂಗ್ ಅವರ ಕಿರಿಯ ಪುತ್ರ ಸತ್ಯೇಂದ್ರ ಅವರ ಮದುವೆಯ ಮುನ್ನದ ಮೆರವಣಿಗೆ ಜುಲೈ 2 ರಂದು ಗ್ರಾಮದಲ್ಲಿ ಅದ್ದೂರಿಯಾಗಿ ನೆರವೇರಿತ್ತು ರಾತ್ರಿಯಿಡೀ ಅದ್ದೂರಿಯಾಗಿ ಬ್ಯಾಂಡ್ ಬಾಜಾ ನಡೆದಿತ್ತು. ಆ ಬಳಿಕ ವಿಧಿ–ವಿಧಾನದ ಪ್ರಕಾರ ಸತ್ಯೇಂದ್ರ ಅವರ ವಿವಾಹ ನೆರವೇರಿತ್ತು. ಜುಲೈ 3ರಂದು ವಧು ತನ್ನ ತವರು ಮನೆಗೆ ವಿದಾಯ ಹೇಳಿ ಮೆರವಣಿಗೆಯಲ್ಲಿ ಗಂಡನ ಮನೆಗೆ ಬಂದಿದ್ದರು.

ಸಂಜೆಯ ವೇಳೆ ವರನ ಮನೆಯಲ್ಲಿ ಅದ್ದೂರಿಯಾಗಿ ಡಿಜೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಬಳಿಕ ಡಿಜೆಗೆ ಸ್ವತಃ ವರ ಸತ್ಯೇಂದ್ರ ಹಣವನ್ನೂ ನೀಡಿದ್ದಾರೆ. ಆದರೆ, ಇನ್ನೇನು ಮೊದಲ ರಾತ್ರಿಗೆ ಸಜ್ಜಾಗಬೇಕು ಎನ್ನುವ ಸಮಯದಲ್ಲಿ 2ನೇ ಮಹಡಿಯಲ್ಲಿ ತನ್ನ ಕೋಣೆಯಲ್ಲಿ ಸತ್ಯೇಂದ್ರ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹಾಲು ತೆಗೆದುಕೊಂಡು ವಧು ಕೋಣೆಗೆ ಬಂದಾಗ ಎಷ್ಟೇ ಬಡಿದರು ಬಾಗಿಲು ತೆಗೆದಿರಲಿಲ್ಲ. ಅನುಮಾನ ಬಂದು ಕಿಟಕಿಯಿಂದ ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ. ತಕ್ಷಣವೇ ಬಾಗಿಲನ್ನು ಒಡೆದು ಆತನನ್ನು ಆಸ್ಪತ್ರೆಗೆ ದಾಖಲು ಮಾಡಿದ್ದರು. ಈ ವೇಳೆ ವೈದ್ಯರು ಈತ ಸಾವು ಕಂಡಿದ್ದಾನೆ ಎಂದು ಘೋಷಣೆ ಮಾಡಿದ್ದಾರೆ.

ಮುಂಬೈ ಉಗ್ರರ ದಾಳಿಯ ಆರೋಪಿ ರಾಣಾ ಶೀಘ್ರದಲ್ಲಿಯೇ ಭಾರತಕ್ಕೆ



ನವದೆಹಲಿ, ಜು.5– 2008ರ ಮುಂಬೈ ಉಗ್ರರ ದಾಳಿಯ ಆರೋಪಿ, ಪಾಕಿಸ್ತಾನ ಮೂಲದ ಕೆನಡಾ ಉದ್ಯಮಿ ತಹವ್ವುರ್ ರಾಣಾನನ್ನು ಭಾರತಕ್ಕೆ ಕರೆತರುವ ದಿನಗಳು ಸಮೀಪಿಸುತ್ತಿವೆ. ಭಾರತ–ಯುಎಸ್ ಹಸ್ತಾಂತರ ಒಪ್ಪಂದದ ನಿಬಂಧನೆಗಳ ಅಡಿಯಲ್ಲಿ ತಹವ್ವುರ್ ರಾಣಾ ಅವರನ್ನು ಭಾರತದ ವಶಕ್ಕೆ ನೀಡಬಹುದು ಎಂದು ಯುಎಸ್ ಸಹಾಯಕ ಅಟಾರ್ನಿ ಬ್ರಾಮ್ ಅಲ್ಡೆನ್ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ.

ತಹವ್ವುರ್ ರಾಣಾನನ್ನು ಭಾರತಕ್ಕೆ ಹಸ್ತಾಂತರಿಸುವ ದೇಶದ ಮನವಿಯನ್ನು ಅಮೆರಿಕಾ ಒಪ್ಪಿಕೊಂಡಿತ್ತು. ಆದರೆ ಭಾರತದ ಮನವಿ ವಿರುದ್ಧ ತಹವ್ವುರ್ ರಾಣಾ ಅಮೆರಿಕಾದ ಜಿಲ್ಲಾ ನ್ಯಾಯಾಲಯದಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ. ಈ ಅರ್ಜಿಯ ವಿಚಾರಣೆ ವೇಳೆ ವಾದ ಮಂಡಿಸಿದ ಅಮೆರಿಕಾ ಸರ್ಕಾರಿ ವಕೀಲ ಅಲ್ಡನ್, ಒಪ್ಪಂದದ ನಿಬಂಧನೆಗಳ ಅಡಿಯಲ್ಲಿ ರಾಣಾ ಅವರನ್ನು ಭಾರತಕ್ಕೆ ಹಸ್ತಾಂತರಿಸಬಹುದು ಎಂದು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಶ್ರೀಮತಿ ಪಾರ್ವತಿಯವರಿಗೆ ನಿವೇಶನ ಮಂಜೂರು ವಿಚಾರ

ಬಿಜೆಪಿ, ಜೆಡಿಎಸ್ ನಾಯಕರ ಆರೋಪಕ್ಕೆ ಸ್ಪಷ್ಟೀಕರಣ ನೀಡಲು ಮುಡಾಗೆ ಕಾಂಗ್ರೆಸ್ ನಿಯೋಗ ಮನವಿ

ಕೆಪಿಸಿಸಿ ವಕ್ತಾರ ಲಕ್ಷ್ಮಣ್ ನೇತೃತ್ವದಲ್ಲಿ ಆಯುಕ್ತರ ಭೇಟಿ ಮಾಡಿ ವಿಚಾರ ಮನವರಿಕೆ



ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ನೇತೃತ್ವದಲ್ಲಿ ಕಾಂಗ್ರೆಸ್ ನಿಯೋಗ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಎ.ಎನ್.ರಘುನಂದನ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ಮೈಸೂರು, ಜು.5(ಎಂಟಿವೈ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ(ಮುಡಾ) ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಹೆಸರಲ್ಲಿ ನಿವೇಶನ ನೀಡಲಾಗಿದೆ ಎಂದು ಬಿಜೆಪಿ, ಜೆಡಿಎಸ್ ನಾಯಕರು ಸುಳ್ಳು ಆರೋಪ ಮಾಡುತ್ತಿರುವ ಹಿನ್ನೆಲೆಯಲ್ಲಿ ಪ್ರಕರಣದ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ನೇತೃತ್ವದಲ್ಲಿ ಕಾಂಗ್ರೆಸ್ ನಿಯೋಗ ಮುಡಾ ಆಯುಕ್ತ ಎ.ಎನ್.ರಘುನಂದನ್ ಅವರಿಗೆ ಮನವಿ ಸಲ್ಲಿಸಿತು.

ಮುಡಾ ಗಂಭೀರವಾಗಿ ಪರಿಗಣಿಸಬೇಕು: ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮುಡಾ ಕಚೇರಿಯ ಆಯುಕ್ತರ ಕೊಠಡಿಗೆ ಆಗಮಿಸಿದ ಕಾಂಗ್ರೆಸ್ ನಿಯೋಗ, ಕಳೆದ ಒಂದು ವಾರದಿಂದ ಮೈಸೂರಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ನ ಕೆಲವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬದ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆ. ಅಲ್ಲದೆ ಸುಳ್ಳು ಆರೋಪಗಳಿಂದಲೇ ಮೈಸೂರಿನ ಮರ್ಯಾದೆ ಕಳೆಯುವ ಕೆಲಸ ಮಾಡುತ್ತಿದ್ದಾರೆ. ಅದರಲ್ಲೂ ಬಿಜೆಪಿ ನಾಯಕರು ಬಾಯಿಗೆ ಬಂದಂತೆ ಹೇಳಿಕೆ ನೀಡುತ್ತಿರುವುದರಿಂದ ಜನರಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿದೆ ಆರೋಪ ಮಾಡಿರುವುದು ಸಾಮಾನ್ಯ ವ್ಯಕ್ತಿಯ ವಿರುದ್ಧವಲ್ಲ. ಈ ಹಿನ್ನೆಲೆಯಲ್ಲಿ ಮುಡಾ ಗಂಭೀರವಾಗಿ ಪರಿಗಣಿಸಬೇಕು. ಕೂಡಲೇ ಸ್ಪಷ್ಟನೆ ನೀಡಬೇಕು. ಇಲ್ಲದಿದ್ದರೆ ಸುಳ್ಳು ಆರೋಪ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು.

ಕೆಸರೆಯಲ್ಲಿದ್ದ 3.16 ಎಕರೆ ಭೂಮಿಯನ್ನು ಮುಡಾ 1997ರಲ್ಲಿ ಬಡಾವಣೆ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಂಡು ನೋಟಿಫಿಕೇಷನ್ ಹೊರಡಿಸಿತ್ತು. ಆದರೆ 1998ರಲ್ಲಿ ಮುಡಾ ಸದರಿ ಭೂಮಿಯನ್ನು ಡಿ–ನೋಟಿಫೈ ಮಾಡಿ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿತ್ತು. ಇದರಿಂದ ಆ ಭೂಮಿಯನ್ನು 2005ರಲ್ಲಿ ಅನ್ಯಕ್ರಾಂತ ಮಾಡಿಸಲಾಗಿತ್ತು. 2015ರಲ್ಲಿ ಈ ಭೂಮಿಯನ್ನು ಮಲ್ಲಿಕಾರ್ಜುನ ಸ್ವಾಮಿ(ಸಿಎಂ ಪತ್ನಿ ಪಾರ್ವತಮ್ಮ ಅವರ ಅಣ್ಣ) ಖರೀದಿಸುತ್ತಾರೆ. ನಂತರ 2020ರ ಅ.10ರಂದು ತಮ್ಮ ಸಹೋದರಿ ಪಾರ್ವತಿ ಅವರಿಗೆ ದಾನವಾಗಿ ಭೂಮಿಯನ್ನು ನೀಡಿದ್ದಾರೆ. ಆದರೆ ಮುಡಾ ಯಾವುದೇ ನೋಟಿಸ್ ನೀಡದೆ ಮತ್ತೆ ಈ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಂಡು ಬಡಾವಣೆಯಾಗಿ ರೂಪಿಸಿ, 52 ನಿವೇಶನ ಮಾಡಿ ಹಂಚಿದೆ. ಆ ನಂತರವಷ್ಟೇ ಪಾರ್ವತಿ ಅವರಿಗೆ ಭೂಮಿ ವಶಪಡಿಕೊಂಡಿರುವುದಾಗಿ ಪತ್ರ ಬರೆದಿದ್ದಾರೆ. ಇದಕ್ಕೆ ಅವರು ಪ್ರತಿಯಾಗಿ ಪತ್ರ ಬರೆದಿದ್ದಾರೆ.

ಸಿಎಂ ಪತ್ನಿ ಅವರಿಗೆ ಸೇರಿದ 1.48.104 ಚ.ಅಡಿ(3.16 ಎಕರೆ) ಭೂಮಿಯನ್ನು ವಶಪಡಿಸಿಕೊಂಡ ಮುಡಾ 50:50 ಅನುಪಾತದಲ್ಲಿ 82 ಸಾವಿರ ಚ.ಅಡಿ ಜಾಗ ನೀಡಬೇಕಾಗಿತ್ತು. ಆದರೆ 14 ನಿವೇಶನದಿಂದ 38.284 ಚ.ಅಡಿಯನ್ನು ವಿಜಯನಗರದಲ್ಲಿ ಕೊಟ್ಟಿದ್ದಾರೆ. ಈ ಮಧ್ಯೆ ವಿಜಯನಗರದಲ್ಲೇ ನಿವೇಶನ ನೀಡಿ ಎಂದು ಕೇಳಿಲ್ಲ. ಮುಡಾ ತೀರ್ಮಾನ ಕೈಗೊಂಡು ಅಲ್ಲಿ ನಿವೇಶನ ನೀಡಿದೆ ಆದರೆ ಇದನ್ನು ಅರಿಯದೇ ಬಿಜೆಪಿ ನಾಯಕರು ಅಪಪ್ರಚಾರ ಮಾಡುತ್ತಿದ್ದಾರೆ. ಅಲ್ಲದೇ ಕೆಸರೆಯಲ್ಲಿ ಪಡೆದ ಭೂಮಿಗೆ ವಿಜಯನಗರದಲ್ಲಿ ಯಾಕೆ ನಿವೇಶನ ನೀಡಿದ್ದಾರೆ ಎಂದು ಪ್ರಶ್ನೆ ಮಾಡುತ್ತಿದ್ದಾರೆ. ಕೆಸರೆ ಬಡಾವಣೆ 1992ರಲ್ಲಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ವಿಜಯನಗರದಲ್ಲಿ ಪರ್ಯಾಯವಾಗಿ ನಿವೇಶನ ನೀಡಲಾಗಿದೆ ಎಂದು ತಿಳಿಸಿದರು.

130 ಕೋಟಿ ಪರಿಹಾರ ನೀಡಿ!: ಕೆಸರೆಯಲ್ಲಿ ಮುಡಾ ವಶಪಡಿಸಿಕೊಂಡಿರುವ ಜಮೀನಿನ ಬೆಲೆ ಚ.ಅಡಿಗೆ 2 ಸಾವಿರ ರೂ.ನಂತೆ ಲೆಕ್ಕ ಹಾಕಿದರೆ 148.104 ಚ.ಅಡಿಗೆ 30 ಕೋಟಿ ರೂ. ಆಗುತ್ತದೆ. ವಿಜಯ ನಗರದಲ್ಲಿ ನೀಡಿರುವ ಸೈಟ್‌ಗೆ ಚ.ಅಡಿ 8 ಸಾವಿರ ರೂ.ನಂತೆ 14 ನಿವೇಶನಕ್ಕೆ 30 ಕೋಟಿ ರೂ. ಆಗಲಿದೆ. ಪ್ರಸ್ತುತ ಕೆಸರೆಯಲ್ಲಿ ಚ.ಅಡಿಗೆ 2,788 ರೂ. ರಿಜಿಸ್ಟ್ರೇಷನ್ ವ್ಯಾಲ್ಯೂ ಇದೆ. ಇದರಿಂದ 3.16 ಎಕರೆಗೆ 43 ಕೋಟಿ ರೂ. ಆಗಲಿದೆ. ಒಂದು ವೇಳೆ ಲೋಪವಾಗಿದ್ದರೆ 3.16 ಎಕರೆ ಭೂಮಿ ವಾಪಸ್ ನೀಡಬೇಕು. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಿಯಮದಂತೆ ಭೂಮಿ ನೀಡಲು ಸಾಧ್ಯವಾಗದಿದ್ದರೆ ಮೂರು ಪಟ್ಟು ಹಣ ನೀಡಬೇಕು. ಇದರಿಂದ ವಶಪಡಿಸಿಕೊಂಡಿರುವ 3.16 ಎಕರೆ ಭೂಮಿಗೆ ಪರಿಹಾರವಾಗಿ 130 ಕೋಟಿ ರೂ. ಪರಿಹಾರ ನೀಡಿ ಎಂಬುದು ಕಾರ್ಯಕರ್ತರ ಅಭಿಪ್ರಾಯವಾಗಿದೆ ಎಂದು ವಿವರಿಸಿದರು.

ತನಿಖಾಧಿಕಾರಿಗಳ ಅಭಿಪ್ರಾಯ ಪಡೆದು ಸ್ಪಷ್ಟನೆ: ಆಯುಕ್ತ

ಇದಕ್ಕೆ ಮುಡಾ ಆಯುಕ್ತ ರಘನಂದನ್ ಪ್ರತಿಕ್ರಿಯಿಸಿ, ಮುಡಾದಲ್ಲಿ ನಡೆದಿರುವ ಚಟುವಟಿಕೆಗಳ ಸಂಬಂಧ ತನಿಖೆ ನಡೆಯುತ್ತಿರುವುದರಿಂದ ನಾನು ಆ ವಿಷಯದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ. ತನಿಖೆ ಮುಗಿದ ನಂತರ ತಿಳಿಸುತ್ತೇನೆ ಎಂದರು.

ಇದಕ್ಕೆ ಆಕ್ಷೇಪಿಸಿದ ಎಂ.ಲಕ್ಷ್ಮಣ, ಮುಡಾದಲ್ಲಿ ತನಿಖೆ ನಡೆಯುತ್ತಿರುವುದು ಶೇ.50:50 ಹಂಚಿಕೆಯಲ್ಲಿ ನಡೆದಿರುವ ಅಕ್ರಮದ ಬಗ್ಗೆ. ಆದರೆ ನಾವು ಒಂದು ನಿರ್ದಿಷ್ಟ ಪ್ರಕರಣದ ಬಗ್ಗೆ ಸ್ಪಷ್ಟನೆ ಕೇಳುತ್ತಿದ್ದೇವೆ. ಮುಖ್ಯಮಂತ್ರಿಗಳ ಕುಟುಂಬಕ್ಕೆ ಮುಡಾ ಕಾನೂನಾತ್ಮಕವಾಗಿ ನಿವೇಶನ ನೀಡಿರುವ ಬಗ್ಗೆ ಸ್ಪಷ್ಟನೆ ನೀಡಬಹುದು. ಇಲ್ಲದಿದ್ದರೆ, ಸುಳ್ಳು ಆರೋಪ ಮಾಡುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುತ್ತೇವೆ ಎಂದು ತಿಳಿಸಿದರು.

ಅಂತಿಮವಾಗಿ ಮುಡಾ ಆಯುಕ್ತ ರಘುನಂದನ್, ಈ ಪ್ರಕರಣದ ಬಗ್ಗೆ ಸ್ಪಷ್ಟನೆ ನೀಡಲು ತನಿಖಾಧಿಕಾರಿಗಳನ್ನು ಕೇಳುತ್ತೇನೆ. ಅವರ ಅಭಿಪ್ರಾಯ ಪಡೆದು ಮುಂದಿನ ಎರಡು ದಿನಗಳಲ್ಲಿ ಸ್ಪಷ್ಟನೆ ನೀಡುವುದಾಗಿ ಆಯುಕ್ತ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ, ಜಿ.ಪಂ.ಮಾಜಿ ಅಧ್ಯಕ್ಷ ಎಂ. ರಾಮು, ಮಾಧ್ಯಮ ವಕ್ತಾರ ಮಹೇಶ್, ಕಾಂಗ್ರೆಸ್ ಕಾನೂನು ಶಾಖೆಯ ವಕೀಲರುಗಳಾದ ಸುರೇಶ್, ಶಿವಪ್ರಸಾದ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಪ್ರಥಮ ಮಹಿಳಾ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅಧಿಕಾರ ಸ್ವೀಕಾರ



ಮೈಸೂರು ನಗರ ಪೊಲೀಸ್ ಆಯುಕ್ತರಾಗಿ ಶುಕ್ರವಾರ ಅಧಿಕಾರ ವಹಿಸಿಕೊಂಡ ಸೀಮಾ ಲಾಟ್ಕರ್ ಅವರನ್ನು ಡಿಸಿಪಿ ಎಂ. ಮುತ್ತುರಾಜ್ ಪುಷ್ಪಗುಚ್ಛ ನೀಡಿ ಶುಭ ಕೋರಿದರು.

ಮೈಸೂರು, ಜು. 5(ಆರ್‌ಕೆ)– ಮೈಸೂರು ನಗರದ ಪ್ರಥಮ ಮಹಿಳಾ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಇಂದು ಅಧಿಕಾರ ವಹಿಸಿಕೊಂಡರು.

ನಂತರ ಪ್ರತಿಕ್ರಿಯಿಸಿದ ಅವರು, ಮೈಸೂರು ಪಾರಂಪರಿಕ ನಗರಿ, ಸಾಂಸ್ಕೃತಿಕ ರಾಜಧಾನಿಯಾದ ಮೈಸೂರಿಗೆ ದೇಶ–ವಿದೇಶಗಳಿಂದ ಪ್ರವಾಸಿಗರು ಬರುತ್ತಾರೆ. ಅವರಿಗೆ ಪ್ರವಾಸಿ ತಾಣಗಳು, ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವ ಜೊತೆಗೆ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಸುರಕ್ಷತೆಗೂ ಗಮನಹರಿಸುವುದಾಗಿ ಹೇಳಿದರು.

ಕಾನೂನು–ಸುವ್ಯವಸ್ಥೆ ಕಾಪಾಡುವುದು, ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರ ಸೇಫ್ಟಿ ಮತ್ತು ಸೆಕ್ಯುರಿಟಿಗೆ ಆದ್ಯತೆ ನೀಡಿ ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಾಗಿ ತಿಳಿಸಿದರು.

ಪೊಲೀಸ್ ಅಧಿಕಾರಿಗಳು ತಮ್ಮ ವರ್ತನೆಯನ್ನು ಬದಲಿಸಿಕೊಂಡು ಕಾನೂನು ಮತ್ತು ಸುವ್ಯವಸ್ಥೆ, ಅಪರಾಧ ಪತ್ತೆ ಮತ್ತು ತಡೆಗೆ ಒತ್ತು ನೀಡಿ ಇಲಾಖೆಗೆ ಒಳ್ಳೆಯ ಹೆಸರು ಬರುವಂತೆ ಕರ್ತವ್ಯ ನಿರ್ವಹಿಸುವುದಾಗಿಯೂ ಸೀಮಾ ಲಾಟ್ಕರ್ ನುಡಿದರು.

ಕಚೇರಿಗೆ ಆಗಮಿಸಿದ ನೂತನ ಪೊಲೀಸ್ ಆಯುಕ್ತರಿಗೆ ಪೊಲೀಸ್ ಗೌರವ ವಂದನೆ ಸಲ್ಲಿಸಲಾಯಿತು. ನಂತರ ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್. ಜಾಹ್ನವಿ ಸೇರಿದಂತೆ ಪೊಲೀಸ್ ಅಧಿಕಾರಿಗಳು ಸೀಮಾ ಲಾಟ್ಕರ್‌ರಿಗೆ ಶುಭ ಕೋರಿದರು.

ನಿರ್ಗಮಿತ ಡಿಸಿ ಡಾ. ರಾಜೇಂದ್ರರಿಂದ 'ಪ್ರಸಾದ' ಯೋಜನೆ ಸಭೆ



ನಿರ್ಗಮಿತ ಡಿಸಿ ಡಾ. ಕೆ.ವಿ. ರಾಜೇಂದ್ರ ಅಧಿಕಾರ ಹಸ್ತಾಂತರಿಸುವ ಮುನ್ನ 'ಪ್ರಸಾದ' ಯೋಜನೆ ಕುರಿತಾಗಿ ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳೊಂದಿಗೆ ಶುಕ್ರವಾರ ಸಭೆ ನಡೆಸಿದರು.

ಮೈಸೂರು, ಜು. 5(ಆರ್‌ಕೆ)– ನಿರ್ಗಮಿತ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ನೂತನ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಅವರಿಗೆ ಅಧಿಕಾರ ಹಸ್ತಾಂತರ ಮಾಡುವ ಮುನ್ನ ಶುಕ್ರವಾರ ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳೊಂದಿಗೆ ಕೇಂದ್ರ ಪುರಸ್ಕೃತ 'ಪ್ರಸಾದ' ಮತ್ತು 'ಡೆಸ್ಟಿನೇಷನ್' ಯೋಜನೆಗಳ ಕುರಿತು ಸಭೆ ನಡೆಸಿದರು.

ಪ್ರಸಾದ ಯೋಜನೆಗೆ 45.7 ಕೋಟಿ ರೂ. ಅನುದಾನ ಮಂಜೂರಾಗಿದ್ದು, ಅದರಲ್ಲಿ ಚಾಮುಂಡಿಬೆಟ್ಟದ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್ ಕರೆಯಲು ಪ್ರಕ್ರಿಯೆ ನಡೆಸುವಂತೆ ಸೂಚಿಸಿದ ಡಾ. ರಾಜೇಂದ್ರ, ಚಾಮುಂಡೇಶ್ವರಿ ದೇಗುಲ, ಮಹಿಷಾಸುರ ಪ್ಲಾಜಾ ಸರ್ಕಲ್ ಅಭಿವೃದ್ಧಿ ಸೇರಿದಂತೆ ಇತರ ಕಾಮಗಾರಿಗಳನ್ನು ಕೈಗೊಳ್ಳಲು ತಿಳಿಸಿದರು.

70 ಕೋಟಿ ರೂ. ಸ್ವದೇಶಿ ದರ್ಶನ ಯೋಜನೆಯಡಿ ಟಾಂಗಾ ರೈಡ್ ಅನುಭವ, ಎಕಾಲಜಿಕಲ್ ಎಕ್ಸ್‌ಪೀರಿಯನ್ಸ್, ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ವಸ್ತುಪ್ರದರ್ಶನ ಚಟುವಟಿಕೆ ವಿಸ್ತರಣೆ, ಹಳೇ ಡಿಸಿ ಕಚೇರಿ ಪಾರಂಪರಿಕ ಕಟ್ಟಡದಲ್ಲಿ ರಾಜರ ಆಳ್ವಿಕೆ ಇತಿಹಾಸ ಸಾರುವ ಸಂಗ್ರಹಾಲಯ, ಹೆರಿಟೇಜ್ ರಸ್ತೆಯಾಗಿ ಕೃಷ್ಣರಾಜ ಬುಲೇವಾರ್ಡ್ ರಸ್ತೆ ಅಭಿವೃದ್ಧಿ ಮಾಡಲು ಟೆಂಡರ್ ಕರೆಯಬೇಕು. ಮತ್ತೊಮ್ಮೆ ಸಭೆ ನಡೆಸಿ, ಚರ್ಚಿಸಿ ಅಂತಿಮಗೊಳಿಸುವುದಾಗಿಯೂ ತಿಳಿಸಿದರು.

ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಕೆ. ಸವಿತ, ಸಹಾಯಕ ನಿರ್ದೇಶಕ ಜೆ.ಆರ್. ಅನುಪ್, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಪಾರಂಪರಿಕ ಇಲಾಖೆ ಉಪನಿರ್ದೇಶಕಿ ಮಂಜುಳಾ, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಪಿ. ಹರೀಶ್ ಹಾಗೂ ಇತರರು ಸಭೆಯಲ್ಲಿ ಹಾಜರಿದ್ದರು.

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿ ಸ್ಥಿರಾಸ್ತಿ ತೆರಿಗೆಯಲ್ಲಿ ಶೇ.5 ರಿಯಾಯಿತಿ ಜು.31ರವರೆಗೆ ವಿಸ್ತರಣೆ

ಮೈಸೂರು, ಜು.5(ಎಸ್‌ಬಿಡಿ)– ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ಥಿರಾಸ್ತಿ ತೆರಿಗೆ ಮೇಲಿನ ಶೇ.5ರಷ್ಟು ರಿಯಾಯಿತಿಯನ್ನು ಜು.31ರವರೆಗೆ ವಿಸ್ತರಿಸಿರುವ ಬಗ್ಗೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ಸಾರ್ವಜನಿಕರು ಈ ಸದವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಮನವಿ ಮಾಡಿದ್ದಾರೆ.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕೋರಿಕೆ ಮೇರೆಗೆ ರಾಜ್ಯ ಸರ್ಕಾರ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಯನ್ನು ಪರಿಣಾಮಕಾರಿಯಾಗಿ ಹೆಚ್ಚಿಸುವುದರ ಜೊತೆಗೆ ಸ್ವಯಂ ತೆರಿಗೆ ಪಾವತಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ಕ್ರಮ ವಹಿಸಿದೆ. ರಾಜ್ಯದ ನಗರ ಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅನ್ವಯವಾಗುವಂತೆ ಸ್ಥಿರಾಸ್ತಿ ತೆರಿಗೆ ಮೇಲಿನ ಶೇ.5ರಷ್ಟು ರಿಯಾಯಿತಿಯನ್ನು ಜು.31ರವರೆಗೆ ವಿಸ್ತರಿಸಿದೆ. ಆರ್ಥಿಕ ವರ್ಷದ ಮೊದಲ ತಿಂಗಳಲ್ಲಿ ಮಾತ್ರ ಕಲ್ಪಿಸಲಾಗುತ್ತಿದ್ದ ಈ ವಿಶೇಷ ಅವಕಾಶವನ್ನು ವಿಸ್ತರಿಸಿರುವುದರಿಂದ ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮೈಸೂರು ನಗರ ಪಾಲಿಕೆ ಸ್ಥಿರಾಸ್ತಿ ತೆರಿಗೆ ಮೇಲಿನ ಶೇ.5ರಷ್ಟು ರಿಯಾಯಿತಿಯನ್ನು ಜುಲೈ 31ರವರೆಗೆ ವಿಸ್ತರಿಸಿ, ಸರ್ಕಾರ ಸುತ್ತೋಲೆ ಹೊರಡಿಸಿದ್ದರ ಬಗ್ಗೆ ಜೂ.10ರಂದು ನಗರ ಪಾಲಿಕೆ ಆಯುಕ್ತ ಅಶಾದ್ ಉರ್–ರೆಹಮಾನ್ ಷರೀಫ್ ಪ್ರಕಟಣೆ ಮೂಲಕ ತಿಳಿಸಿದ್ದರು.


ನಾಳೆ ವಿದ್ಯುತ್ ಗುತ್ತಿಗೆದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು, ಜು.5(ಜಿಎ)–ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಮೈಸೂರು ಘಟಕದಿಂದ ಜು.7ರಂದು ಬೆಳಿಗ್ಗೆ 10.30ಕ್ಕೆ ಕುವೆಂಪು ನಗರದ ಉದಯರವಿ ರಸ್ತೆಯಲ್ಲಿರುವ ಸಾಮ್ರಾಟ್ ಕಲ್ಯಾಣ ಮಂಟಪದಲ್ಲಿ ಸೆಸ್ಕ್ ವ್ಯಾಪ್ತಿಯ ವಿದ್ಯುತ್ ಗುತ್ತಿಗೆದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಎಂ.ಗಿರೀಶ್ ಕುಮಾರ್ ಈ ವಿಷಯ ತಿಳಿಸಿ ಕಾರ್ಯಕ್ರಮವನ್ನು, ಸೆಸ್ಕ್ ಅಧ್ಯಕ್ಷ ಕೆ.ಬಿ.ರಮೇಶ್ ಬಂಡಿಸಿದ್ದೇಗೌಡ ಮತ್ತು ಸಂಘದ ಗೌರವಾಧ್ಯಕ್ಷ ಸಿ.ರಮೇಶ್ ಉದ್ಘಾಟಿಸಲಿದ್ದಾರೆ. ಎಚ್.ಜೆ.ರಾಘವೇಂದ್ರ ಅಧ್ಯಕ್ಷತೆ ವಹಿಸುವರು. ಶಾಸಕ ಟಿ.ಎಸ್.ಶ್ರೀವತ್ಸ, ಮುಡಾ ಅಧ್ಯಕ್ಷ ಕೆ.ಮರಿಗೌಡ ಅತಿಥಿಗಳಾಗಿ ಭಾಗವಹಿಸುವರು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿ ಉಪಾಧ್ಯಕ್ಷರಾದ ಎಂ.ಎಸ್.ಮಂಜುನಾಥ್, ಡಿ.ಡಿ.ಶಶಿಧರ್, ಸಂಘಟನಾ ಕಾರ್ಯದರ್ಶಿ ಎಸ್.ಸುಮಂತ್ ಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯ ಎಸ್.ಮಂಜುನಾಥ್ ಉಪಸ್ಥಿತರಿದ್ದರು.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಗುಜರಾತ್ ಕರಕುಶಲ ಉತ್ಸವಕ್ಕೆ ಚಾಲನೆ

• ವೈವಿಧ್ಯಮಯ ಕರಕುಶಲ ವಸ್ತುಗಳ ಪ್ರದರ್ಶನ –ಮಾರಾಟ • ಗುಜರಾತ್‌ನ ಪ್ರಸಿದ್ಧ ಕಲಾ ತಂಡಗಳಿಂದ ಗರ್ಭಾ ನೃತ್ಯ ಪ್ರದರ್ಶನ



ಮೈಸೂರು ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಹತ್ತು ದಿನಗಳ 'ಗುಜರಾತ್ ಕರಕುಶಲ ಉತ್ಸವ'ಕ್ಕೆ ಮೈಸೂರು ಜಿಲ್ಲಾ ಪಂಚಾಯತ್ ಸಿಇಓ ಕೆ.ಎಂ.ಗಾಯಿತ್ರಿ ಚಾಲನೆ ನೀಡಿದರು.

ಮೈಸೂರು, ಜು.5(ಎಸ್‌ಪಿಎನ್)–ಹತ್ತು ದಿನಗಳ 'ಗುಜರಾತ್ ಕರಕುಶಲ ಉತ್ಸವ'ಕ್ಕೆ ಮೈಸೂರು ಜಿಲ್ಲಾ ಪಂಚಾಯತ್ ಸಿಇಓ ಕೆ.ಎಂ.ಗಾಯಿತ್ರಿ ಚಾಲನೆ ನೀಡಿದರು.

ಮೈಸೂರು ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಜೆಎಸ್‌ಎಸ್ ಅರ್ಬನ್ ಹಾತ್ ಮತ್ತು ಗುಜರಾತ್ ರಾಜ್ಯ ಸರ್ಕಾರದ ಇಂಡಸ್ಟ್ರಿಯಲ್ ಎಕ್ಸ್‌ಟೆನ್ಷನ್ ಕಾಟೇಜ್ (ಇಂಡೆಕ್ಸ್–ಸಿ) (Industrial Extension Cottage (INDEXT-C) ಸಹಯೋಗದೊಂದಿಗೆ ಶುಕ್ರವಾರದಿಂದ ಜು.14 ರವರೆಗೆ ಆಯೋಜಿಸಿರುವ 'ಗುಜರಾತ್ ಕರಕುಶಲ ಉತ್ಸವ'ಕ್ಕೆ ಚಾಲನೆ ನೀಡಿ, ಮಾತನಾಡಿದ ಅವರು, ಜೆಎಸ್‌ಎಸ್ ಅರ್ಬನ್ ಹಾತ್ ಹಾಗೂ ಗುಜರಾತ್ ಸರ್ಕಾರ ಸಹಯೋಗದೊಂದಿಗೆ ಮೈಸೂರಿನಲ್ಲಿ 9ನೇ ಬಾರಿಗೆ ಉತ್ಸವ ಹಮ್ಮಿಕೊಂಡಿದ್ದು, ಇದರಲ್ಲಿ ವೈವಿಧ್ಯಮಯ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟವಿದೆ. ಭಾರತೀಯ ಕರಕುಶಲ ಕರ್ಮಿಗಳು ತಯಾರಿಸಿದ ವಸ್ತುಗಳನ್ನು ಖರೀದಿಸಿ, ಪ್ರೋತ್ಸಾಹಿಸುವಂತೆ ಜನರಲ್ಲಿ ಮನವಿ ಮಾಡಿದರು.

ಮೇಳದ ವಿಶೇಷತೆಗಳು: ಗುಜರಾತ್ ರಾಜ್ಯದ ವಿವಿಧ ಭಾಗಗಳ ಪ್ರಸಿದ್ಧ ಹಾಗೂ ಕ್ರಿಯಾಶೀಲರಾಗಿರುವ ಸುಮಾರು 70 ಕ್ಕೂ ಹೆಚ್ಚು ಕುಶಲಕರ್ಮಿಗಳು ಮೇಳದಲ್ಲಿ ಭಾಗವಹಿಸಿದ್ದು, ಇವರು ತಯಾರಿಸಿದ ಪಟೋಲ, ಬಾಂದಿನಿ ಸೀರೆಗಳು, ಕಸೂತಿ ಮಾಡಿದ ಬೆಡ್ ಶೀಟ್, ಟವಲ್, ಕುಶನ್ ಕವರ್, ಪರಿಸರ ಸ್ನೇಹಿ ಆಭರಣ, ಡ್ರೆಸ್ ಮೆಟೀರಿಯಲ್, ಮಣ್ಣಿನಿಂದ ತಯಾರಿಸಿದ ಅಲಂಕಾರಿಕ ವಸ್ತುಗಳು, ಬೀಡ್ ವರ್ಕ್, ಮೆಟಲ್ ವರ್ಕ್, ಕುರ್ತಿಗಳು, ಚನಿಯಾ ಚೋಲಿ ಹಾಗೂ ಇನ್ನಿತರ ಆಕರ್ಷಣೀಯ ಕರಕುಶಲ ಹಾಗೂ ಕೈಮಗ್ಗ ಉತ್ಪನ್ನಗಳು ಮಾರಾಟಕ್ಕಿವೆ.

ನೈಜ ಪ್ರಾತ್ಯಕ್ಷತೆ ಮತ್ತು ತರಬೇತಿ: ಈ ಉತ್ಸವಕ್ಕೆ ಭೇಟಿ ನೀಡುವ ಶಾಲಾ ಮಕ್ಕಳು ಮಹಿಳೆಯರು ಮತ್ತು ಇತರೆ ಆಸಕ್ತ ಗ್ರಾಹಕರಿಗೆ ಗುಜರಾತ್ ಪಾರಂಪರಿಕ ಕಲೆಯ ಬಗ್ಗೆ ತರಬೇತಿಯನ್ನು ಗುಜರಾತ್ ಕುಶಲಕರ್ಮಿಗಳು ನೀಡಲಿದ್ದು, ಮೈಸೂರಿಗರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಬಸ್ ವ್ಯವಸ್ಥೆ ಇದೆ: ಕೆಎಸ್‌ಆರ್‌ಟಿಸಿ ಮೈಸೂರು ನಗರ ಬಸ್ ನಿಲ್ದಾಣದಿಂದ ಪ್ರತಿ ನಿತ್ಯ ಬಸ್ ನಂ.117/1ರ ರೂಟ್ ಬಸ್ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ಗೆ ಸಂಚರಿಸಲಿದೆ. ಪ್ರತಿದಿನ ಬೆಳಗ್ಗೆ 10ರಿಂದ ರಾತ್ರಿ 8.30ರವರೆಗೆ ಸಾರ್ವಜನಿಕರು ಈ ಉತ್ಸವಕ್ಕೆ ಭೇಟಿ ನೀಡಬಹುದು.

ಗರ್ಭಾ ನೃತ್ಯ: ಪ್ರತಿದಿನ ಸಂಜೆ ಶುಕ್ರವಾರದಿಂದ ಜು.7ರ ತನಕ ಸಂಜೆ 6 ರಿಂದ 8 ಗಂಟೆಯವರೆಗೆ ಗುಜರಾತಿನ ಪ್ರಸಿದ್ಧ ಸಾಂಸ್ಕೃತಿಕ ಕಲಾ ತಂಡಗಳಿಂದ ಗರ್ಭಾ ನೃತ್ಯ ಪ್ರದರ್ಶನಗೊಳ್ಳಲಿದೆ.

ಈ ವೇಳೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಬೆಂಗಳೂರು ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದ ಅಪರ ಅಭಿಯಾನ ನಿರ್ದೇಶಕ ಅರ್ಜುನ್ ಒಡೆಯರ್, ಬೆಂಗಳೂರು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ಜವಳಿ ಮಂತ್ರಾಲಯ ನಿರ್ದೇಶಕ ಡಾ.ಯತೀಂದ್ರ ಲಕ್ಕಣ್ಣ, ಗುಜರಾತ್ ಇಂಡೆಕ್ಸ್–ಸಿ ವ್ಯವಸ್ಥಾಪಕ(ಕ್ಲಾಸ್–1) ಆರ್.ಎಸ್.ಶಾ, ಮಾರುಕಟ್ಟೆ ವಿಭಾಗದ ವ್ಯವಸ್ಥಾಪಕ ಡಾ.ಸ್ನೇಹಲ್ ಮಕ್ವಾನಾ, ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಅಭಿವೃದ್ಧಿ ವಿಭಾಗದ ನಿರ್ದೇಶಕ ಕೆ.ಎಲ್.ರೇವಣ್ಣಸ್ವಾಮಿ, ತಾಂತ್ರಿಕ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕ ಡಾ.ಎಚ್.ಆರ್.ಮಹದೇವಸ್ವಾಮಿ ಉಪಸ್ಥಿತರಿದ್ದರು.

> ನಮ್ಮ ಇಲಾಖೆಯಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಹಿಳಾ ಸ್ತ್ರೀ ಶಕ್ತಿ ಗುಂಪಿನಲ್ಲಿ ಗುರುತಿಸಿಕೊಳ್ಳುವ ಮಹಿಳೆಯರಿಗೆ ಶೂನ್ಯ ಬಡ್ಡಿ ದರದಲ್ಲಿ 15 ಸಾವಿರದಿಂದ 1.5 ಲಕ್ಷದವರೆಗೆ ಸಾಲ ಸೌಲಭ್ಯ ನೀಡಿ, ಪ್ರೋತ್ಸಾಹಿಸಲಾಗುತ್ತಿದೆ. ಅಂತೆಯೇ ರಾಜ್ಯದಲ್ಲಿ 1.5 ಲಕ್ಷಕ್ಕೂ ಹೆಚ್ಚು ಸ್ತ್ರೀ ಶಕ್ತಿ ಮಹಿಳಾ ಗುಂಪುಗಳನ್ನು ಗುರುತಿಸಿದ್ದು, ಮೈಸೂರಿನಲ್ಲಿ 50 ಸಾವಿರಕ್ಕೂ ಹೆಚ್ಚು ಮಹಿಳಾ ಫಲಾನುಭವಿಗಳನ್ನು ಗುರುತಿಸಲಾಗಿದೆ. ನಮ್ಮ ಇಲಾಖೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಪ್ರತಿವರ್ಷ 1800 ಕೋಟಿ ಅನುದಾನ ಲಭ್ಯವಿದೆ.
>
> **- ಅರ್ಜುನ್ ಒಡೆಯರ್,** ಅಪರ ಅಭಿಯಾನ ನಿರ್ದೇಶಕ, ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ

ಮೈಸೂರು ಮಿತ್ರ ಶನಿವಾರ 6 ಜುಲೈ 2024

ಕೊಡಗು ಜಿಲ್ಲಾಸ್ಪತ್ರೆಗೆ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರ

45 ದಿನಗಳಲ್ಲಿ ಸಾರ್ವಜನಿಕರ ಸೇವೆಗೆ ಲಭ್ಯ

ಮಡಿಕೇರಿ, ಜು.5– ನಗರದ ಜಿಲ್ಲಾಸ್ಪತ್ರೆಯಲ್ಲಿ ನೂತನವಾಗಿ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರವನ್ನು ಅಳವಡಿಕೆ ಮಾಡಲಾಗುತ್ತಿದ್ದು, ಮುಂದಿನ 45 ದಿನಗಳಲ್ಲಿ ಸಾರ್ವಜನಿಕರ ಸೇವೆಗೆ ಲಭ್ಯವಾಗಲಿದೆ ಎಂದು ರಾಜ್ಯ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಹೇಳಿದ್ದಾರೆ.



ರಾಜ್ಯ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಮಡಿಕೇರಿಯ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಡಿಕೇರಿ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ಸಚಿವರು ಆಸ್ಪತ್ರೆಗೆ ಬೇಕಾಗುವ ಮೂಲ ಸೌಕರ್ಯ, ಹೆಚ್ಚಿನ ವೈದ್ಯಕೀಯ ಸೌಕರ್ಯ ಒದಗಿಸುವುದು, ನೂತನ ಆಸ್ಪತ್ರೆ ಕಟ್ಟಡದ ಕಾಮಗಾರಿ ಸಹಿತ ಬಜೆಟ್‌ನಲ್ಲಿ ಘೋಷಿಸಿರುವ ಕಾರ್ಡಿಯಾಲಿಕ್ ಘಟಕ ಸ್ಥಾಪನೆ ಕುರಿತು ಆಸ್ಪತ್ರೆ ವೈದ್ಯಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದರು.

ಆಸ್ಪತ್ರೆಯಲ್ಲಿರುವ ತಜ್ಞ ವೈದ್ಯರು, ಖಾಲಿ ವೈದ್ಯರ ಸಂಖ್ಯೆ, ಒಳ ಮತ್ತು ಹೊರ ರೋಗಿಗಳ ದಾಖಲಾತಿಗಳ ಕುರಿತು ಮಾಹಿತಿ ಪಡೆದರು. ಆಸ್ಪತ್ರೆಯಲ್ಲಿ ರೋಗಿಗಳು ಮತ್ತವರ ಕುಟುಂಬಸ್ಥರೊಂದಿಗೂ ಸಚಿವರು ಸಮಾಲೋಚನೆ ನಡೆಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಡಾ.ಶರಣ ಪ್ರಕಾಶ ಪಾಟೀಲ, ಮಡಿಕೇರಿ ಸರ್ಕಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಶಾಸಕ ಡಾ.ಮಂತರ್ ಗೌಡ ಪ್ರಯತ್ನದ ಫಲವಾಗಿ ನೂತನವಾದ ಎಂಆರ್‌ಐ ವ್ಯವಸ್ಥೆ ಪ್ರಾರಂಭಿಸಲು ಸರ್ಕಾರ ಮುಂದಾಗಿದೆ. ಈಗಾಗಲೇ ಅಳವಡಿಕೆ ಕಾರ್ಯ ನಡೆಯುತ್ತಿದ್ದು, 45 ದಿನಗಳಲ್ಲಿ ಈ ಸೇವೆ ಜನರಿಗೆ ಲಭ್ಯವಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಜಿಲ್ಲಾ ಆಸ್ಪತ್ರೆಯಲ್ಲಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯನ್ನು ಪೂರ್ಣಗೊಳಿಸಲಾಗಿದೆ. 300 ಹಾಸಿಗೆಗಳ ಆಸ್ಪತ್ರೆಯ ಕಟ್ಟಡ ಕಾಮಗಾರಿ ಪೈಕಿ 2 ಅಂತಸ್ತು ಪೂರ್ಣವಾಗಿದ್ದರೆ ಇನ್ನೆರೆಡು ಅಂತಸ್ತು ಕಾಮಗಾರಿ ಅಪೂರ್ಣವಾಗಿದೆ. ಅದರ ಕಾಮಗಾರಿಗೆ 55 ಕೋಟಿ ರೂ. ವೆಚ್ಚವಾಗಲಿದೆ ಎಂದು ಇಂಜಿನಿಯರ್‌ಗಳು ಹೇಳಿದ್ದಾರೆ. ಈ ಕುರಿತು ಹಣಕಾಸು ಇಲಾಖೆಗೆ ಪತ್ರ ಬರೆದು ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಬಜೆಟ್‌ನಲ್ಲಿ ಘೋಷಣೆ ಮಾಡಿರುವಂತೆ ಹೃದ್ರೋಗ ತಪಾಸಣಾ ಘಟಕವನ್ನು ಖಾಸಗಿ ಸಹಭಾಗಿತ್ವದಲ್ಲಿ ಆರಂಭಿಸಲಾಗುತ್ತದೆ.

ಜಿಲ್ಲಾಸ್ಪತ್ರೆಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಭೇಟಿ

ಕೊಡಗು ಜಿಲ್ಲಾಸ್ಪತ್ರೆಯಲ್ಲಿ ರೋಗಿಗಳ ಒತ್ತಡವಿದ್ದು, ಹೊರ ಜಿಲ್ಲೆಗಳಿಂದಲೂ ಚಿಕಿತ್ಸೆಗಾಗಿ ಇಲ್ಲಿಗೆ ಆಗಮಿಸುತ್ತಿದ್ದಾರೆ. ಜಿಲ್ಲೆಯ ಜನರಿಗೆ ಸೂಕ್ತ ವೈದ್ಯಕೀಯ ಸೌಲಭ್ಯ ಕಲ್ಪಿಸಲು ಸರ್ಕಾರ ಬದ್ಧವಾಗಿದೆ ಎಂದು ಸಚಿವ ಡಾ.ಶರಣ ಪ್ರಕಾಶ ಪಾಟೀಲ ಹೇಳಿದರು.

ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ವೈದ್ಯರ ಕೊರತೆಯನ್ನು ಗಮನಿಸಲಾಗಿದೆ. ಯಾವ ವಿಭಾಗಗಳಲ್ಲಿ ವೈದ್ಯರ ಕೊರತೆ ಇದೆಯೋ ಅದನ್ನು ಗಮನಿಸಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ ಎಂದು ಸಚಿವರು ಭರವಸೆ ನೀಡಿದರು.

ಈ ಸಂದರ್ಭ ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಮಂತರ್‌ಗೌಡ, ಜಿಲ್ಲಾಧಿಕಾರಿ ವೆಂಕಟ ರಾಜ, ಜಿ.ಪಂ ಸಿಇಓ ವರ್ಣಿತ್ ನೇಗಿ, ಮೆಡಿಕಲ್ ಕಾಲೇಜು ಡೀನ್ ವಿಶಾಲ್, ಜಿಲ್ಲಾ ಆರೋಗ್ಯಾಧಿಕಾರಿ ಸತೀಶ್ ಕುಮಾರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ ಮತ್ತಿತರರು ಹಾಜರಿದ್ದರು.

ಹೊರಗುತ್ತಿಗೆ ನೇಮಕಾತಿ ಸುತ್ತೋಲೆಯಲ್ಲಿ ಷರತ್ತುಗಳ ಮಾರ್ಪಾಡಿಗೆ ಆಗ್ರಹಿಸಿ ಪ್ರತಿಭಟನೆ

ಗೋಣಿಕೊಪ್ಪ, ಜು.5– ಹೊರಗುತ್ತಿಗೆ ನೇಮಕಾತಿಯ ಸುತ್ತೋಲೆಯಲ್ಲಿ ಪಾಲಿಸಬೇಕಾದ ನಿಯಮಗಳಲ್ಲಿ ಮರು ಸುತ್ತೋಲೆ ಹೊರಡಿಸದಿದ್ದಲ್ಲಿ ರಾಜ್ಯ ಮಟ್ಟದ ಹೋರಾಟ ಮಾಡುವುದಾಗಿ ದಲಿತ ಸಂಘರ್ಷ ಸಮಿತಿ ಎಚ್ಚರಿಕೆ ನೀಡಿದೆ.



ಪೊನ್ನಂಪೇಟೆ ತಹಸೀಲ್ದಾರ್ ಕಚೇರಿ ಎದುರು ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ಪೊನ್ನಂಪೇಟೆ ತಹಸೀಲ್ದಾರ್ ಕಚೇರಿ ಎದುರು ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿ ಶಿರಸ್ತೇದಾರ್ ರವಿ ಅವರಿಗೆ ಮನವಿ ಸಲ್ಲಿಸಿ ಒತ್ತಾಯಿಸಲಾಯಿತು.

ರಾಜ್ಯ ಸರ್ಕಾರದ ಸುತ್ತೋಲೆಯಲ್ಲಿ, ಕರ್ನಾಟಕ ಸರ್ಕಾರವು ಹೊರಗುತ್ತಿಗೆ ನೇಮಕಾತಿಗಳಲ್ಲಿ ಮೀಸಲಾತಿ ನಿಯಮಗಳನ್ನು ಅನ್ವಯಿಸಿ ನೇಮಕಾತಿ ಪ್ರಕ್ರಿಯೆ ನಡೆಸಲು ಆದೇಶ ನೀಡಿರುವುದನ್ನು ಸ್ವಾಗತಿಸಿಕೊಂಡಿದ್ದು, ಸುತ್ತೋಲೆಯ 1 ಮತ್ತು ಮತ್ತು 6ನೇ ಷರತ್ತುಗಳು ಆದೇಶದ ಸದುದ್ದೇಶದ ಆಶಯಗಳಿಗೆ ವಿರುದ್ಧವಾಗಿವೆ.


1ನೇ ಷರತ್ತಿನಲ್ಲಿ ಹೊರಗುತ್ತಿಗೆ ಮೀಸಲಾತಿ ನೀತಿಯು 45 ದಿನಗಳಿಗಿಂತ ಕಡಿಮೆ ಅವಧಿಯ ನೇಮಕಾತಿಗಳಿಗೆ ಅನ್ವಯಿಸುವುದಿಲ್ಲ ಎಂದಿದೆ. ಇದು ಮೀಸಲಾತಿ ವಿರೋಧಿಗಳಿಗೆ ಅನುಕೂಲಕರವಾಗಿದ್ದು, ರದ್ದುಪಡಿಸಿ ಅವಧಿಗಿಂತ ಮೀಸಲಾತಿ ನಿಯಮಗಳನ್ನು ಕಡ್ಡಾಯವಾಗಿ ಅನುಸರಿಸುವಂತೆ ಆದೇಶಿಸಬೇಕಿದೆ.

6ನೇ ಷರತ್ತಿನಲ್ಲಿ ಯಾವುದೇ ಇಲಾಖೆಯಲ್ಲಿ ಕನಿಷ್ಠ 20 ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಸಂದರ್ಭದಲ್ಲಿ ಮಾತ್ರ ಮೀಸಲಾತಿ ನೀತಿಯನ್ನು ಜಾರಿಗೊಳಿಸತಕ್ಕದ್ದು ಎಂದಿರುವುದು ಅವೈಜ್ಞಾನಿಕ ಮತ್ತು ದುರುದ್ದೇಶಪೂರಿತವಾಗಿದೆ. 20ಕ್ಕೂ ಹೆಚ್ಚಿನ ಸಂಖ್ಯೆಯ ನೇಮಕಾತಿಗಳಿದ್ದಾಗ ಮಾತ್ರ ಮೀಸಲಾತಿ ನೀತಿ ಅನ್ವಯಿಸುತ್ತದೆ ಎಂದು ಸರ್ಕಾರವೇ ನಿರ್ಬಂಧ ಹೇರಬೇಕಿದೆ ಎಂದು ಗಮನ ಸೆಳೆಯಲಾಯಿತು.

ಆದೇಶವನ್ನು ಮಾರ್ಪಾಡು ಮಾಡಿ ಮರು ಸುತ್ತೋಲೆ ಹೊರಡಿಸಲು ಒತ್ತಾಯಿಸಲಾಯಿತು. ಸರ್ಕಾರ ತುರ್ತು ಕ್ರಮಕ್ಕೆ ಮುಂದಾಗದಿದ್ದಲ್ಲಿ, ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಹೋರಾಟ ಹಮ್ಮಿಕೊಳ್ಳುವ ಎಚ್ಚರಿಕೆ ನೀಡಲಾಯಿತು. ಡಿಎಸ್‌ಎಸ್ ವಿಭಾಗೀಯ ಸಂಚಾಲಕ ಕೃಷ್ಣಪ್ಪ, ಆಲ್ ಇಂಡಿಯಾ ದಲಿತ್ ರೈಟ್ಸ್ ರಾಜ್ಯ ಸಂಚಾಲಕ ರಮೇಶ್ ಮಾಯಮುಡಿ, ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಎಚ್.ಆರ್. ಪರಶುರಾಮ್, ಸಂಚಾಲಕ ರಜನಿಕಾಂತ್ ಇದ್ದರು.

ಕಾಡಾನೆ ಹಾವಳಿ ತಡೆಯುವಲ್ಲಿ ಅರಣ್ಯ ಇಲಾಖೆ ವಿಫಲ

ಕೊಕೇರಿ, ನರಿಯಂದಡ ಗ್ರಾಮಗಳಲ್ಲಿ 2 ಎಕರೆ ಬಾಳೆಗಿಡ ನಾಶ



ಕಾಡಾನೆಗಳ ದಾಳಿಯಿಂದ ಹಾನಿಗೊಳಗಾಗಿರುವ ಬೆಳೆ ಮತ್ತು ನೀರಿನ ಪೈಪುಗಳು.

ಮಡಿಕೇರಿ,ಜು.5– ಚೆಯ್ಯಂಡಾಣೆ ಬಳಿಯ ನರಿಯಂದಡ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಡಾನೆ ಹಾವಳಿ ನಿರಂತರವಾಗಿದ್ದರೂ ಈ ಬಗ್ಗೆ ಅರಣ್ಯ ಇಲಾಖೆ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿದೆ. ನರಿಯಂದಡ ಹಾಗೂ ಕೊಕೇರಿ ಗ್ರಾಮದ ಕಾಫಿತೋಟಗಳಲ್ಲಿ ಬೀಡು ಬಿಟ್ಟ ಕಾಡಾನೆಗಳ ಹಿಂಡು ಸುಮಾರು 2 ಎಕರೆಯಷ್ಟು ಫಸಲು ಭರಿತ ಬಾಳೆ ಗಿಡಗಳನ್ನು ಧ್ವಂಸಗೊಳಿಸಿದೆ.

ಮೋಟಾರ್, ಸಮೀಪದಲ್ಲೇ ಇದ್ದ ಸ್ಪಿಂಕ್ಲರ್ ಪೈಪ್‌ಗಳನ್ನು ತುಳಿದು ನಾಶಪಡಿಸಿದ್ದು, ತೋಟಕ್ಕೆ ಲಗ್ಗೆ ಇಟ್ಟ ಕಾಡಾನೆಗಳ ಹಿಂಡು ಕಾಫಿ, ಅಡಿಕೆ ಮತ್ತಿತರ ಗಿಡಗಳನ್ನು ನಾಶಪಡಿಸಿದೆ. ಕಾಡನೆ ದಾಳಿಯಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳು ಶಾಲೆಗೆ ತೆರಳಲು ಭಯಪಡುವಂತಾಗಿದೆ. ಕಾರ್ಮಿಕರು ತೋಟಕ್ಕೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ.

ಘಟನಾ ಸ್ಥಳಕ್ಕೆ ಡಿಎಫ್‌ಓ ಜಗನಾಥ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಾಡಾನೆಗಳ ಚಲನ–ವಲನ ಗಮನಿಸಿ, ಅವುಗಳನ್ನು ಕಾಡಿಗಟ್ಟುವ ಅಥವಾ ಅದನ್ನು ಸೆರೆ ಹಿಡಿದು ಬೇರೆಡೆ ಸ್ಥಳಾಂತರಿಸಲು ಅವಕಾಶವಿದ್ದರೆ ನಿಯಮನುಸಾರ ಮೇಲಾಧಿಕಾರಿಗಳ ಗಮನಕ್ಕೆ ತಂದು ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಜು.10ರಂದು ಹಮ್ಮಿಕೊಂಡಿರುವ ಪ್ರತಿಭಟನೆಯನ್ನು ಕೈಬಿಡುವಂತೆ ಮನವಿ ಮಾಡಿದರು. ವಿರಾಜಪೇಟೆ ವಲಯ ಅರಣ್ಯಾಧಿಕಾರಿ ಕಳ್ಳಿರ ದೇವಯ್ಯ, ಕ್ಯಾಂಪ್ ಸಿಬ್ಬಂದಿ ಹಾಜರಿದ್ದರು.

ರಕ್ತದಾನದಿಂದ ಉತ್ತಮ ಆರೋಗ್ಯ ಸಾಧ್ಯ

ವಿರಾಜಪೇಟೆ, ಜು.5– ರಕ್ತದಾನ ಮಾಡುವುದರಿಂದ ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯಾಗುವ ಮೂಲಕ ಬಿ.ಪಿ, ಶುಗರ್ ಹಾಗೂ ಕ್ಯಾನ್ಸರ್‌ನಂತ ಕಾಯಿಲೆಗಳನ್ನು ತಡೆಗಟ್ಟುವುದರೊಂದಿಗೆ ಉತ್ತಮ ಜೀವನ ನಡೆಸಲು ಸಾಧ್ಯ ಎಂದು ಕೊಡಗು ಆಸ್ಪತ್ರೆಯ ರಕ್ತ ನಿಧಿ ಕೇಂದ್ರದ ಡಾ.ಕರುಂಬಯ್ಯ ಹೇಳಿದರು.



ವಿರಾಜಪೇಟೆಯಲ್ಲಿ ಏರ್ಪಡಿಸಲಾಗಿದ್ದ ರಕ್ತ ದಾನ ಶಿಬಿರವನ್ನು ಕೊಡಗು ಆಸ್ಪತ್ರೆಯ ರಕ್ತ ನಿಧಿ ಕೇಂದ್ರದ ಡಾ.ಕರುಂಬಯ್ಯ ಉದ್ಘಾಟಿಸಿದರು.

ವಿರಾಜಪೇಟೆ ಪಂಜರುಪೇಟೆಯಲ್ಲಿರುವ ಸರ್ವೋದಯ ಶಿಕ್ಷಣ ಮಹಾ ವಿದ್ಯಾಲಯ ಹಾಗೂ ವಿವೇಕ ಜಾಗೃತ ಬಳಗದ ವತಿಯಿಂದ ಸರ್ವೋದಯ ವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ರಕ್ತದಾನ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಕ್ತದಾನ ಮಾಡುವುದರಿಂದ ಹೃದಯ ಸಂಬಂದ ಕಾಯಿಲೆಗಳನ್ನು ತಡೆಯಲು ಸಾಧ್ಯವಾಗುತ್ತದೆ ಎಂದರು.

ಸರ್ವೋದಯ ಶಿಕ್ಷಣ ಮಹಾ ವಿದ್ಯಾಲಯದ ಪ್ರಾಂಶುಪಾಲರಾದ ಡಾ, ಎಂ.ವಾಣಿ ಪ್ರಾಸ್ತಾವಿಕವಾಗಿ ಮಾತನಾಡಿ ರಕ್ತದಾನ ಶಿಬಿರದ ಯಶಸ್ವಿಗೆ ಯುವಕರು ಶಿಬಿರಾರ್ಥಿಗಳು ಮುಂದೆ ಬಂದಿದ್ದಾರೆ. ಇನ್ನು ಮುಂದೆಯೂ ಇಂತ ಕಾರ್ಯಕ್ರಮಗಳು ಹೆಚ್ಚು ಹೆಚ್ಚಾಗಿ ನಡೆಯುವುದರಿಂದ ಅನೇಕ ರೋಗಿಗಳಿಗೆ ಜೀವಗಳಿಗೆ ಒಳಿತಾಗಲಿದೆ ಎಂದು ಆಶಿಸಿದರು. ಕಾರ್ಯಕ್ರಮದಲ್ಲಿ ವಿವೇಕ ಜಾಗೃತ ಬಳಗದ ಶಶಿಕಲಾ ಬಾಸ್ಕರ್, ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿಯ ವಾಸಂತಿ, ಗ್ರಂಥಪಾಲಕ ಕೆ.ಎಸ್.ರಾಜಶೇಖರ್, ಬೋಧಕ–ಬೋದಕೇತರರು, ರಕ್ತನಿಧಿ ಕೇಂದ್ರದ ಕುಮಾರ್ ಉಪಸ್ಥಿತರಿದ್ದರು. ರಕ್ತದಾನ ಶಿಬಿರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ 50ಕ್ಕೂ ಹೆಚ್ಚು ಯುವಕರು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿದರು, ವಿವಾಲ ಸ್ವಾಗತಿಸಿದರೆ, ಶರೀನಾ ವಂದಿಸಿದರು.

ಇಂಧನ ದರ ಏರಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ

ಕಾರ್ಯಕರ್ತರ ಮೇಲಿನ ಕೇಸ್‌ಗೆ ಹೈಕೋರ್ಟ್ ತಡೆ

ಗೋಣಿಕೊಪ್ಪ ಜು.5– ರಾಜ್ಯ ಸರ್ಕಾರದ ಇಂಧನ ದರ ಏರಿಕೆ ವಿರೋಧಿಸಿ ವಿರಾಜಪೇಟೆಯಲ್ಲಿ ನಡೆದ ಪ್ರತಿಭಟನೆ ಸಂದರ್ಭ ಬಿಜೆಪಿ ಕಾರ್ಯಕರ್ತರ ಮೇಲೆ ಹಾಕಲಾಗಿದ್ದ, ಸುಮೊಟೊ ಕೇಸ್‌ಗೆ ಉಚ್ಚ ನ್ಯಾಯಾಲಯ ತಡೆಯಾಜ್ಞೆ ನೀಡಿದೆ ಎಂದು ವಿರಾಜಪೇಟೆ ಬಿಜೆಪಿ ಮಂಡಲ ಅಧ್ಯಕ್ಷ ಮಾಚಿಮಂಡ ಸುವಿನ್ ಗಣಪತಿ ತಿಳಿಸಿದ್ದಾರೆ.

ವಿರಾಜಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯ ನಿವೃತ್ತ ಅಡ್ವೋಕೇಟ್ ಜನರಲ್ ಹಾಗೂ ಹಿರಿಯ ಕೌನ್ಸಿಲರ್ ಅರುಣ್ ಶ್ಯಾಂ ಅವರ ಮೂಲಕ ತಡೆಯಾಜ್ಞೆ ತರಲಾಗಿದೆ ವಕೀಲರಾದ ಶಾಂತೆಯಂಡ ನಿಶಾಂತ್ ಕುಶಾಲಪ್ಪ, ಕನ್ನಂಡ ಅರುನ್ ನಾಚಪ್ಪ, ಸುಯೋಗ್ ಹೇರಳೆ, ರಿತಿಕ್ ಅವರ ಪ್ರಯತ್ನದಿಂದ ಗೆಲುವು ದೊರೆಕಿದೆ ಪಕ್ಷದ ಸ್ಥಳೀಯ ವಕೀಲರು ಕೂಡ ಅಭಿನಂದನಾರ್ಹರು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ರಾಜಕೀಯ ಪ್ರೇರಿತವಾಗಿ ಇದೊಂದು ಸುಳ್ಳು ಮೊಕದ್ದಮ್ಮೆಯಾಗಿದ್ದು, ಈ ಬಗ್ಗೆ ಡಿವೈಎಸ್‌ಪಿಗೆ ಅನುಮತಿಗೆ ಅರ್ಜಿ ನೀಡಲಾಗಿತ್ತು. ಆದರೆ, ಪಕ್ಷ ಇದೆಲ್ಲವನ್ನೂ ಮೆಟ್ಟಿ ನಿಂತು ಹೋರಾಟ ಮುಂದುವರಿಸಲಿದೆ ಎಂದು ತಿಳಿಸಿದರು.

ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಮಾಚಿಮಾಡ ರವೀಂದ್ರ ಮಾತನಾಡಿ, ಪಕ್ಷದ ಹೋರಾಟ ಹತ್ತಿಕ್ಕಲು ಮೊಕದ್ದಮ್ಮೆ ದಾಖಲಿಸಲಾಗಿತ್ತು. ಇದಕ್ಕೆ ತಡೆಯಾಜ್ಞೆ ಮೂಲಕ ನಾವು ನಮ್ಮ ಕಾರ್ಯಕರ್ತರ ಬೆಂಬಲವಾಗಿ ನಿಂತಿದ್ದೇವೆ. ಪಕ್ಷ ಇಂತಹ ಯಾವ ಬೆದರಿಕೆಗೂ ಬಗ್ಗುವುದಿಲ್ಲ. ನಮ್ಮ ಹೋರಾಟ ಮುಂದುವರಿಯುತ್ತದೆ ಎಂದರು. ವಕ್ತಾರ ಚೆಪ್ಪುಡೀರ ರಾಕೇಶ್ ದೇವಯ್ಯ ಮಾತನಾಡಿದರು.



ವಿರಾಜಪೇಟೆ ಬಿಜೆಪಿ ಮಂಡಲ ಅಧ್ಯಕ್ಷ ಮಾಚಿಮಂಡ ಸುವಿನ್ ಗಣಪತಿ ಸುದ್ದಿಗೋಷ್ಠಿ.

ಚಾಮರಾಜನಗರದಲ್ಲಿ ಜನರಿಗೆ ಮೂಲಸೌಲಭ್ಯ ಕಲ್ಪಿಸಿ

ಅಧಿಕಾರಿಗಳಿಗೆ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ ಸೂಚನೆ



ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರಾದ ಭೈರತಿ ಸುರೇಶ ಅವರು ಶುಕ್ರವಾರ ಚಾಮರಾಜನಗರದಲ್ಲಿ ಅಧಿಕಾರಿಗಳ ಸಭೆ ನಡೆಸಿದರು.

ಚಾಮರಾಜನಗರ, ಜು.5– ಜಿಲ್ಲೆಯಲ್ಲಿರುವ ಎಲ್ಲಾ ನಗರ, ಸ್ಥಳೀಯ ಸಂಸ್ಥೆಗಳು ಸಾರ್ವಜನಿಕರಿಗೆ ಅವಶ್ಯವಿರುವ ಮೂಲ ಸೌಲಭ್ಯಗಳನ್ನು ಒದಗಿಸಲು ಮುಂದಾಗುವಂತೆ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರಾದ ಭೈರತಿ ಸುರೇಶ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ವೆಂಕಟೇಶ್ ಹಾಗೂ ಪೌರಾಡಳಿತ ಮತ್ತು ಹಜ್ ಸಚಿವರಾದ ರಹೀಂ ಖಾನ್ ಅವರ ಸಮ್ಮುಖದಲ್ಲಿ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಪ್ರಾಧಿಕಾರ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಕೆ.ಯು.ಐ.ಡಿ.ಎಫ್.ಸಿ ಹಾಗೂ ಕರ್ನಾಟಕ ನಗರ ನೀರು ಮತ್ತು ಒಳಚರಂಡಿ ಮಂಡಳಿಯ ಹಾಗೂ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಂದಿಗೆ ನಡೆದ ಪ್ರಗತಿ ಪರಿಶೀಲಿಸಿ ಅವರು ಮಾತನಾಡಿದರು.

ಕುಡಿಯುವ ನೀರು, ರಸ್ತೆ, ಸ್ವಚ್ಛತೆ, ಒಳಚರಂಡಿ ವ್ಯವಸ್ಥೆ, ತೆರಿಗೆ ಸಂಗ್ರಹ ಸೇರಿದಂತೆ ಜಿಲ್ಲೆಯಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅವುಗಳನ್ನು ಆದ್ಯತೆ ಮೇರೆಗೆ ಪರಿಹರಿಸುವ ನಿಟ್ಟಿನಲ್ಲಿ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳು ಕಾರ್ಯನಿರ್ವಹಿಸಬೇಕು. ಅಮೃತ್ ನಗರೋತ್ಥಾನ, ಮುಖ್ಯಮಂತ್ರಿಗಳ ವಿಶೇಷ ಅನುದಾನ ಸೇರಿದಂತೆ ವಿವಿಧ ಯೋಜನೆಗಳಡಿ ಬಿಡುಗಡೆಯಾಗಿರುವ ಅನುದಾನಗಳ ಸಮರ್ಪಕ ಬಳಕೆಯಾಗಬೇಕು. ಯಾವುದೇ ಅನುದಾನ ವಾಪಸ್ಸಾಗದಂತೆ ಎಚ್ಚರ ವಹಿಸಿ ಜಿಲ್ಲೆಯ ಅಭಿವೃದ್ಧಿಯ ವೇಗ ಹೆಚ್ಚಿಸಲು ಅಧಿಕಾರಿಗಳು ಮುಂದಾಗಬೇಕು ಎಂದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಮಾತನಾಡಿ ನಗರದ ಜೋಡಿರಸ್ತೆ ಅಗಲೀಕರಣ ಸಂಬಂಧ ನಗರಸಭೆಗೆ ಅಗತ್ಯ ದಾಖಲಾತಿ ನೀಡಿರುವವರಿಗೆ ಪರಿಹಾರ ನೀಡಬೇಕಾಗಿದೆ. ಈ ಪ್ರಕ್ರಿಯೆಯನ್ನು ಸ್ಥಳೀಯ ಶಾಸಕರು ಹಾಗೂ ಜಿಲ್ಲಾಧಿಕಾರಿಗಳ ಜೊತೆ ಚರ್ಚಿಸಿ ಆದಷ್ಟು ಬೇಗನೆ ಪೂರ್ಣಗೊಳಿಸಲು ನಿರ್ಧರಿಸಬೇಕು. ಅಲ್ಲದೆ ಜಿಲ್ಲೆಯ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಕಾರ್ಯಚಟುವಟಿಕೆಗಳನ್ನು ಚುರುಕುಗೊಳಿಸಲು ಕೊರತೆ ಇರುವ ಸಿಬ್ಬಂದಿ ಪಟ್ಟಿಯನ್ನು ಲಿಖಿತವಾಗಿ ಸಲ್ಲಿಸುವಂತೆ ಉಸ್ತುವಾರಿ ಸಚಿವರು ಸೂಚಿಸಿದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ ಮಾತನಾಡಿ ತಮ್ಮ ಕ್ಷೇತ್ರದ ಸಮಸ್ಯೆ ಹೇಳಿಕೊಂಡರು. ಇದೇ ವೇಳೆ ಮಾತನಾಡಿದ ಪೌರಾಡಳಿತ ಸಚಿವರಾದ ರಹೀಂ ಖಾನ್ ಅವರು ನಗರೋತ್ಥಾನ ಕಾರ್ಯಕ್ರಮದಡಿಯಲ್ಲಿ ಪಟ್ಟಣಗಳಲ್ಲಿ ಬೀದಿದೀಪ ಅಳವಡಿಸಲು ಜಿಲ್ಲಾ ನಗರಭಿವೃದ್ಧಿ ಕೋಶದ ವತಿಯಿಂದ ಟೆಂಡರ್ ಕರೆದು ಅವಶ್ಯ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಸೂಚಿಸಿದರು.

ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನ, ನಗರಾಭಿವೃದ್ಧಿ ಇಲಾಖೆ ಸರ್ಕಾರದ ಕಾರ್ಯದರ್ಶಿ ದೀಪಾ ಚೋಳನ್, ಪೌರಡಳಿತ ನಿರ್ದೇಶಕರಾದ ಪ್ರಭುಲಿಂಗ ಕವಳಿಕಟ್ಟಿ, ವ್ಯವಸ್ಥಾಪಕ ನಿರ್ದೇಶಕ ಶರತ್, ಮುಖ್ಯ ಅಭಿಯಂತರ ರಾಧಕೃಷ್ಣ, ಮುಖ್ಯ ಯೋಜನಾಧಿಕಾರಿ ಶರೀನ್ ನದಾಫ್, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು. ಸಭೆಯ ಬಳಿಕ ಗಣ್ಯರು ಡೆಂಗ್ಯೂ ತಡೆ ಕುರಿತ ಜಾಗೃತಿ ಭಿತ್ತಿಪತ್ರ (ಪೋಸ್ಟರ್) ಗಳನ್ನು ಬಿಡುಗಡೆಗೊಳಿಸಿದರು.

> “ಡೆಂಗ್ಯೂ ತಡೆಯಲು ಮನೆಯ ಸುತ್ತಲಿನ ಪ್ರದೇಶಗಳಲ್ಲಿ ನೀರು ನಿಲ್ಲದಂತೆ ಎಚ್ಚರ ವಹಿಸಬೇಕು. ಹೋಟೆಲ್‌ಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ಈ ನಿಟ್ಟಿನಲ್ಲಿ ಎಲ್ಲಾ ನಗರ, ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಜಿಲ್ಲಾ ಹಾಗೂ ತಾಪಂ ಅಧಿಕಾರಿಗಳು ಆರೋಗ್ಯಾಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಪಂಚಾಯಿತಿ ಮಟ್ಟದಲ್ಲಿ ಸ್ವಚ್ಛತೆ ಬಗ್ಗೆ ಸರ್ವೆ ನಡೆಸಿ ಪರಿಶೀಲಿಸಬೇಕು.
> –ಕೆ.ವೆಂಕಟೇಶ್, ಉಸ್ತುವಾರಿ ಸಚಿವರು.

ನಗರಸಭೆ ಎಇಇ ಅಮಾನತಿಗೆ ಶಿಫಾರಸ್ಸು, ಸರಿಯಾಗಿ ಕೆಲಸ ಮಾಡದ ಅಧಿಕಾರಿಗಳ ವರ್ಗಾವಣೆ

ಅಧಿಕಾರಿಗಳ ಬೆವರಿಳಿಸಿದ ಸಚಿವ ಸುರೇಶ್, ವೆಂಕಟೇಶ್, ರಹೀಂಖಾನ್

ಚಾಮರಾಜನಗರ, ಜು.5– ನಗರದಲ್ಲಿ ಶುಕ್ರವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹಾಗೂ ಪೌರಾಡಳಿತ ಸಚಿವ ರಹೀಂ ಖಾನ್ ಅವರು ಅಧಿಕಾರಿಗಳ ಕಾರ್ಯ ವೈಖರಿಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ನಗರಸಭೆ, ನಗರ ಮತ್ತು ಗ್ರಾಮಾಂತರ ಯೋಜನೆ ಅಧಿಕಾರಿಗಳು ಹಾಗೂ ಒಳಚರಂಡಿ ಇಲಾಖೆಗೆ ಅಧಿಕಾರಿಗಳಿಗೆ ಬೆವರಿಳಿಸಿದರು.

ಸಭೆಗೆ ಗೈರಾಗಿದ್ದ ಚಾಮರಾಜನಗರ ನಗರಸಭೆ ಎಇಇ ನಟರಾಜು ಅವರನ್ನು ಅಮಾನತು ಮಾಡುವಂತೆ ಸಚಿವ ಸುರೇಶ್ ಡಿಸಿ ಶಿಲ್ಪಾನಾಗ್‌ಗೆ ಸೂಚನೆ ನೀಡಿದರು. ಬಳಿಕ, ಚಾಮರಾಜನಗರ ನಗರಸಭೆ ಆಯುಕ್ತ ರಾಮದಾಸ್, ನಗರ ಯೋಜನೆ ಅಧಿಕಾರಿ ರೇಣುಕಾದೇವಿ ಅವರು ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾಗಿದ್ದಾರೆ ಎಂದು ದೂರುಗಳು ಕೇಳಿ ಬಂದಿದ್ದರಿಂದ, ಶಾಸಕರು ಹಲವು ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿಫಲರಾಗಿದ್ದಾರೆಂದು ಹರಿಹಾಯ್ದದ್ದರಿಂದ ಇವರಿಬ್ಬರನ್ನೂ ಬೇರೆಡೆ ವರ್ಗಾವಣೆ ಮಾಡುವಂತೆ ಸಚಿವರು ಸೂಚನೆ ನೀಡಿದರು.

ಚಾಮರಾಜನಗರ ಯೋಜನಾ ಅಧಿಕಾರಿಗಳು ಬಂದ ಅನುದಾನವನ್ನು ಬಳಸಿಕೊಳ್ಳದೇ ವಾಪಾಸ್ ಆದ ಮಾಹಿತಿ ಪಡೆದ ಸಚಿವ ವೆಂಕಟೇಶ್ ಗರಂ ಆದರು. ದುಡ್ಡು ಕೊಟ್ಟರೂ ಕೆಲಸ ಮಾಡದೇ ವಾಪಾಸ್ ಹೋಗಿದೆ, ನೀವೆಲ್ಲಾ ಅಧಿಕಾರಿಗಳಾಗಿ ಯಾಕೆ ಇರ್ತಿರಾ, 6 ತಿಂಗಳಾದರೂ ಯಾವ ಕೆಲಸವೂ ಪ್ರಗತಿಯಲ್ಲಿ ಇಲ್ಲವಲ್ಲಾ ಎಂದು ಛೀ ಮಾರಿ ಹಾಕಿದರು. ಚಾಮರಾಜನಗರ ನಗರಸಭೆ ವ್ಯಾಪ್ತಿಯಲ್ಲಿ ಶೇ.50 ಒಳಚರಂಡಿ ವ್ಯವಸ್ಥೆ ಹಾಗೂ ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯಲ್ಲಿ ಶೇ.75ರಷ್ಟು ಯುಜಿಡಿ ವ್ಯವಸ್ಥೆ ಇಲ್ಲದಿರುವುದನ್ನು ತಿಳಿದು ಕೂಡಲೇ ಅಂದಾಜು ಪಟ್ಟಿ ಕಳುಹಿಸಿ ಹಣ ಕೊಡುತ್ತೇನೆ ಎಂದು ಸಚಿವ ಬೈರತಿ ಸುರೇಶ್ ಭರವಸೆ ನೀಡಿದರು.

ಅಮಾವಾಸ್ಯೆ ಪೂಜೆ: ಮಹದೇಶ್ವರಬೆಟ್ಟಕ್ಕೆ ಹರಿದು ಬಂದ ಭಕ್ತ ಸಾಗರ



ಶುಕ್ರವಾರ ಮಹದೇಶ್ವರಬೆಟ್ಟದಲ್ಲಿ ನಡೆದ ಆಷಾಢ ಮಾಸದ ಮಣ್ಣೆತ್ತಿನ ಅಮಾವಾಸ್ಯೆ ಪೂಜೆಯಲ್ಲಿ ಪಾಲ್ಗೊಂಡಿರುವ ಭಕ್ತಸಾಗರ.

ಹನೂರು, ಜು.5– ಪ್ರಸಿದ್ಧ ಯಾತ್ರ ಸ್ಥಳವಾದ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ಆಷಾಢ ಮಾಸದ ಮಣ್ಣೆತ್ತಿನ ಅಮಾವಾಸ್ಯೆ ಹಿನ್ನೆಲೆ ಭಕ್ತಸಾಗರವೇ ಹರಿದು ಬಂದಿತ್ತು.

ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಮಲೆ ಮಾದೇಶ್ವರನ ಬೆಟ್ಟದಲ್ಲಿ ಮಣ್ಣೆತ್ತಿನ ಅಮಾವಾಸ್ಯೆ ಪ್ರಯುಕ್ತ ನಡೆದ ವಿಶೇಷ ಪೂಜೆ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು. ಮಾದೇಶ್ವರನಿಗೆ ಎಳನೀರು ಅಭಿಷೇಕ, ಪಂಚಾಮೃತ ಅಭಿಷೇಕ, ನೈವೇದ್ಯ ಅರ್ಪಿಸಿದ ಬಳಿಕ ಮಹಾ ಮಂಗಳಾರತಿ ಜರುಗಿತು.

ಜನಸ್ತೋಮ: ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ಭಕ್ತಾದಿಗಳು ತಮ್ಮ ಇಷ್ಟಾರ್ಥ ಸಿದ್ಧಿಸುವಂತೆ ಮಲೆ ಮಹದೇಶ್ವರನಿಗೆ ಪೂಜೆ ಸಲ್ಲಿಸಿ ವಿವಿಧ ಬೆಳ್ಳಿಯ ತೇರು ಉತ್ಸವಗಳಾದ ಹುಲಿ ವಾಹನ ಉತ್ಸವ ಮಲೆ ಮಹದೇಶ್ವರ ಉತ್ಸವ ರುದ್ರಾಕ್ಷಿ ಮಂಟಪೋತ್ಸವ ವಿವಿಧ ಉತ್ಸವಗಳ ಪೂಜಾ ಕಾರ್ಯಕ್ರಮಗಳು ಹರಕೆ ಹೊತ್ತು ಭಕ್ತಾದಿಗಳು ಸಲ್ಲಿಸಿದರು.

ಬೆಂಗಳೂರು, ಮೈಸೂರು, ಮಂಡ್ಯ, ಚಾಮರಾಜನಗರ, ಕೋಲಾರ ಹಾಗೂ ನೆರೆಯ ತಮಿಳುನಾಡಿನಿಂದಲೂ ಅಪಾರ ಸಂಖ್ಯೆಯ ಭಕ್ತಾದಿಗಳು ಆಗಮಿಸುವ ಮೂಲಕ ಮಲೆ ಮಹದೇಶ್ವರನಿಗೆ ಪೂಜೆ ಸಲ್ಲಿಸಲು ಸರತಿ ಸಾಲಿನಲ್ಲಿ ನಿಂತು ಮಾದಪ್ಪನ ದರ್ಶನ ಪಡೆದು ಉಘೇ ಮಾದಪ್ಪ ಉಘೇ ಮಾದಪ್ಪ ಜೈಕಾರ ಕೂಗಿದರು.

ಮಲೆ ಮಾದೇಶ್ವರ ಬೆಟ್ಟಕ್ಕೆ ಮಣ್ಣೆತ್ತಿನ ಅಮಾವಾಸ್ಯೆಗೆ ಬಂದಂತ ಭಕ್ತಾದಿಗಳಿಗೆ ವಿಶೇಷ ದಾಸೋಹ ವ್ಯವಸ್ಥೆಯನ್ನು ಕಲ್ಪಿಸುವ ಮೂಲಕ ಚಿತ್ರಾನ್ನ, ಪುಳಿಯೋಗರೆ, ಅನ್ನ ಸಾಂಬಾರ್, ಮಜ್ಜಿಗೆ ಹುಳಿ, ರಸಂ, ಮಜ್ಜಿಗೆ ವಿಶೇಷವಾಗಿ ದಾಸೋಹ ಕಲ್ಪಿಸಲಾಗಿತ್ತು.

ನಾಳೆ ನಗರ ಸೇರಿ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಜು.5– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಚಾಮರಾಜನಗರ ಉಪವಿಭಾಗ ವ್ಯಾಪ್ತಿಯಲ್ಲಿ 1ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಜು.7 ರಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಚಾಮರಾಜನಗರ ಟೌನ್–1, ಕೋಡಿಮೋಳೆ, ರಾಮಸಮುದ್ರ, ಮಾದಾಪುರ, ಕಾಗಲವಾಡಿ, ಸೋಮವಾರಪೇಟೆ ಟೌನ್–2, ಹರದನಹಳ್ಳಿ, ಬೇಡರಪುರ, ಟಿ.ಕೆ ಮೋಳೆ, ಶಿವಪುರ, ಗೂಳಿಪುರ ಎನ್.ಜೆ.ವೈ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಪೌರಾಡಳಿತ, ಹಜ್ ಸಚಿವರಿಗೆ ಮನವಿ



ಚಾಮರಾಜನಗರ, ಜು.5– ಲೋಡರ್ಸ್ ಮತ್ತು ಕ್ಲೀನರ್ಸ್ ನೇಮಕಾತಿ ಮಾಡುವಂತೆ ಕೋರಿ ನೇರವೇತನ ಪೌರಕಾರ್ಮಿಕರು ನಗರದಲ್ಲಿಂದು ಪೌರಾಡಳಿತ, ಹಜ್ ಖಾತೆ ಸಚಿವ ರಹೀಂ ಖಾನ್‌ಗೆ ಮನವಿ ಸಲ್ಲಿಸಿದರು.

2023 ರಿಂದ ಲೋಡರ್ಸ್ ಮತ್ತು ಕ್ಲೀನರ್ಸ್ ಹುದ್ದೆ ಕಾಲ್ ಫಾರ ಆಗಿ ಒಂದೂವರೆ ವರ್ಷ ಆಗುತ್ತ ಬಂದಿದ್ದು ಇದುವರೆಗೂ ಕೂಡ ನೇಮಕಾತಿ ಮಾಡಿರುವುದಿಲ್ಲ. ಹಲವಾರು ಬಾರಿ ಮನವಿಗಳನ್ನು ನೀಡುತ್ತ ಬಂದಿದ್ದೇವೆ. ಆದರೂ ಕೂಡ ಇನ್ನೂ ನೇಮಕಾತಿ ಮಾಡಿಕೊಂಡಿರುವುದಿಲ್ಲ. ಸುಮಾರು ಇಪ್ಪತ್ತು ವರ್ಷಗಳಿಂದ ಗುತ್ತಿಗೆ, ಹೊರಗುತ್ತಿಗೆ, ನೇರಪಾವತಿ, ಪೌರಕಾರ್ಮಿಕರಾಗಿ ಲೋಡರ್ಸ್ ಮತ್ತು ಕ್ಲೀನರ್ಸ್‌ಗಳಿಗೆ ಅನ್ಯಾಯವಾಗುತ್ತಿದ್ದು, ಅವರುಗಳಿಗೆ ನೇಮಕಾತಿ ಮಾಡಿಕೊಳ್ಳುವಂತೆ ಸಚಿವರಲ್ಲಿ ಕೋರಿದರು.

ದೊಡ್ಡಿಂದುವಾಡಿಗೆ ಬಾರದ ಬಸ್: ರೈತರ ಪ್ರತಿಭಟನೆ

ಕೊಳ್ಳೇಗಾಲ, ಜು.5– ದೊಡ್ಡಿಂದುವಾಡಿ ಗ್ರಾಮಕ್ಕೆ ಸಾರಿಗೆ ಬಸ್ ಬರುತ್ತಿಲ್ಲ ಎಂದು ಆರೋಪಿಸಿ ರೈತ ಸಂಘದ ಕಾರ್ಯಕರ್ತರು ಶುಕ್ರವಾರ ಬೆಳಗ್ಗೆ ಕೆಲಕಾಲ ದೊಡ್ಡಿಂದುವಾಡಿ ವೃತ್ತದ ಬಳಿ ರಸ್ತೆ ತಡೆ ಚಳುವಳಿ ನಡೆಸಿದರು.

ತಾಲೂಕಿನ ದೊಡ್ಡಿಂದುವಾಡಿ ಗ್ರಾಮದೊಳಗೆ ಕೆಎಸ್‌ಆರ್‌ಟಿಸಿ ಬಸ್ಸು ಬರುತ್ತಿಲ್ಲ. ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ, ಮುಖ್ಯ ರಸ್ತೆಯಲ್ಲೆ ಕೆಲವು ಬಸ್ ನಿಲ್ಲಿಸಿ ವಾಪಸ್ಸಾಗುತ್ತಿವೆ ಹಾಗೂ ಹೆಚ್ಚುವರಿ ಬಸ್ ಬಿಡುವಲ್ಲಿಯೂ ಡಿಪೋ ಅಧಿಕಾರಿಗಳು ವಿಫಲರಾಗಿದ್ದಾರೆ, ಹಲವು ಭಾರೀ ಗಮನಕ್ಕೆ ತಂದರೂ ಸ್ಪಂದಿಸಿಲ್ಲ ಎಂದು ಆರೋಪಿಸಿ ರೈತರು ಪ್ರತಿಭಟಿಸಿದರಲ್ಲದೆ ಈ ವೇಳೆ ಸಾರಿಗೆ ಅಧಿಕಾರಿಗಳ ವಿರುದ್ಧ ದಿಕ್ಕಾರದ ಘೋಷಣೆಗಳನ್ನು ಕೂಗಿದರು.



ಕೊಳ್ಳೇಗಾಲ ತಾಲೂಕಿನ ದೊಡ್ಡಿಂದುವಾಡಿ ಗ್ರಾಮದ ಮುಖ್ಯರಸ್ತೆಯಲ್ಲಿ ಸಾರಿಗೆ ಅಧಿಕಾರಿಗಳ ತಾರತಮ್ಯ ದೋರಣೆ ಖಂಡಿಸಿ ರೈತರು ರಸ್ತೆ ತಡೆ ಚಳುವಳಿ ನಡೆಸಿದರು. ಈ ವೇಳೆ ಮ್ಯಾನೇಜರ್ ಶಂಕರ್ ಆಗಮಿಸಿ ರೈತರಿಂದ ಅಹವಾಲು ಆಲಿಸಿದರು.

ಆ ವೇಳೆ ಸ್ಥಳಕ್ಕೆ ಡಿಪೋ ವ್ಯವಸ್ಥಾಪಕರಾದ ಶಂಕರ್ ಆಗಮಿಸಿ ರೈತರಿಂದ ಅಹವಾಲು ಸ್ವೀಕರಿಸಿ ಇಂದಿನಿಂದಲೇ ಗ್ರಾಮದೊಳಗೆ ಬಸ್ ಪ್ರವೇಶಿಸಿ ನಿಲುಗಡೆಗೆ ಅವಕಾಶ ಕಲ್ಪಿಸಲಾಗುವುದು, ಹೆಚ್ಚುವರಿ ಬಸ್ ಖರೀದಿ ಪ್ರಕ್ರಿಯೆ ಮುಗಿದ ಕೂಡಲೆ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸಲಾಗುವುದು ಎಂದರಲ್ಲದೆ ಪ್ರತಿಭಟನೆ ಕೈಬಿಡಿ ಎಂದು ರೈತರಲ್ಲಿ ಮನವಿ ಮಾಡಿದರು.

ಇದಕ್ಕೆ ಧ್ವನಿಗೂಡಿಸಿದ ರೈತ ಸಂಘದ ಜಿಲ್ಲಾ ಹಾಗೂ ತಾಲೂಕು ಘಟಕದ ಪದಾಧಿಕಾರಿಗಳು ಒಂದು ವಾರದೊಳಗೆ ನಮ್ಮ ಬೇಡಿಕೆ ಈಡೇರಿಸದಿದ್ದರೆ ಡಿಪೋಗೆ ಬೀಗ ಜಡಿದು ಉಗ್ರ ಪ್ರತಿಭಟನೆ ನಡೆಸ ಬೇಕಾಗುತ್ತದೆಂದು ಎಚ್ಚರಿಸಿ ಪ್ರತಿಭಟನೆ ಹಿಂಪಡೆದರು. ರಸ್ತೆ ತಡೆ ಹಿನ್ನೆಲೆ. ಕೆಲ ಕಾಲ ಬಸ್ ಸಂಚಾರದಲ್ಲಿ ವ್ಯತ್ಯಯ ಉಂಟಾಗಿ ಪ್ರಯಾಣಿಕರು, ವಾಹನ ಸವಾರರು, ತುರ್ತು ತೆರಳಬೇಕಾದವರು ಕೆಲಕಾಲ ಪರದಾಡುವಂತಾಯಿತು.

ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾ ಶಾಖೆಯ ಶ್ರೀಕಂಠಸ್ವಾಮಿ, ಗೌಡೇಗೌಡ, ತಾಲೂಕು ಅಧ್ಯಕ್ಷ ಶಿವಮಲ್ಲು, ರವಿನಾಯ್ಡು, ಮಧುವನಹಳ್ಳಿ ಬಸವರಾಜು, ಶಿವಮಲ್ಲು, ಪೆರಿಯನಾಯಗಂ, ವಸಂತ, ರವಿ, ಪ್ರಕಾಶ್, ಚಾರ್ಲಿ, ಅಂಥೋಣಿಸ್ವಾಮಿ, ಬಸವರಾಜು, ಜಾನ್ ಕೆನಡಿ, ಕುಮಾರ ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.

ಮುಡಾ ಹಗರಣದಲ್ಲಿ ಆಧಾರ ರಹಿತ ಆರೋಪ, ಕುಮಾರಸ್ವಾಮಿ ಒಬ್ಬ ಹುಚ್ಚ

ಡಿಸಿಎಂ ಡಿ.ಕೆ. ಶಿವಕುಮಾರ್ ಕಿಡಿ



ಬೆಂಗಳೂರು, ಜು.5– ಮುಖ್ಯಮಂತ್ರಿ ಕುರ್ಚಿ ಮೇಲೆ ಕಣ್ಣಿಟ್ಟವರಿಂದ ಮುಡಾ ಹಗರಣ ಬಯಲಾಗಿದೆ ಎಂಬ ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಖಾರವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಪತ್ನಿ ಹೆಸರಿಗೆ ನಿವೇಶನ ಹಂಚಿಕೆಯಾಗಿರುವ ಮೈಸೂರಿನ ಮುಡಾ ಹಗರಣದಲ್ಲಿ ನನ್ನ ಪಾತ್ರ ಇಲ್ಲ. ಈ ವಿಚಾರದಲ್ಲಿ ಕುಮಾರಸ್ವಾಮಿ ಮಾಡುತ್ತಿರುವುದು ಆಧಾರರಹಿತ ಆರೋಪ. ಹುಚ್ಚು ಹಿಡಿದಿರುವ ಕಾರಣ ಅವರು ಈ ರೀತಿ ಸುಳ್ಳು ಆರೋಪ ಮಾಡುತ್ತಿದ್ದಾರೆ. ಅವರು ಆಸ್ಪತ್ರೆಗೆ ಸೇರಿ ಚಿಕಿತ್ಸೆ ಪಡೆಯುವುದು ಉತ್ತಮ ಎಂದರು.

ಒಂದನೇ ಪುಟದಿಂದ

ದುರುಪಯೋಗವಾದರೆ ಕ್ರಮ

ಎಂದು ಪ್ರಶ್ನಿಸಿದರು. ಈ ವರ್ಷದ ಕ್ರಿಯಾ ಯೋಜನೆಯಲ್ಲಿ ಮುಖ್ಯವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ 8,480 ಕೋಟಿ ರೂ., ಇಂಧನ ಇಲಾಖೆಗೆ 5,026 ಕೋಟಿ ರೂ., ಸಮಾಜ ಕಲ್ಯಾಣ ಇಲಾಖೆಗೆ 4,174 ಕೋಟಿ ರೂ., ಕಂದಾಯ ಇಲಾಖೆಗೆ 3,403 ಕೋಟಿ ರೂ., ಗ್ರಾಮೀಣಾಭಿವೃದ್ಧಿ ಇಲಾಖೆಗೆ 3,163 ಕೋಟಿ ರೂ. ಒದಗಿಸಲಾಗಿದೆ.

ಅನುದಾನ ಯಾವ ಕಾರಣಕ್ಕೂ ಬಳಕೆಯಾಗದೆ ಉಳಿಕೆ ಆಗಬಾರದು ಎಂದು ಕಟ್ಟುನಿಟ್ಟಿನ ಆದೇಶ ನೀಡಿದರು.

ಐಎಎಸ್, ಐಆರ್‌ಎಸ್ ಸೇರಿದಂತೆ ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ದೆಹಲಿಯಲ್ಲಿ ಪರಿಶಿಷ್ಟ ಸಮುದಾಯದ ಮಕ್ಕಳಿಗೆ ಉತ್ತಮ ಹಾಸ್ಟೆಲ್, ಹೈಟೆಕ್ ಲೈಬ್ರರಿ ನಿರ್ಮಿಸುವ ಜೊತೆಗೆ ಮಾಸಿಕ 15 ಸಾವಿರ ರೂ. ಶಿಷ್ಯವೇತನ (ಪ್ರಸ್ತುತ ನೀಡಲಾಗುತ್ತಿರುವ 10 ಸಾವಿರ ರೂ.ಗಳನ್ನು 15 ಸಾವಿರ ರೂ.ಗೆ ಹೆಚ್ಚಿಸಿ ತಕ್ಷಣ ಆದೇಶ ಹೊರಡಿಸಲಾಗುವುದು) ಕೊಡಲಾಗುವುದು ಎಂದು ಮುಖ್ಯಮಂತ್ರಿ ಘೋಷಿಸಿದರು.

ಕಳೆದ ವರ್ಷಕ್ಕಿಂತ ಈ ವರ್ಷ 3,900 ಕೋಟಿ ರೂ. ಹೆಚ್ಚುವರಿಯಾಗಿ ನೀಡಿದ್ದೇವೆ. ಈ ಹಣ ವಿವಿಧ ಇಲಾಖೆಗಳಿಗೆ ಹಂಚಿಕೆಯಾಗಿದ್ದು ಇದರ ಸದುಪಯೋಗ ಆಗಬೇಕು, ಸಮಾಜ ಕಲ್ಯಾಣ ಇಲಾಖೆ, ನಿಗಮಗಳು ಕಾಯ್ದೆಯ ಉದ್ದೇಶಕ್ಕೆ ಪೂರಕವಾಗಿ ಕೆಲಸ ಮಾಡಬೇಕು, ಶೇ.100 ಸಾಧನೆ ಆಗಬೇಕು. ಕಾಯ್ದೆಯಲ್ಲಿದ್ದ 7ಸಿ ಸಹ ರದ್ದು ಮಾಡಬೇಕು ಎಂಬ ಸಲಹೆಯನ್ನು ಶಾಸಕ ನರೇಂದ್ರ ಸ್ವಾಮಿ ನೀಡಿದ್ದು, ಇದರ ಸಾಧಕ–ಬಾಧಕ ಪರಿಶೀಲಿಸಲಾಗುವುದು.

ಖಾಲಿ ಇರುವ ಹೋಬಳಿಗಳಲ್ಲೂ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಆರಂಭಿಸಲೇಬೇಕು, ಆಯಾ ಹೋಬಳಿ ವಿದ್ಯಾರ್ಥಿಗಳಿಗೆ ಶೇ.75ರಷ್ಟು ಸೀಟು, ಉಳಿದ ಶೇ.25ರಷ್ಟು ಸೀಟುಗಳನ್ನು ಇತರೆ ಪ್ರದೇಶದ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳಲ್ಲಿ ನೀಡಬೇಕು.

ಹಾಸ್ಟೆಲ್‌ಗಳಿಗೆ ಆಗಾಗ್ಗೆ ಭೇಟಿ ನೀಡಿ ಪರಿಶೀಲನೆ ಮಾಡದ ಅಧಿಕಾರಿಗಳನ್ನು ಅಮಾನತು ಮಾಡಲಾಗುವುದು.

ಬಜೆಟ್‌ನಲ್ಲಿ ಘೋಷಿಸಿರುವ ಎಲ್ಲಾ ಕಾರ್ಯಕ್ರಮಗಳನ್ನು ಜಾರಿ ಮಾಡಲೇಬೇಕು, ಆಶ್ರಮ ಶಾಲೆಗಳಲ್ಲಿ ರಾತ್ರಿ ವೇಳೆ ಮಕ್ಕಳನ್ನು ಮನೆಗೆ ಕರೆದುಕೊಂಡು ಹೋಗುವುದಕ್ಕೆ ಅವಕಾಶ ಆಗಬಾರದು, ಮನೆಗೆ ಕರೆದೊಯ್ಯದಂತೆ ಪೋಷಕರನ್ನು ಒಪ್ಪಿಸಬೇಕು. ಹಳ್ಳಿಗಾಡು, ಬಡ ಕುಟುಂಬಗಳಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಸರಿಯಾಗಿ ತಲುಪಿಸುವಲ್ಲಿ ವಿಫಲರಾಗುವವರ ಹಾಗೂ ಲೋಪ ಎಸಗಿದವರ ವಿರುದ್ಧ ಮೂರು ತಿಂಗಳ ನಂತರ ಮತ್ತೊಮ್ಮೆ ಪರಿಷತ್ ಸಭೆ ಸೇರಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಕೋರ್ಟ್‌ನಲ್ಲಿ ಪಿಐಎಲ್ ದಾಖಲು

ಸೂರಿಲ್ಲದ ಬಡ ಜನರ ಬವಣೆ ಇವರಿಗೆ ತಿಳಿದಿದೆಯೇ ಎಂದು ಪ್ರಶ್ನಿಸಿದರು.

ವಕೀಲರಾದ ನಿಮಗೆ ಕಾನೂನಿನರಿವಿಲ್ಲವೆ?: ಕೆಸರೆಯ ಸರ್ವೆ ನಂಬರ್ 464ರ 3.16 ಎಕರೆ ಭೂಮಿಯನ್ನು ಸಿದ್ದರಾಮಯ್ಯ ಪತ್ನಿ ಪಾರ್ವತಿಯವರ ಅಣ್ಣ ಮಲ್ಲಿಕಾರ್ಜುನ ಸ್ವಾಮಿ ದಲಿತ ಸಮುದಾಯದ ಜವರ ಎಂಬಾತನಿಂದ ಖರೀದಿಸಿದ್ದಾರೆ. ಆದರೆ ಈ ಮೊದಲು ಈ ಭೂಮಿ ಡಿ ನೋಟಿಫೈ ಆಗಿತ್ತು. ಇದನ್ನು ಖರೀದಿ ಮಾಡಬಾರದು ಎಂಬ ಕನಿಷ್ಟ ಕಾನೂನಿನ ಜ್ಞಾನ ವಕೀಲರಾದ ನಿಮಗೆ ಇರಲಿಲ್ಲವೆ? ಎಂದು ಸಿದ್ದ ರಾಮಯ್ಯಗೆ ಪ್ರಶ್ನಿಸಿದರು.

ಮಲ್ಲಿಕಾರ್ಜುನ ಸ್ವಾಮಿಯಿಂದ ಅರಿಶಿಣ ಕುಂಕುಮಕ್ಕೆ ಎಂದು ಆ ಭೂಮಿಯನ್ನು ದಾನವಾಗಿ ಪತ್ನಿಗೆ ಪಡೆದಿದ್ದೀರಾ. ದಲಿತ ಸಮುದಾಯದ ವ್ಯಕ್ತಿಗೆ ಡಿ ನೋಟಿಫೈ ಆಗಿರುವ ಆಸ್ತಿಯನ್ನು ಹೀಗೆ ಪಡೆದಿರುವುದು ಸರಿಯೆ? ಎಂದು ಪ್ರಶ್ನಿಸಿದ ವಿಶ್ವನಾಥ್, ಇದೆಲ್ಲಾ ಜನರಿಗೆ ಅರ್ಥ ಆಗಲ್ಲ ಎಂದು ನೀವು ತಿಳಿದಿದ್ದರೆ ಅದು ನಿಮ್ಮ ದಡ್ಡತನ. ಜನರು ಬಹಳ ಬುದ್ಧಿವಂತರಿದ್ದು, ಈ ತಂತ್ರಗಾರಿಕೆಯನ್ನೆಲ್ಲಾ ಚೆನ್ನಾಗಿ ಅರಿತಿದ್ದಾರೆ ಎಂದರು.

ಕೆಸರೆಯ 3.16 ಎಕರೆಯ ಆ ಜಾಗದ ಮೌಲ್ಯ ಆ ದಿನಕ್ಕೆ 3.24 ಲಕ್ಷ ರೂ. ಇವತ್ತಿನ ದಿನಕ್ಕೆ ಅದರ ಮೌಲ್ಯ ಮೂರೂವರೆ ಕೋಟಿ ರೂ. ಆದರೆ ವಿಜಯನಗರದಲ್ಲಿ ಬದಲಿ ನಿವೇಶನ ಪಡೆದು ಈಗ 62 ಕೋಟಿ ರೂಪಾಯಿ ಕೇಳುತ್ತಿದ್ದೀರಲ್ಲ ಇದು ಯಾವ ನ್ಯಾಯ ಎಂದು ಪ್ರಶ್ನಿಸಿದರು. ಒಂದು ಎಕರೆಯಲ್ಲಿ ರಸ್ತೆ, ಪಾರ್ಕ್ ಬಿಟ್ಟು ಶೇಕಡ 40 ರಷ್ಟು ನಿವೇಶನ ಸಿಗುತ್ತದೆ. ಆದರೆ ಸಿದ್ದ ರಾಮಯ್ಯ ಶೇಕಡ ನೂರಕ್ಕೆ ನೂರರಷ್ಟು ನಿವೇಶನ ಕೇಳುತ್ತಿದ್ದಾರೆ. ನಿಮಗೆ ಮಂಜೂರಾಗಿರುವ ನಿವೇಶನವನ್ನು ಸರ್ಕಾರಕ್ಕೆ ಒಪ್ಪಿಸಿ, ಕೆಸರೆಯಲ್ಲಿರುವ 3.16 ಎಕರೆ ಭೂಮಿಯನ್ನು ಅಲ್ಲಿರುವ ಅಹಿಂದ ಸಮುದಾಯದ ಉಪಯೋಗಕ್ಕೆ ನೀಡಿ. ಈ ಮೂಲಕ ನಾನು ಅಹಿಂದ ನಾಯಕ ಎಂದು ಹೇಳಿಕೊಳ್ಳುವ ನಿಮ್ಮ ಹೆಸರು ಚಿರಸ್ಥಾಯಿಯಾಗಿ ಉಳಿಯುತ್ತದೆ. ಇಲ್ಲವೆಂದರೆ ನಿಮ್ಮ ಭ್ರಷ್ಟತೆಯ ಹೆಸರು ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿಯಲಿದೆ ಎಂದು ವಿಶ್ವನಾಥ್ ಹೇಳಿದರು.

ಮುಖ್ಯಮಂತ್ರಿಯಾಗಿ ಆಡಳಿತ ವೈಫಲ್ಯ ಕಂಡಿರುವ ನಿಮ್ಮ ಜನಪ್ರಿಯತೆ ದಿನೇ ದಿನೇ ಕೆಳಗೆ ಇಳಿಯುತ್ತಿದೆ. ಬೀದಿ ಬೀದಿಯಲ್ಲಿ ಜನರು ನಿಮ್ಮ ಬಗ್ಗೆ ಮರ್ಯಾದೆ ಇಲ್ಲದೆ ಮಾತನಾಡುವ ಪರಿಸ್ಥಿತಿ ತಂದು ಕೊಂಡಿದ್ದೀರಾ ಎಂದು ಸಿದ್ದರಾಮಯ್ಯಗೆ ವಿಶ್ವನಾಥ್ ಹೇಳಿದರು.

ಮುಡಾ ನಿವೃತ್ತ ಅಧಿಕಾರಿ ನಟರಾಜ್, ಆರ್‌ಟಿಐ ಕಾರ್ಯಕರ್ತ ಗಂಗರಾಜು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

20 ಲಕ್ಷ ಚದರಡಿ ನಿವೇಶನ ಅಕ್ರಮ ಮಂಜೂರು

ಶೇಕಡ 50:50 ಅನುಪಾತದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 90 ವಿವಿಧ ಅಳತೆ ಆಸ್ತಿಗಳಿಗೆ ಪರ್ಯಾಯವಾಗಿ 20 ಲಕ್ಷ ಚದರ ಅಡಿಯ ಅಭಿವೃದ್ಧಿ ಹೊಂದಿದ ನಿವೇಶನಗಳನ್ನು ನೀಡಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆರೋಪಿಸಿದ್ದಾರೆ. ಹೀಗೆ ನಿವೇಶನ ಪಡೆದಿರುವವರೆಲ್ಲಾ ನಿಜವಾದ ಭೂ ಮಾಲೀಕರಲ್ಲ. ಬದಲಿಗೆ ದಲ್ಲಾಳಿಗಳು, ಜಿಪಿಎ ಹೋಲ್ಡರ್ಸ್, ಕಿಂಗ್ ಪಿನ್ ಗಳು, ಮಂತ್ರಿಗಳು ಹಾಗೂ ಶಾಸಕರ ಚೇಲಾಗಳಾಗಿದ್ದಾರೆ ಎಂದು ಆಪಾದಿಸಿದರು. ಈಗ ನಾನು ದಾಖಲಾತಿ ಸಮೇತ ನೀಡುತ್ತಿರುವ ಮಾಹಿತಿ ಸ್ಯಾಂಪಲ್ ಅಷ್ಟೆ. ಮುಡಾದಲ್ಲಿ ಇದಕ್ಕಿಂತ ಇನ್ನು ದೊಡ್ಡ ಭ್ರಷ್ಟಾಚಾರ ಹಗರಣಗಳಿವೆ. ಈ ತನಕ ದಾಖಲಾತಿ ಇದ್ದರೆ ಕೊಡಿ ಕೊಡಿ ಅಂತ ಕೇಳುತ್ತಿದ್ದರು. ಈಗ ತಗೊಳಿ ತಗೊಳಿ ಅಂತ ಕೊಡುತ್ತಿರುವೆ. ಈಗಲಾದರೂ ಸಿಬಿಐ ತನಿಖೆ ಮಾಡಿಸಿ ಎಂದು ವಿಶ್ವನಾಥ್ ಆಗ್ರಹಿಸಿದರು. ಈಗ ಮಾಡುತ್ತಿರುವ ತನಿಖೆಯಿಂದ ಯಾವುದೇ ರೀತಿಯಲ್ಲೂ ಸತ್ಯಾಂಶ ಹೊರಗೆ ಬರುವುದಿಲ್ಲ. ಇನ್ನು ಲೋಕಾಯುಕ್ತ ಮಲಗಿ ಬಿಟ್ಟಿದೆ. ಇದರಿಂದ ಹಗರಣ ಬಯಲಿಗೆ ಬಂದು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕಾದರೆ ಸಿಬಿಐಗೆ ವಹಿಸಬೇಕು ಎಂದು ಒತ್ತಾಯಿಸಿದರು.

62 ಕೋಟಿ ಸಿದ್ದರಾಮಯ್ಯಗೆ ಕಡ್ಲೆ ಬೀಜ

ಮುಖ್ಯಮಂತ್ರಿ ಸಿದ್ದರಾಮಯ್ಯ 62 ಕೋಟಿ ರೂಪಾಯಿ ಅಂದರೆ ಕಡ್ಲೆ ಬೀಜ ಇದ್ದಂತೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಗೇಲಿ ಮಾಡಿದ್ದಾರೆ. ಕೇವಲ ಮೂರ್ನಾಲ್ಕು ಕೋಟಿ ರೂಪಾಯಿ ಬೆಲೆ ಬಾಳುವ ಭೂಮಿಗೆ ಸಿದ್ದರಾಮಯ್ಯ 62 ಕೋಟಿ ರೂಪಾಯಿ ಪರಿಹಾರ ಕೇಳುತ್ತಿದ್ದಾರೆ. ಇವರಿಗೆ ಕೋಟಿ ಅಂದರೆ ಕಡ್ಲೆ ಬೀಜವಾಗಿಬಿಟ್ಟಿದೆ. ಅದಕ್ಕೆ ಇಷ್ಟು ಪರಿಹಾರ ಕೇಳುತ್ತಿದ್ದಾರೆ ಎಂದರು. ಒಬ್ಬ ಐಎಎಸ್ ಅಧಿಕಾರಿಯಾಗಿ ಜಿಲ್ಲಾಡಳಿತದ ಪ್ರಮುಖ ಸ್ಥಾನದಲ್ಲಿರುವ ಜಿಲ್ಲಾಧಿಕಾರಿ ಈ ಹಗರಣದ ಬಗ್ಗೆ ಈ ತನಕ 15 ಪತ್ರ ಬರೆದಿದ್ದರೂ ಸರ್ಕಾರ ಕಣ್ಮುಚ್ಚಿ ಕುಳಿತಿದೆ ಎಂದರೆ ಏನು ಅರ್ಥ ಎಂದು ಪ್ರಶ್ನಿಸಿದರು.

ಇನ್ನು ಮುಡಾ ಸದಸ್ಯರಾದ ವಿಧಾನಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರು ಕೈಗೆ ಕಾಸು ಕೊಡಿ, ತರುವಾಯ ನಾವು ಹೇಳಿದ್ದೇವೆ ಅಂತ ಏನಾದರೂ ಬರೆದುಕೊಳ್ಳಿ ಎಂಬ ಮನಸ್ಥಿತಿಗೆ ಬಂದಿದ್ದಾರೆ ಎಂದು ವಿಶ್ವನಾಥ್ ಟೀಕಿಸಿದರು. ರಿಯಲ್ ಎಸ್ಟೇಟ್ ಗಿರಾಕಿ ಭೈರತಿ ಸುರೇಶ್ ನಗರಾಭಿವೃದ್ಧಿ ಸಚಿವರಾಗಿದ್ದಾರೆ. ನಾನು ಏಳು ನಿವೇಶನ ಕೇಳಿದ್ದೇನೆ ಅಂತ ನನ್ನ ವಿರುದ್ಧ ಆರೋಪ ಮಾಡುತ್ತಾನೆ. ನಾನು ಅರ್ಜಿ ಹಾಕಿದ್ದರೆ ತಾನೆ ನಿವೇಶನ ಕೇಳುವುದು ಎಂದು ಪ್ರಶ್ನಿಸಿದ ವಿಶ್ವನಾಥ್, ನಾನು ಪ್ರಾಮಾಣಿಕ ಅಂತ ಎದೆ ತಟ್ಟಿ ಹೇಳುತ್ತೇನೆ. ಇವರು ಹೇಳುತ್ತಾರೆಯೇ ಎಂದು ಸವಾಲು ಹಾಕಿದರು.

ಎಸಿಪಿ, ಡಿಸಿಪಿ ವರ್ಗಾವಣೆಗೆ ಕೋಟಿ ಕೋಟಿ ಕೊಡಬೇಕು

ರಾಜ್ಯ ಸರ್ಕಾರ ಸಂಪೂರ್ಣ ಭ್ರಷ್ಟವಾಗಿದೆ. ಒಬ್ಬ ಎಸಿಪಿ, ಡಿಸಿಪಿ ವರ್ಗಾವಣೆಗೊಳ್ಳಬೇಕೆಂದರೆ ಕೋಟಿ ಕೋಟಿ ರೂಪಾಯಿ ಕೊಡಬೇಕಾಗಿದೆ ಎಂದು ವಿಶ್ವನಾಥ್ ಆರೋಪಿಸಿದರು. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಆಡಳಿತದಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಉಪ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲೇ ಸಿದ್ದರಾಮಯ್ಯ ಅವರೆ ಬೆಲೆ ಬಾಳುವ ಬದಲಿ ನಿವೇಶನ ಪಡೆದಿದ್ದಾರೆ. ಇದು ಅವರ ಭ್ರಷ್ಟತೆಗೆ ಹಿಡಿದ ಕೈಗನ್ನಡಿ ಎಂದು ಆಪಾದಿಸಿದರು.

ಇಷ್ಟೆಲ್ಲಾ ಆದರೂ ಶೇಕಡ 50:50 ಅನುಪಾತದ ನಿವೇಶನಗಳ ಅಕ್ರಮ ಮಂಜೂರಾತಿಯನ್ನು ಈ ತನಕ ರದ್ದು ಮಾಡಿಲ್ಲ. ಅಕ್ರಮ ನಿವೇಶನ ಅಮಾನತು ಮಾಡುವುದಾಗಿ ಭೈರತಿ ಸುರೇಶ್ ಏನೋ ಹೇಳಿ ಹೋದರು. ಆದರೆ ಅದು ಸರ್ಕಾರಿ ಆದೇಶ ಆಗಿದೆಯೇ ಎಂದು ವಿಶ್ವನಾಥ್ ಪ್ರಶ್ನಿಸಿದರು.

ಕೆ.ಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಕಟ್ಟಡ ನವೀಕರಣ ಕಾಮಗಾರಿ ಆಗಸ್ಟ್ ಅಂತ್ಯಕ್ಕೆ ಪೂರ್ಣ

ಮೈಸೂರು, ಜು.5(ಎಂಕೆ)– ಮೈಸೂರಿನ ದೊಡ್ಡಾಸ್ಪತ್ರೆ ಎಂದೇ ಕರೆಯಲ್ಪಡುವ ಕೆ.ಆರ್.ಆಸ್ಪತ್ರೆ, ಚೆಲುವಾಂಬ ಮಕ್ಕಳ ಆಸ್ಪತ್ರೆ ಹಾಗೂ ಪಿಕೆಟಿಬಿ ಆಸ್ಪತ್ರೆಗಳ ಪಾರಂಪರಿಕ ಕಟ್ಟಡಗಳ ನವೀಕರಣ ಕಾಮಗಾರಿ ಚುರುಕುಗೊಂಡಿದ್ದು, ಆಗಸ್ಟ್ ವೇಳೆ ಮುಕ್ತಾಯಗೊಂಡು ಪೂರ್ಣ ಪ್ರಮಾಣದ ಸೇವೆಗೆ ಲಭ್ಯವಾಗಲಿದೆ.



ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿಆರ್‌ಐ)ಯ ಶತಮಾನೋತ್ಸವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮಂಜೂರು ಮಾಡಿರುವ 84 ಕೋಟಿ ರೂ. ಅನುದಾನದಲ್ಲಿ ವೈದ್ಯಕೀಯ ಕಾಲೇಜು, ಕೆ.ಆರ್ ಆಸ್ಪತ್ರೆಯ ಆಡಳಿತ ಕಚೇರಿ, ಕಣ್ಣಿನ ವಿಭಾಗ, ಸರ್ಜಿಕಲ್ ವಾರ್ಡ್, ಚೆಲುವಾಂಬ ಮಕ್ಕಳ ಆಸ್ಪತ್ರೆ, ಪಿಕೆಟಿಬಿ ಆಸ್ಪತ್ರೆ, ಯುಜಿ ಬಾಯ್ಸ್ ಹಾಸ್ಟೆಲ್ ಸೇರಿದಂತೆ ಒಟ್ಟು 14 ಕಟ್ಟಡಗಳ ದುರಸ್ತಿ ಹಾಗೂ ನವೀಕರಣ ಕಾಮಗಾರಿ ಪ್ರಗತಿಯಲ್ಲಿದ್ದು, ಇನ್ನೆರಡು ತಿಂಗಳಲ್ಲಿ ಮುಕ್ತಾಯಗೊಳ್ಳಲಿದೆ.

ಕಟ್ಟಡಗಳ ಪಾರಂಪರಿಕತೆಗೆ ದಕ್ಕೆಯಾಗದಂತೆ ನವೀಕರಣ ನಡೆಯುತ್ತಿರುವ ಕಾಮಗಾರಿಯನ್ನು ಇನ್ನಷ್ಟು ಚುರುಕುಗೊಳಿಸಿ, ಆಗಸ್ಟ್ ತಿಂಗಳಾಂತ್ಯಕ್ಕೆ ಪೂರ್ಣಗೊಳಿಸಲಾಗುವುದು. ಅಲ್ಲದೆ ಹಂತ ಹಂತವಾಗಿ ಸೇವೆಯನ್ನು ಪುನರ್ ಆರಂಭಿಸಲಾಗುವುದು ಎಂದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಅಂಡ್ ಡೈರೆಕ್ಟರ್ ಡಾ.ಕೆ.ಆರ್.ದಾಕ್ಷಾಯಿಣಿ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಜುಲೈ ತಿಂಗಳಾಂತ್ಯಕ್ಕೆ ಶೇ.80 ರಷ್ಟು ಮುಕ್ತಾಯವಾಗಿರಬೇಕು. ಆಗಸ್ಟ್ ತಿಂಗಳ ಅಂತ್ಯಕ್ಕೆ ಪೂರ್ಣ ಪ್ರಮಾಣದಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದ್ದೇವೆ. ಹಾಗೆಯೇ ಪಾರಂಪರಿಕತೆ ವಿನ್ಯಾಸಕ್ಕೆ ಅನುಗುಣವಾಗಿ ನವೀಕರಣ ನಡೆಯುತ್ತಿದ್ದು, ಆಗಾಗ ಕಾಮಗಾರಿ ಪರಿಶೀಲನೆ ನಡೆಸಲಾಗುತ್ತಿದೆ. ಕಣ್ಣಿನ ವಿಭಾಗವನ್ನು ಮೊದಲು ಪುನರ್ ಆರಂಭಿಸಲು ಚಿಂತನೆ ನಡೆಸಲಾಗಿದೆ ಎಂದು ತಿಳಿಸಿದರು.

ಆಷಾಡ ಶುಕ್ರವಾರ ಸಿಟಿ ಸ್ಕ್ಯಾನ್ ಘಟಕ ಉದ್ಘಾಟನೆ: ಟ್ರಾಮಾ ಕೇರ್ ಸೆಂಟರ್‌ನಲ್ಲಿ ಸಿಟಿ ಸ್ಕ್ಯಾನ್ ಸೌಲಭ್ಯಕ್ಕೆ ಸದ್ಯದಲ್ಲಿಯೇ ಚಾಲನೆ ದೊರೆಯಲಿದೆ. ಈಗಾಗಲೇ ಸಿಟಿ ಸ್ಕ್ಯಾನ್ ಯಂತ್ರೋಪಕರಣ ಅಳವಡಿಸುವ ಕಾರ್ಯ ನಡೆಯುತ್ತಿದ್ದು, 3ನೇ ಆಷಾಡ ಶುಕ್ರವಾರ ಸಿಟಿ ಸ್ಕ್ಯಾನ್ ಘಟಕವನ್ನು ಉದ್ಘಾಟಿಸಲಾಗುವುದು. ಅಲ್ಲದೆ ಎಲ್ಲಾ ರೀತಿಯ ರಕ್ತ ಪರೀಕ್ಷೆಯ ಸೌಲಭ್ಯವನ್ನು ನೀಡಲಾಗುತ್ತಿದೆ ಎಂದು ಹೇಳಿದರು.

ಹೊಸ ಆಸ್ಪತ್ರೆಗಳತ್ತ ರೋಗಿಗಳು: ಶತಮಾನದ ಸೇವೆ ನೀಡಿರುವ ಆಸ್ಪತ್ರೆಗಳ ನವೀಕರಣ ಕಾಮಗಾರಿಯಿಂದಾಗಿ ರೋಗಿಗಳು ಜಿಲ್ಲಾಸ್ಪತ್ರೆಯತ್ತ ಮುಖ ಮಾಡಿದ್ದಾರೆ. ಅಲ್ಲದೆ ಟ್ರಾಮಾ ಕೇರ್ ಸೆಂಟರ್, ಸೂಪರ್ ಸ್ಪೆಷಾಲಿಟಿ, ಸೇಠ್ ಮೋಹನ್‌ದಾಸ್ ತುಳಸಿದಾಸ್(ಎಸ್‌ಎಂಟಿ) ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ದಿನದಿಂದ ದಿನಕ್ಕೆ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಕೆ.ಆರ್ ಆಸ್ಪತ್ರೆಯ ನವೀಕರಣಕ್ಕೂ ಅನುಕೂಲವಾಗುತ್ತಿದೆ.

ಚಿಕಿತ್ಸಾ ಶುಲ್ಕದಲ್ಲಿ ಬದಲಾವಣೆ...!

ಕೆಆರ್‌ಎಸ್ ರಸ್ತೆಯಲ್ಲಿರುವ ನೂತನ ಸೂಪರ್ ಸ್ಪೆಷಾಲಿಟಿ ಹಾಗೂ ಟ್ರಾಮಾ ಕೇರ್ ಸೆಂಟರ್‌ನಲ್ಲಿ ಚಿಕಿತ್ಸಾ ಸೇವಾ ಶುಲ್ಕ(ಬಿಲ್)ದಲ್ಲಿ ಬದಲಾವಣೆಯಾಗಿದ್ದು, ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಸ್ಕೀಂ(ಎಬಿಆರ್‌ಕೆ) ಅಳವಡಿಸಿಕೊಳ್ಳಲಾಗಿದೆ. ಎರಡೂ ಆಸ್ಪತ್ರೆಗಳಲ್ಲಿ ಗುಣಮಟ್ಟದ ಚಿಕಿತ್ಸಾ ಸೌಲಭ್ಯ ನೀಡಲಾಗುತ್ತಿದೆ. ಬಿಪಿಎಲ್ ಕಾರ್ಡುದಾರರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಂಪೂರ್ಣ ಉಚಿತ ಇರಲಿದ್ದು, 60 ವರ್ಷ ಮೇಲ್ಪಟ್ಟ ಹಾಗೂ ಎಪಿಎಲ್ ಕಾರ್ಡುದಾರರಿಗೆ ಶೇ.30 ರಿಯಾಯ್ತಿ ನೀಡಲಾಗುವುದು.

– ಡಾ.ಕೆ.ಆರ್.ದಾಕ್ಷಾಯಿಣಿ, ಡೀನ್ ಅಂಡ್ ಡೈರೆಕ್ಟರ್, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ

ಮಹದೇಶ್ವರ ಬಡಾವಣೆಯಲ್ಲಿ ಕೆಂಪೇಗೌಡರ ಜಯಂತಿ ಆಚರಣೆ



ಮೈಸೂರಿನ ಮಹದೇಶ್ವರ ಬಡಾವಣೆ ಅಭ್ಯುದಯ ಸಂಘದ ವತಿಯಿಂದ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಿಸಲಾಯಿತು.

ಮೈಸೂರು, ಜು.5(ಎಸ್‌ಬಿಡಿ)– ಮೈಸೂರಿನ ಮಹದೇಶ್ವರ ಬಡಾವಣೆ ಅಭ್ಯುದಯ ಸಂಘದ ವತಿಯಿಂದ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಿಸಲಾಯಿತು.

ಬಡಾವಣೆಯ ಚಾಮುಂಡೇಶ್ವರಿ ದೇವಸ್ಥಾನ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಮಾತನಾಡಿ, ನಾಡ ಪ್ರಭು ಕೆಂಪೇಗೌಡರ ಮಹಾನಗರ ಪರಿಕಲ್ಪನೆ ನಿಜಕ್ಕೂ ಅದ್ಭುತ. ದೂರಾಲೋಚನೆಯೊಂದಿಗೆ ಅಭಿವೃದ್ಧಿಗೆ ಪೂರಕವಾದ ನಕ್ಷೆ ಸಿದ್ಧಪಡಿಸಿ, ಸುಂದರ ನಗರವನ್ನು ಕಟ್ಟಿದರು ಎಂದು ಬಣ್ಣಿಸಿದರು.

ಎಲ್ಲಾ ಜಾತಿ–ಜನಾಂಗದವರ ಕುಲ ಕಸುಬು ಉಳಿಯಬೇಕು. ಆ ಮೂಲಕ ಆರ್ಥಿಕವಾಗಿ ಸದೃಢರಾಗಬೇಕು ಎಂಬ ಸದುದ್ದೇಶದಿಂದ ವೃತ್ತಿಪರರಿಗೆ ಪ್ರತ್ಯೇಕ ಪೇಟೆಗಳನ್ನು ನಿರ್ಮಾಣ ಮಾಡಿದರು. ಕೆರೆ–ಕಟ್ಟೆಗಳನ್ನು ಕಟ್ಟಿ, ಗಿಡಗಳನ್ನು ನೆಟ್ಟು ಪೋಷಿಸಿದರು. ನಿರ್ಮಾಣಗಳೊಂದಿಗೆ ಸುಂದರ ಪರಿಸರವಿರಬೇಕು ಎಂಬ ಆಶಯದೊಂದಿಗೆ ಎಲ್ಲಾ ವ್ಯವಸ್ಥೆಗಳನ್ನೂ ಕಲ್ಪಿಸಿ, ಒಂದು ಸುಂದರ ಸಾಮ್ರಾಜ್ಯ ವನ್ನು ನಿರ್ಮಾಣ ಮಾಡುವಲ್ಲಿ ನಾಡ ಪ್ರಭು ಕೆಂಪೇಗೌಡರು ಯಶಸ್ವಿಯಾದರು. ಕೆಂಪೇಗೌಡರ ಪರಿಕಲ್ಪನೆ, ಪರಿಶ್ರಮ, ದೂರದೃಷ್ಟಿತ್ವದ ಫಲವಾಗಿ ಪ್ರಸ್ತುತ ರಾಜ್ಯದ ಶೇ.60ರಷ್ಟು ತೆರಿಗೆ ಬೆಂಗಳೂರಿನಲ್ಲಿ ಸಂಗ್ರಹವಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಶಿವಮಾದು, ದಳಪತಿ ರಮೇಶ್, ರಾಮಪ್ರಸಾದ್, ಬಿಜೆಪಿ ಚಾಮರಾಜ ಕ್ಷೇತ್ರ ಮುಖಂಡ ಚೌಡಪ್ಪ, ಮೈಸೂರು ರಕ್ಷಣಾ ವೇದಿಕೆ ಉಪಾಧ್ಯಕ್ಷ ಕುಮಾರಗೌಡ, ಯಡಿಯೂರಪ್ಪ ಅಭಿಮಾನಿ ಬಳಗದ ಅಧ್ಯಕ್ಷ ಯೋಗಿ, ನರಸಿಂಹ, ಮಹದೇಶ್ವರ ಬಡಾವಣೆ ಅಭ್ಯುದಯ ಸಂಘದ ಅಧ್ಯಕ್ಷ ಮಹದೇವು, ಹರೀಶ್, ಕಾಂಗ್ರೆಸ್ ಮುಖಂಡ ರಮೇಶ್, ಕೇಬಲ್ ಮಹೇಶ್ ಮತ್ತಿತರರು ಭಾಗವಹಿಸಿದ್ದರು.

ಇಂದು ವಕೀಲರ ಸಂಘದಿಂದ ಕೆಂಪೇಗೌಡ ಜಯಂತಿ

ಮೈಸೂರು, ಜು.5– ಮೈಸೂರು ವಕೀಲರ ಸಂಘದ ವತಿಯಿಂದ ನಾಡಪ್ರಭು ಶ್ರೀ ಕೆಂಪೇಗೌಡರ 515ನೇ ಜಯಂತ್ಯೋತ್ಸವವನ್ನು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಶನಿವಾರ(ಜು.6) ಸಂಜೆ 6 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸಾನಿಧ್ಯದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರವೀಂದ್ರ ಹೆಗಡೆ, ಕರ್ನಾಟಕ ರಾಜ್ಯ ವಕೀಲರ ಪರಿಷತ್ ಸದಸ್ಯ ಬಿ.ಆರ್.ಚಂದ್ರ ಮೌಳಿ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಸಂಘದ ಪದಾಧಿಕಾರಿಗಳು, ಸಮಿತಿ ಸದಸ್ಯರು ಉಪಸ್ಥಿತರಿರಲಿದ್ದಾರೆ.

ಪ್ರಕಟಣೆ

ಕುಂಚಿಟಿಗರ ಸಂಘ(ರಿ.) ಮೈಸೂರು

ಕುಂಚಿಟಿಗರ ಸಂಘ(ರಿ.) ಮೈಸೂರು, ದಿವಾನ್ಸ್ ರಸ್ತೆ ದೇವರಾಜ ಮೊಹಲ್ಲಾ, ಮೈಸೂರು, ಇವರು ಕುಂಚಿಟಿಗ ಜನಾಂಗದ ಸ್ಥಳೀಯ (ಮೈಸೂರು) ವಿದ್ಯಾರ್ಥಿಗಳಿಗೆ 2023-24ನೇ ಸಾಲಿನ ವಿದ್ಯಾರ್ಥಿವೇತನಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 01ನೇ ತರಗತಿಯಿಂದ ಸ್ನಾತಕೋತ್ತರ ಪದವಿವರೆಗೂ ವಿದ್ಯಾರ್ಥಿವೇತನ ನೀಡಲಾಗುವುದು. ಆಸಕ್ತ ಕುಂಚಿಟಿಗ ಕುಲಬಾಂಧವ ವಿದ್ಯಾರ್ಥಿಗಳು, ಅರ್ಜಿ ಪಡೆದು ಸಲ್ಲಿಸುವ ದಿನಾಂಕ: 06.07.2024 ರಿಂದ 05.08.2024 ರವರೆಗೆ ಅರ್ಜಿಗಳನ್ನು ಸಂಘದ ಕಛೇರಿಯಲ್ಲಿ ಬಂದು ಸ್ವೀಕರಿಸಬೇಕಾಗಿ ಕೇಳಿಕೊಳ್ಳುತ್ತೇವೆ, ಈ ಸದುಪಯೋಗವನ್ನು ಜನಾಂಗದ ವಿದ್ಯಾರ್ಥಿಗಳು ಉಪಯೋಗಿಸಿಕೊಳ್ಳಬೇಕೆಂದು ಮನವಿ ಮಾಡುತ್ತೇವೆ.

ಸಂಪರ್ಕಿಸಿ: ಕಛೇರಿ ಸಮಯ : 11.00am ರಿಂದ 05.00pm
9035389047 | 0821-2422973
ಇ-ಮೇಲ್ : kunchitigarasangha@gmail.com


ಸಹಿ/- ಗೌ॥ ಕಾರ್ಯದರ್ಶಿ, ಕುಂಚಿಟಿಗರ ಸಂಘ (ರಿ.) ಮೈಸೂರು

ಟೀ ಅಂಗಡಿಯಲ್ಲಿ 1.45 ಲಕ್ಷ ಕಳವು

ಮೈಸೂರು, ಜು.5(ಎಸ್‌ಬಿಡಿ)– ಟೀ ಅಂಗಡಿ ಮೇಲ್ಛಾವಣಿ ಒಡೆದು 1.45 ಲಕ್ಷ ರೂ. ದೋಚಿರುವ ಬಗ್ಗೆ ಮೈಸೂರಿನ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರು–ಕೆಆರ್‌ಎಸ್ ಮುಖ್ಯರಸ್ತೆ, ಜೆ.ಕೆ.ಟೈರ್ಸ್ ಫ್ಯಾಕ್ಟರಿ ಬಳಿಯ ಶ್ರೀ ಮಲೇಮಹದೇಶ್ವರ ಟೀ ಅಂಡ್ ಕೂಲ್ ಸ್ಟಾಲ್‌ನಲ್ಲಿ ಬುಧವಾರ ತಡರಾತ್ರಿ ಈ ಘಟನೆ ನಡೆದಿದೆ.

ಶ್ರೀರಂಗಪಟ್ಟಣ ತಾಲೂಕು, ಪಾಲಹಳ್ಳಿ ನಿವಾಸಿ ರಾಜೇಗೌಡ ಈ ಟೀ ಅಂಗಡಿ ಮಾಲೀಕರಾಗಿದ್ದು, ಅವರ ಪತ್ನಿ ಹಾಗೂ ಪುತ್ರ ವ್ಯಾಪಾರದಲ್ಲಿ ಸಹಾಯ ಮಾಡುತ್ತಾರೆ. ರಾಜೇಗೌಡರ ಪುತ್ರ ಜು.3ರಂದು ರಾತ್ರಿ 11.30ಕ್ಕೆ ವ್ಯಾಪಾರ ಮುಗಿಸಿ ಅಂಗಡಿಗೆ ಬೀಗ ಹಾಕಿಕೊಂಡು ಮನೆಗೆ ಹೋಗಿದ್ದಾರೆ. ಆ ವೇಳೆ ಕೆಲ ದಿನಗಳ ಹಿಂದೆ ಬ್ಯಾಂಕ್‌ನಿಂದ ವಿತ್‌ಡ್ರಾ ಮಾಡಿಕೊಂಡು ತಂದಿದ್ದ ಲಕ್ಷ ರೂ. ಹಾಗೂ ವ್ಯಾಪಾರಕ್ಕೆ ಸಂಬಂಧಿಸಿದ 45 ಸಾವಿರ ರೂ. ಸೇರಿ ಒಟ್ಟು 1.45 ಸಾವಿರ ರೂ. ಹಣವನ್ನು ಅಂಗಡಿಯಲ್ಲೇ ಇಟ್ಟಿದ್ದರು. ಮರುದಿನ ಬೆಳಗ್ಗೆ 7ಕ್ಕೆ ಟೀ ಅಂಗಡಿ ಬಾಗಿಲು ತೆಗೆದಾಗ ಛಾವಣಿಯ ಶೀಟ್ ಒಡೆದು ಒಳನುಗ್ಗಿ ಹಣ ದೋಚಿರುವುದು ತಿಳಿದಿದೆ.ಮೇಟಗಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕಳ್ಳರ ಪತ್ತೆಗೆ ಶೋಧ ನಡೆಸಿದ್ದಾರೆ.

ಪೋಕ್ಸೋ ಪ್ರಕರಣ: ಜುಲೈ 15ಕ್ಕೆ ವಿಚಾರಣೆಗೆ ಹಾಜರಾಗುವಂತೆ ಯಡಿಯೂರಪ್ಪಗೆ ಸಮನ್ಸ್ ಜಾರಿ



ಬೆಂಗಳೂರು, ಜು.5– ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದ ಪೋಕ್ಸೊ ಪ್ರಕರಣದ ಆರೋಪ ಎದುರಿಸುತ್ತಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಿಎಸ್ ಯಡಿಯೂರಪ್ಪ ಮತ್ತು ಇತರ ಮೂವರು ಆರೋಪಿಗಳಿಗೆ ನಗರದ ವಿಶೇಷ ನ್ಯಾಯಾಲಯ ಸಮನ್ಸ್ ಜಾರಿಗೊಳಿಸಿದೆ. ಈ ಕುರಿತ ಅರ್ಜಿಯನ್ನು ನಗರದ 51ನೇ ಸಿವಿಲ್ ಮತ್ತು ಹೆಚ್ಚುವರಿ ಸೆಷನ್ಸ್ ಹಾಗೂ ಪೋಕ್ಸೊ ಪ್ರಕರಣಗಳ ವಿಚಾರಣೆ ನಡೆಸುವ ತ್ವರಿತಗತಿಯ ವಿಶೇಷ ನ್ಯಾಯಾಲಯ–1ರ ನ್ಯಾಯಾಧೀಶ ಎನ್.ಎಂ.ರಮೇಶ್ ಗುರುವಾರ ವಿಚಾರಣೆ ನಡೆಸಿ ಸಮನ್ಸ್ ಜಾರಿಗೊಳಿಸಲು ಆದೇಶಿಸಿದರು.

The Heritage Club(R)

#816/274, 'C' Block, 3rd stage, Vijayanagar, Mysuru-570030 ✆: 0821-2412377, 95912 28966
Email: heritageclubmys@gmail.com, www.heritageclubmys.in

L.No.08/98/99/21-04-98

TENDER NOTIFICATION

Sealed tenders are invited by the Secretary, The Heritage Club (R), Mysore for **Mild Steel Fabrication works of the Sports Complex Second Floor** at The Heritage Club (R), Mysore

Tender forms can be obtained from the office of the Secretary, The Heritage Club (R), Mysore on payment of Rs 5,000/- (Cost of tender is non refundable) through Demand Draft/Pay order in favour of The Secretary, The Heritage Club (R), Mysore.

Tender forms are issued in the office of the Secretary, The Heritage Club (R), Mysore from **08-07-2024** during office hours from 10.30 am to 5.30 pm.

Completed tenders shall be submitted to the office the Secretary, The Heritage Club (R), Mysore, on or before **15-07-2024** within 5.30 pm. The tenders shall be opened at 5.30 pm on **18-07-2024** thereafter in the office of the Secretary, The Heritage Club (R), Mysore.

Tenders will be issued to the eligible contractors registered and they have to furnish the definite proof from the appropriate authority of having satisfactory completed three similar works during last five years.

Issued by : The Secretary The Heritage Club (R), Mysore.
Dated : **06-07-2024**

PUBLIC NOTICE

This is to inform the general public that my client **M/s. VENTURA SHELTERS DEVELOPERS AND PROMOTERS,** intends to purchase the immovable property described in the schedule hereunder from its owner, **M/s. SIDDALINGESHWARA GRUHA NIRMANA SAHAKARA SANGHA (NIYAMITHA).** Any person/s having any claim, title and interest over the schedule property or any objections to the proposed purchase, may file their objections in writing along with copies of supporting documents to the undersigned within 15 days from the date of this publication and a copy of objections to our below mentioned office, failing which my clients will be advised to go ahead and complete the formalities for registered Sale Deed.

SCHEDULE

All that piece and parcel of the residential converted land bearing **Sy.No.306, situated at Hanchya Village, Kasaba Hobli, Mysore Taluk, Mysore District,** measuring 6 Acres 26 guntas, Kharab land of 0-02 guntas, and bounded on the:-
East by: Land bearing Sy. Nos.307, 311
West by: Land bearing Sy.No.296, 265
North by: Land bearing Sy.No.305, 315
South by: Road, Land bearing Sy.No.308.

Sd/- Sahai Kumar, Advocate
311, 2nd Floor, 3rd Main, 3rd Phase, J.P.Nagar, Bangalore-560078, Mob : 98450 90974

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ 18.08.2003 ರಲ್ಲಿ ಮೈಸೂರು ಉತ್ತರ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ 1 ನೇ ಪುಸ್ತಕದ 5956ನೇ ಸಂಪುಟದ 119-122 ನೇ ಪುಟಗಳಲ್ಲಿ 2680 ನೇ ನಂಬರ್ ಆಗಿ ನೋಂದಣಿಯಾದ ಕ್ರಯ ಪತ್ರದ ಅಸಲಿ ಪ್ರತಿ ಕಳೆದುಕೊಂಡಿರುತ್ತಾರೆ. ಸದರಿ ಪತ್ರವು ಯಾರಿಗಾದರೂ ಸಿಕ್ಕಿದಲ್ಲಿ ಕೆಳಕಂಡ ವಕೀಲರಿಗೆ ಕೂಡಲೆ ತಲುಪಿಸತಕ್ಕದ್ದು.

ಹಾಗೆಯೇ ಯಾವುದೇ ವ್ಯಕ್ತಿ/ಸಂಸ್ಥೆಗೆ ಅನುಸೂಚಿ ಸ್ವತ್ತು/ಸದರಿ ಕ್ರಯ ಪತ್ರ ವಿಚಾರವಾಗಿ ಯಾವುದೇ ತರಹದ ಹಕ್ಕು, ತಕರಾರು ವಗೇರಿಗಳಿದ್ದಲ್ಲಿ ಈ ಪ್ರಕಟಣೆಯಾದ 7 ದಿನಗಳಲ್ಲಿ ಕೆಳಕಂಡ ವಕೀಲರ ಬಳಿ ಲಿಖಿತ ರೂಪದಲ್ಲಿ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವರುಣಾ ಗ್ರಾಮ ಪಂಚಾಯಿತಿಗೆ ಸೇರಿದ, ಚಿಕ್ಕಹಳ್ಳಿ ಗ್ರಾಮಕ್ಕೆ ಸೇರಿರುವ ಖಾತಾ ಜಂಜರ್ ನಂ.802 ಅಸೆಸ್ಮೆಂಟ್ ನಂ. 669, ನಿವೇಶನ ನಂ. 296 (ಎರಡುನೂರ ತೊಂಭತ್ತಾರನೇ ನಂಬರ್) ಈ ಮಧ್ಯೆಯಿರುವ ಪೂರ್ವಪಶ್ಚಿಮ 40 ಅಡಿಗಳು ಮತ್ತು ದಕ್ಷಿಣೋತ್ತರ 30 ಅಡಿಗಳು ಅಳತೆಯುಳ್ಳ ಪೂರ್ತಾ (ವಿಸ್ತೀರ್ಣ 1200 ಚ.ಅಡಿ) ನಿವೇಶನ. ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: 287 ನೇ ನಂಬರ್ ನಿವೇಶನ, ಉತ್ತರಕ್ಕೆ: 295 ನೇ ನಂಬರ್ ನಿವೇಶನ, ದಕ್ಷಿಣಕ್ಕೆ: 297 ನೇ ನಂಬರ್ ನಿವೇಶನ

Sd/- ROHIT SUBBAYYA
ADVOCATE, KAR 1162/11
#1230/A, CH-36/A, 2nd Cross, Behind Ramamandira, Krishna murthypuram, Chamaraja Mohalla, Mysuru-04, r.subbayya@gmail.com, +91 9480004999
Date: 04-07-2024

ಜಿಲ್ಲಾ ಪಂಚಾಯತ್ ಕಾರ್ಯಾಲಯ

ಜಿಲ್ಲಾ ಆಡಳಿತ ಭವನ, ನೆಲ ಮಹಡಿ, ಚಾಮರಾಜನಗರ ಜಿಲ್ಲೆ–571313
Email: ceochanagar@gmail.com | ದೂರವಾಣಿ ಸಂಖ್ಯೆ:08226-224013 | fax : 08226-224014

ಅಲ್ಪಾವಧಿ e-procurement ಪ್ರಕಟಣೆ

ಚಾಮರಾಜನಗರ ಜಿಲ್ಲೆಯ ಪ್ರತಿ ತಾಲ್ಲೂಕು ಕೆ.ಎಫ್.ಸಿ.ಎಸ್.ಸಿ ಗೋದಾಮಿನಿಂದ ಅಕ್ಕಿ, ಗೋಧಿ, ತೊಗರಿಬೇಳೆ, ಅಡುಗೆ ಎಣ್ಣೆ ಮತ್ತು ಉಪ್ಪು ಆಹಾರ ಸಾಮಗ್ರಿಗಳನ್ನು ಅಕ್ಷರ ದಾಸೋಹ ಕಾರ್ಯಕ್ರಮದಡಿ ಸರ್ಕಾರಿ ಮತ್ತು ಅನುದಾನಿತ ಶಾಲಾ ಅಡುಗೆ ಕೇಂದ್ರಗಳಿಗೆ ಸರಬರಾಜು ಮಾಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ಚಾಮರಾಜನಗರ ರವರಿಂದ ತಾಲ್ಲೂಕು ವಾರು ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾಗಳಲ್ಲಿ ಪಾರದರ್ಶಕ ಅಧಿನಿಯಮ **(KTPP)** 1999 ನಿಯಮಗಳು 2000 ರ ಪ್ರಕಾರ **e-procurement** ಮೂಲಕ ಆಹ್ವಾನಿಸಲಾಗಿದೆ. **(www.eproc.karnataka.gov.in)** ಆಸಕ್ತಿಯುಳ್ಳ ಆರ್.ಸಿ ಹೊಂದಿದ (ಆರ್.ಟಿ.ಓ ಕಛೇರಿಯಲ್ಲಿ ನೋಂದಾಯಿಸಲ್ಪಟ್ಟ) ಲಾರಿ ಮಾಲೀಕರು, ಟೆಂಡರ್ ಹಾಕಲು ಇಚ್ಛೆಯುಳ್ಳವರು **e-procurement portal** ಮೂಲಕ **www.eproc.karnataka.gov.in** ಮೂಲಕ ಮಾಹಿತಿಯನ್ನು ಪಡೆಯಬಹುದಾಗಿದೆ.

1)	ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ಸಂಖ್ಯೆ:ಎಂ.ಎಂ.ಎಸ್:ಅ.ದಾ/ಇ.ಟೆ.ಪ್ರ.ಬಗ್ಗೆ/01/ 2024-25 ದಿನಾಂಕ: 04/07/2024
2)	Tender Form ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ	ದಿನಾಂಕ : 05/07/2024
3)	Tender Form ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	ದಿನಾಂಕ: 24/07/2024
4)	ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಚಾಮರಾಜನಗರ, ದಿನಾಂಕ : 25/07/2024
5)	ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ದಿನಾಂಕ: 29/07/2024 ಕೊಠಡಿ ಸಂಖ್ಯೆ:03 ಜಿಲ್ಲಾ ಪಂಚಾಯತ್, ಚಾಮರಾಜನಗರ
6)	Tender ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ.ಮೊತ್ತ(ತಾಲ್ಲೋಕುವಾರು ಪ್ರತ್ಯೇಕವಾಗಿ ಸಲ್ಲಿಸುವುದು)	ರೂ.50,000/-(ಐವತ್ತು ಸಾವಿರ ಮಾತ್ರ)
7)	ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ಮತ್ತು ದೂರವಾಣಿ ಸಂಖ್ಯೆ	ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಜಿಲ್ಲಾ ಪಂಚಾಯತ್, ಚಾಮರಾಜನಗರ ಮೊಬೈಲ್ ಸಂಖ್ಯೆ:-9739383162

ಸಂ:ವಾಸಾಸಂಇ: ಚಾನಗರ:77:2024-25

ನಾಳೆ ಅಂಬೇಡ್ಕರ್ ಜಯಂತಿ



ಮಲ್ಕುಂಡಿ, ಜು.5– ಡಾ.ಬಿ.ಆರ್. ಅಂಬೇಡ್ಕರ್ ಯುವಕ ಸಂಘ ಹಾಗೂ ಗ್ರಾಮದ ಮುಖಂಡರ ಸಹಯೋಗದಲ್ಲಿ ಜು.7ರಂದು ಬೆಳಗ್ಗೆ 11 ಗಂಟೆಗೆ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ನಡೆಯಲಿದೆ.

ಮೈಸೂರಿನ ಉರಿಲಿಂಗ ಪೆದ್ದಿ ಮಠದ ಶ್ರೀಜ್ಞಾನ ಪ್ರಕಾಶ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸುವರು. ಅಂಬೇಡ್ಕರ್ ಭಾವಚಿತ್ರಕ್ಕೆ ಸಂಸದ ಸುನೀಲ್ ಬೋಸ್ ಪುಷ್ಪಾರ್ಚನೆ ಮಾಡುವರು. ಶಾಸಕ ದರ್ಶನ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಬಿ.ಹರ್ಷವರ್ಧನ್, ಕಳಲೆ ಕೇಶವಮೂರ್ತಿ, ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಮಾಜಿ ಮೇಯರ್ ಪುರುಷೋತ್ತಮ್, ವಿ.ರಾಮಸ್ವಾಮಿ ಇನ್ನಿತರರು ಭಾಗವಹಿಸಲಿದ್ದಾರೆ. ಗ್ರಾಮದಲ್ಲಿ ರಾತ್ರಿ 8 ಗಂಟೆಗೆ ಬುದ್ಧ, ಬಸವ, ಅಂಬೇಡ್ಕರ್ ಭಾವಚಿತ್ರವನ್ನು ಮೆರವಣಿಗೆ ಮಾಡಲಾಗುವುದು. ಅಲ್ಲದೇ ಮಧ್ಯಾಹ್ನ 12 ಗಂಟೆಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಗ್ರಾಮಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಂಜನಗೂಡಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ಜನಸ್ಪಂದನಾ ಸಭೆ

ಸಭೆಯಲ್ಲಿ ಸಾಲು ಸಾಲು ಸಮಸ್ಯೆಗಳ ಅನಾವರಣ

- ಸಭೆಯಲ್ಲಿ ದಯಾ ಮರಣಕ್ಕೆ ಮನವಿ ಸಲ್ಲಿಸಿದ ಯುವ ರೈತ
- ಅನಧಿಕೃತ ಶಾಲೆ ವಿರುದ್ಧಕ್ಕೆ ಕ್ರಮ, ಆಸ್ಪತ್ರೆ ಎದುರು ಸ್ಕ್ಯಾನಿಂಗ್ ಸೆಂಟರ್, ಔಷಧ ಅಂಗಡಿ ತೆರೆಯುವುದು ಸೇರಿದಂತೆ 89 ಅರ್ಜಿ ಸ್ವೀಕಾರ

> ಕಾರ್ಯಕ್ರಮದಲ್ಲಿ ಸುಮಾರು 89 ಅರ್ಜಿಗಳು ಬಂದಿವೆ. ಈಗಾಗಲೇ ಕೆಲವೊಂದಕ್ಕೆ ಪರಿಹಾರ ನೀಡಲಾಗಿದೆ. ಇನ್ನುಳಿದ ಅರ್ಜಿಗಳ ಪ್ರಗತಿಯನ್ನು ವಾರ ವಾರ ಪರಿಶೀಲಿಸಿ ಆದಷ್ಟು ಬೇಗ ಸಮಸ್ಯೆಗೆ ಪರಿಹಾರ ಒದಗಿಸಲಾಗುವುದು. ಸರ್ಕಾರದ ಮೇಲೆ ನಂಬಿಕೆ ಇಟ್ಟು ಬಂದಿರುವ ಅರ್ಜಿಗಳ ಸಮಸ್ಯೆ ಬಗೆಹರಿಸಲು ಎಲ್ಲಾ ಇಲಾಖೆ ಅಧಿಕಾರಿಗಳು ಜಾಗೃತಿಯಿಂದ ಕೆಲಸ ಮಾಡ ಬೇಕು. - **ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾಧಿಕಾರಿ.**

ನಂಜನಗೂಡು, ಜು.5– ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಜನಸ್ಪಂದನಾ ಸಭೆಯಲ್ಲಿ ಸಾಲು ಸಾಲು ಸಮಸ್ಯೆಗಳು ಅನಾವರಣಗೊಂಡವು.

ತಾಲೂಕಿನ ಕಾಳಿಹುಂಡಿ ಗ್ರಾಮದ ಯುವ ರೈತ ಮಹದೇವಸ್ವಾಮಿ ಮಾತನಾಡಿ, ಖಾಸಗಿ ವ್ಯಕ್ತಿಯೊಬ್ಬ ನನ್ನ ಮತ್ತು ನನ್ನ ತಮ್ಮನ ಸಹಿಗಳನ್ನು ನಕಲು ಮಾಡಿ ಸಿಂಧುವಳ್ಳಿ ಗ್ರಾಮದ ಸರ್ವೇ ನಂ. 174/1ರಲ್ಲಿರುವ ಆಸ್ತಿ ಕಬಳಿಸಲು ಮುಂದಾಗಿದ್ದಾನೆ. ಈ ಕೃತ್ಯದಲ್ಲಿ ನಂಜನಗೂಡಿನ ತಾಲೂಕು ಕಚೇರಿ ಅಧಿಕಾರಿಗಳು ಶಾಮೀಲಾಗಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದರೂ ಸಹ ನಮಗೆ ನ್ಯಾಯ ಸಿಕ್ಕಿಲ್ಲ. ಬದಲಾಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಮಗೆ ನ್ಯಾಯ ಸಿಗುವ ಭರವಸೆ ಇಲ್ಲವಾಗಿದೆ. ಈ ವಂಚನೆ ಸಹಿಸಲು ಆಗುತ್ತಿಲ್ಲ. ಆದ್ದರಿಂದ ನಮ್ಮ ಇಡೀ ಕುಟುಂಬಕ್ಕೆ ದಯಾಮರಣ ನೀಡಿ ಎಂದು ಮನವಿ ಮಾಡಿದರು.

ಜನ ಸಂಗ್ರಾಮ ಪರಿಷತ್ ನಗರ್ಲೆ ವಿಜಯ್‌ಕುಮಾರ್ ಮಾತನಾಡಿ, ಬದುಕಿರುವ ವ್ಯಕ್ತಿಗೆ ಮರಣ ಪ್ರಮಾಣ ಪತ್ರ ನೀಡಿ ನಕಲಿ ದಾಖಲೆ ಸೃಷ್ಟಿಸಿದ ಪ್ರಕರಣದಲ್ಲಿ ಆರ್‌ಐ ಪ್ರಕಾಶ್, ಶಿರಸ್ತೇದಾರ್ ಶ್ರೀನಾಥ್ ಮತ್ತು ಗ್ರಾಮ ಲೆಕ್ಕಿಗ ಮಂಜುನಾಥ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಇಲಾಖೆ ಶ್ರೀನಾಥ್ ಮತ್ತು ಮಂಜುನಾಥ್ ಮೇಲೆ ಕ್ರಮ ಕೈಗೊಂಡಿದೆ. ಆದರೆ ಆರ್‌ಐ ಪ್ರಕಾಶ್ ತಮ್ಮ ಪ್ರಭಾವ ಬಳಸಿ ಕೆಲಸದಲ್ಲಿ ಮುಂದುವರೆದಿದ್ದು, ಈತನ ಮೇಲೂ ಸಹ ಕಾನೂನು ಕ್ರಮ ಜರುಗಿಸಿ ಅವರನ್ನು ಅಮಾನತುಗೊಳಿಸಬೇಕೆಂದು ಆಗ್ರಹಿಸಿದರು.

ತಾಲೂಕಿನ ಕಳಲೆ ಗ್ರಾಮದ ಖಾಸಗಿ ಶಾಲೆ ಮೂಲ ಸೌಕರ್ಯಗಳಿಲ್ಲದೇ ಪರವಾನಗಿ ಪಡೆಯದೆ ಅಕ್ರಮವಾಗಿ ನಡೆಯುತ್ತಿದೆ. ಆ ಶಾಲೆಯ ಪರವಾನಗಿ ಕಳೆದ 10 ವರ್ಷದಿಂದ ನವೀಕರಣಗೊಂಡಿಲ್ಲ. ಆದರೂ ಸಹ ನಡೆಯುತ್ತಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆ ಶಾಲೆ ಮೇಲೆ ಕ್ರಮವಹಿಸಬೇಕು. ಅಲ್ಲದೆ ನಗರಸಭೆಯಲ್ಲಿ ಯಾವುದೇ ಖಾತೆಗಳು ಆಗುತ್ತಿಲ್ಲ. ಮನೆ ನಿರ್ಮಾಣಕ್ಕೆ ಅನುಮತಿ ನೀಡುತ್ತಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ ಎಂದು ದೂರಿದರು.

ಶಂಕರಪುರ ಸುರೇಶ್ ಮಾತನಾಡಿ, ನಗರದಾದ್ಯಂತ ಅಂಗಡಿ ಮಾಲೀಕರು ಫುಟ್‌ಪಾತ್ ಆಕ್ರಮಣ ಮಾಡಿಕೊಂಡಿದ್ದಾರೆ. ಇದರಿಂದ ಸುಗಮ ಸಂಚಾರಕ್ಕೆ ತೊಂದರೆಯಾಗಿದೆ ಎಂದು ದೂರಿದರು.

ಹುಸ್ಕೂರು ಗ್ರಾಮದ ಪ್ರದೀಪ್ ಮಾತನಾಡಿ, ಮೈಸೂರು ಜಿಲ್ಲಾದ್ಯಂತ ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳು ಹೆಚ್ಚಾಗಿ ತಲೆ ಎತ್ತುವ ಜೊತೆಗೆ ಹೆಚ್ಚಿನ ಶುಲ್ಕ ವಸೂಲಿ ಮಾಡುತ್ತಿವೆ. ಇದರಿಂದ ಬಡವರಿಗೆ ತೊಂದರೆಯಾಗುತ್ತಿದ್ದು, ಸರ್ಕಾರಿ ಆಸ್ಪತ್ರೆ ಮುಂಭಾಗದಲ್ಲಿ ಔಷಧ ಅಂಗಡಿಗಳನ್ನು ಮತ್ತು ಸರ್ಕಾರದ ವತಿಯಿಂದ ಹೆಚ್ಚಿನ ಸ್ಕ್ಯಾನಿಂಗ್ ಸೆಂಟರ್‌ಗಳನ್ನು ತೆರೆಯಲು ಕ್ರಮವಹಿಸಬೇಕು ಎಂದು ಒತ್ತಾಯಿಸಿದರು.

ಬೊಕ್ಕಹಳ್ಳಿ ನಂಜುಂಡಸ್ವಾಮಿ ಮಾತನಾಡಿ, ನಂಜನಗೂಡು, ತಾಂಡ್ಯ, ಅಡಕನಹಳ್ಳಿ ಹುಂಡಿ ಕೈಗಾರಿಕಾ ಪ್ರದೇಶದಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡುತ್ತಿಲ್ಲ. ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಭೂಮಿ ಕಳೆದುಕೊಂಡ ರೈತರ ಮಕ್ಕಳಿಗೆ ಉದ್ಯೋಗ ನೀಡದೆ ವಂಚಿಸಿದೆ. ಈ ಬಗ್ಗೆ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆದರೂ ಪ್ರಯೋಜನವಾಗಿಲ್ಲ ಎಂದು ಆಪಾದಿಸಿದರು.

ನಗರದಲ್ಲಿ ಕಳ್ಳತನ, ಕೊಲೆ ಪ್ರಕರಣ ಹೆಚ್ಚಾಗಿದೆ. ಸಿಎಂ ತವರು ಕ್ಷೇತ್ರದಲ್ಲೇ ಅಕ್ರಮ ಮದ್ಯ ಮಾರಾಟ ನಡೆಯುತ್ತಿದೆ. ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ದಲ್ಲಾಳಿಗಳ ಹಾವಳಿ ಹೆಚ್ಚಾಗಿದೆ. ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿರುವ ಬಗ್ಗೆ, ಸಾಲು ಸಾಲು ದೂರು ಕೇಳಿ ಬಂದವು.

ಕಾರ್ಯಕ್ರಮದಲ್ಲಿ ಜಿಪಂ ಸಿಇಓ ಗಾಯತ್ರಿ, ಉಪ ಕಾರ್ಯದರ್ಶಿ ಕೃಷ್ಣಂರಾಜು, ಎಡಿಸಿ ಶಿವರಾಜು, ಎಸಿ ರಕ್ಷಿತ್, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ಜೆರಾಲ್ಡ್ ರಾಜೇಶ್, ಡಿವೈಎಸ್ಪಿ ರಘು, ನಗರಸಭಾ ಆಯುಕ್ತ ನಂಜುಂಡಸ್ವಾಮಿ, ಸಮಾಜ ಕಲ್ಯಾಣಾಧಿಕಾರಿ ಭೀಮರಾವ್ ವಡ್ಡಾರ್ ಸೇರಿದಂತೆ ಎಲ್ಲಾ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.



ನಂಜನಗೂಡಿನಲ್ಲಿ ನಡೆದ ಜನಸ್ಪಂದನಾ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಉದ್ಘಾಟಿಸಿದರು.

ಮಕ್ಕಳಲ್ಲಿ ಪರಿಸರದ ಅರಿವು ಮೂಡಿಸಬೇಕಿದೆ

ಹುಣಸೂರು, ಜು.5– ನಾವೆಲ್ಲರೂ ಪರಿಸರ ಉಳಿಸಿ ಬೆಳೆಸುವ ಜವಾಬ್ದಾರಿಯಿಂದ ಪರಿಸರ ಸಂರಕ್ಷಿಸಬೇಕಾಗಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಆದರ್ಶ ಶಾಲೆ ಆವರಣದಲ್ಲಿ ಹುಣಸೂರು ಪ್ರಾದೇಶಿಕ ಹಾಗೂ ವಲಯ ಅರಣ್ಯ ಇಲಾಖೆ, ಹುಣಸೂರು ರೋಟರಿ ಸಂಸ್ಥೆ ಸಹಭಾಗಿತ್ವದಲ್ಲಿ ನಡೆದ ವನ ಮಹೋತ್ಸವದಲ್ಲಿ ಮಾತನಾಡಿದ ಅವರು, ಮಕ್ಕಳಲ್ಲಿ ಪರಿಸರದ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕಾಗಿದೆ. ಜೊತೆಗೆ ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸುವ ಜವಾಬ್ದಾರಿ ಪೋಷಕರು ಹಾಗೂ ಶಿಕ್ಷಕರ ಮೇಲಿದೆ ಎಂದರು. ಪರಿಸರ ಕುರಿತ ಹಲವು ಕಾರ್ಯಕ್ರಮಗಳನ್ನು ಹೆಚ್ಚಾಗಿ ಆಯೋಜಿಸಿ ಪರಿಸರ ಉಳಿಸಿ, ಬೆಳಸಬೇಕು. ಹೀಗಾಗಿ ಪ್ರತಿಯೊಬ್ಬರೂ ತಮ್ಮ ಮನೆಯ ಮುಂಭಾಗ ಮತ್ತು ಜಮೀನುಗಳಲ್ಲಿ ಸಸಿಗಳನ್ನು ನೆಟ್ಟು ಪಾಲನೆ ಮಾಡುವ ಮೂಲಕ ಅರಣ್ಯ ಸಂಪತ್ತು ವೃದ್ಧಿಸುವ ನಿಟ್ಟಿನಲ್ಲಿ ಶ್ರಮಿಸಬೇಕು ಎಂದರು.

ಪರಿಸರ ಸಂರಕ್ಷಣೆ ಪ್ರಸ್ತುತ ತೀರ ಅಗತ್ಯವಾಗಿದೆ. ಉಳಿಸುವುದು ಎಲ್ಲರ ಕರ್ತವ್ಯವೂ ಆಗಿದೆ. ಆ ನಿಟ್ಟಿನಲ್ಲಿ ಎಲ್ಲರೂ ಜಾಗೃತರಾಗಿ ಮಕ್ಕಳಿಗೆ ಪರಿಸರದ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದರು. ಇದೇ ವೇಳೆ ಶಾಲೆ ಆವರಣದಲ್ಲಿ 47 ಸಸಿಗಳನ್ನು ನೆಟ್ಟು ಬೆಳೆಸಲು ಮಕ್ಕಳಿಗೆ ಜವಾಬ್ದಾರಿ ನೀಡಲಾಯಿತು.

ಶಾಲೆ ಎಸ್‌ಡಿಎಂಸಿ ವತಿಯಿಂದ ಶಾಸಕರಿಗೆ ಶಾಲೆ ಅಭಿವೃದ್ಧಿಗೆ ಸಹಕರಿಸಲು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಎಸಿಎಫ್ ಮಹದೇವ್, ನಗರಸಭೆ ಸದಸ್ಯರಾದ ಸತೀಶ್, ಕೃಷ್ಣಗುಪ್ತ, ಆರ್‌ಎಫ್‌ಓಗಳಾದ ನಂದಕುಮಾರ್, ಸುಬ್ರಹ್ಮಣ್ಯ, ರೋಟರಿ ಅಧ್ಯಕ್ಷ ಡಾ.ಪ್ರಸನ್ನ, ಪ್ರಧಾನ ಕಾರ್ಯದರ್ಶಿ ಹೆಚ್.ಆರ್. ಕೃಷ್ಣಕುಮಾರ್, ವಲಯ 6ರ ಆನಂದ್, ಶ್ಯಾಮ್, ಎಸ್‌ಡಿಎಂಸಿ ಅಧ್ಯಕ್ಷ ಮಹದೇವ್, ಮುಖ್ಯ ಶಿಕ್ಷಕ ಚಂದ್ರಕುಮಾರ್, ಸಿಡಿಪಿಓ ಎಸ್.ಜಿ.ಹರೀಶ್, ಬಿಆರ್‌ಸಿ ಸಂತೋಷ್ ಸೇರಿದಂತೆ ಶಾಲೆ ಶಿಕ್ಷಕರ ವೃಂದ, ಮಕ್ಕಳು ಭಾಗವಹಿಸಿದ್ದರು.



ವನ ಮಹೋತ್ಸವ ಕಾರ್ಯಕ್ರಮವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಸಸಿ ನೆಡುವ ಮೂಲಕ ಉದ್ಘಾಟಿಸಿದರು.

ಆ.9, ಕಲ್ಲುಮಠದ ನೂತನ ಶ್ರೀಗಳ ಪಟ್ಟಾಧಿಕಾರ ಮಹೋತ್ಸವ

ವಾಟಾಳು ಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಮಾಹಿತಿ

ತಿ.ನರಸೀಪುರ, ಜು.5– ತಾಲೂಕಿನ ಮುಡುಕುತೊರೆ ಪ್ರಸಿದ್ಧ ಕಲ್ಲುಮಠದ ನೂತನ ಪೀಠಾಧಿಪತಿ ಪಟ್ಟಾಭಿಷೇಕ ಕಾರ್ಯಕ್ರಮ ಆ.9ರಂದು ನಡೆಯಲಿದೆ ಎಂದು ವಾಟಾಳು ಸೂರ್ಯ ಸಿಂಹಾಸನಾ ಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಮಠದಲ್ಲಿ ನಡೆದ ಆಹ್ವಾನ ಪತ್ರಿಕೆ ಬಿಡುಗಡೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಹಿಂದಿನ ಪೀಠಾಧಿಪತಿಗಳಾಗಿದ್ದ ಶ್ರೀಚಂದ್ರಶೇಖರ ಸ್ವಾಮೀಜಿ ಅವರು ಲಿಂಗೈಕ್ಯರಾದ ಕಾರಣ ಮುಂದಿನ ಪೀಠಾಧಿಪತಿಗಳನ್ನಾಗಿ ಎಂ.ಎಸ್. ಮಹದೇವ ಪ್ರಸಾದ್ ಅವರನ್ನು ಆಯ್ಕೆ ಮಾಡಲಾಗಿದ್ದು, ಮುಡುಕುತೊರೆ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಭಕ್ತರ ಸಹಕಾರದಿಂದ ಪಟ್ಟಾಭಿಷೇಕ ಸಮಾರಂಭವನ್ನು ಆ.9ರಂದು ವಿಜೃಂಭಣೆಯಿಂದ ನೆರವೇರಿಸಲಾಗುತ್ತದೆ ಎಂದರು.

ವಾಟಾಳು ಶ್ರೀಗಳು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರ ಸಮ್ಮುಖದಲ್ಲಿ ಆಹ್ವಾನ ಪತ್ರಿಕೆ ಮತ್ತು ರಸೀತಿ ಪುಸ್ತಕಗಳನ್ನು ಬಿಡುಗಡೆ ಮಾಡಿ ದಾನಿಗಳಿಂದ ದೇಣಿಗೆ ಪಡೆಯಲಾಯಿತು. ಕಾರ್ಯಕ್ರಮದಲ್ಲಿ ಮುಖಂಡರಾದ ಪುಟ್ಟಬುದ್ಧಿ, ಗೌಡರ ಮಹದೇವಸ್ವಾಮಿ, ಸುಗಂಧರಾಜು, ದೊಡ್ಡನಹುಂಡಿ ನಂಜುಂಡಪ್ಪ, ಶಿವಪ್ಪ, ಬಸವರಾಜು, ಕುಮಾರ ಮಾವಿನಹಳ್ಳಿ, ಶಂಭುದೇವನಪುರದ ಮರಿಸ್ವಾಮಿ, ವೃಷಬೇಂದ್ರ, ಮಹದೇವಪ್ಪ, ಕುಮಾರ, ಮಾವಿನಹಳ್ಳಿ ಜಯಪ್ಪ, ಶಂಭುದೇವಪುರ ಬಸವಣ್ಣ, ಬಸಲಿಂಗಪ್ಪ, ಚನ್ನಬಸವನುಂಡಿ ಎಸ್.ಎಂ.ಆರ್.ಪ್ರಕಾಶ್, ನಿಲಸೋಗೆ ಶೇಖರಪ್ಪ, ಹೊಸಹುಂಡಿ ತೋಂಟೇಶ್, ಮಹಾಂತಪ್ಪ, ಮುಡುಕುತೊರೆ ಮಹದೇವ ಪ್ರಸಾದ್ ಮತ್ತಿತರರಿದ್ದರು.



ಮುಡುಕುತೊರೆಯ ಕಲ್ಲು ಮಠದಲ್ಲಿ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಲಾಯಿತು.

ಪ್ರಕೃತಿ ಸಮತೋಲನ ಕಾಪಾಡಲು ಗಿಡ, ಮರ ಬೆಳೆಸಿ

ಉಪ ವಲಯ ಅರಣ್ಯ ಅಧಿಕಾರಿ ನಾಗರಾಜು ಕರೆ

ತಿ.ನರಸೀಪುರ, ಜು.5– ಪ್ರಕೃತಿ ಸಮತೋಲನ ಕಾಪಾಡಲು ಗಿಡ, ಮರಗಳನ್ನು ಬೆಳೆಸುವಂತೆ ಉಪವಲಯ ಅರಣ್ಯಾಧಿಕಾರಿ ನಾಗರಾಜು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ತಾಲೂಕಿನ ತಲಕಾಡು ಹೊರವಲಯದ ಎನ್.ಆರ್.ಪಟೇಲ್ ಶಿಕ್ಷಣ ಸಂಸ್ಥೆಯಲ್ಲಿ ಪ್ರಾದೇಶಿಕ ಅರಣ್ಯ ಇಲಾಖೆ ಹಮ್ಮಿಕೊಂಡಿದ್ದ ಸಪ್ತಾಹ–2024 ಕಾರ್ಯಕ್ರಮವನ್ನು ಗಿಡ ನೆಡುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ನಾವು ಉಸಿರಾಡುವ ಗಾಳಿ, ಅಗತ್ಯವಿರುವ ಆಹಾರ ಪದಾರ್ಥಗಳು ಸೇರಿದಂತೆ ನಮ್ಮ ದೈನಂದಿನ ಜೀವನಕ್ಕೆ ಬೇಕಾದ ಎಲ್ಲಾ ವಸ್ತುಗಳನ್ನು ಗಿಡ ಮರಗಳು ನೀಡುತ್ತಿದೆ. ಆದರೆ ನಾವು ಗಿಡ ಮರಗಳನ್ನು ನಾಶ ಮಾಡುವ ಮೂಲಕ ಪ್ರಕೃತಿಯಲ್ಲಿ ಅಸಮತೋಲನ ಉಂಟು ಮಾಡುತ್ತಿದ್ದೇವೆ ಅಲ್ಲದೇ ಜಾಗತಿಕ ತಾಪಮಾನ ಹೆಚ್ಚಾಗಲು ಕಾರಣರಾಗುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ವನ ಮಹೋತ್ಸವದ ಮೂಲಕ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಿ ಗಿಡ ಮರಗಳನ್ನು ಬೆಳೆಸಲು ಪ್ರೇರೆಪಿಸಲಾಗುತ್ತಿದೆ ಎಂದರು.

ಉಪವಲಯ ಅರಣ್ಯಾಧಿಕಾರಿ ಎಸ್.ಎಂ. ಮಂಜುನಾಥ್ ಮಾತನಾಡಿ, ವಾಣಿಜ್ಯ ಉದ್ದೇಶಕ್ಕೆ ಬಳಕೆಯಾಗುವ ಮರಗಳನ್ನು ನೆಟ್ಟು ಬೆಳೆಸುವುದರಿಂದ ನಾವು ಆದಾಯ ಕ್ರೋಢಿಕರಿಸಬಹುದು. ಭವಿಷ್ಯದ ದೃಷ್ಟಿಯಿಂದ ಅಂತಹ ಮರಗಳನ್ನು ಬೆಳೆಸಿದಲ್ಲಿ ನಮಗೆ ಅನುಕೂಲವಾಗಬಹುದು. ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಮನೆಗಳ ಮುಂಭಾಗ, ತಮ್ಮ ಜಮೀನು, ನಿವೇಶನಗಳಲ್ಲಿ ಉತ್ತಮ ಗಿಡ ಮರಗಳನ್ನು ಬೆಳೆಸುವ ಮೂಲಕ ಪರಿಸರ ಸಂರಕ್ಷಿಸುವಂತೆ ಸಲಹೆ ನೀಡಿದರು.

ಇದೇ ವೇಳೆ ಅರಣ್ಯ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಸಸಿಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆ ಪ್ರಾಂಶುಪಾಲ ಎನ್.ಶ್ರೀಕಂಠದತ್ತ, ಸಂಯೋಜಕ ಶ್ರೀಹರಿ, ಶ್ರೀನಿವಾಸ್, ಎಂ.ಮಹದೇವ್, ಅರಣ್ಯ ಇಲಾಖೆ ಲೋಕೇಶ್, ಸಿದ್ದಯ್ಯ ಹಾಗೂ ಇಲಾಖೆ ಇತರೆ ಸಿಬ್ಬಂದಿ, ಶಾಲೆ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.



ತಲಕಾಡಲ್ಲಿ ವಿದ್ಯಾರ್ಥಿಗಳಿಗೆ ಪರಿಸರದ ಬಗ್ಗೆ ಮೂಡಿಸಲಾಯಿತು.

ಪ್ರವೇಶಾವಧಿ ವಿಸ್ತರಣೆ

ಮೈಸೂರು, ಜು.5– ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ 2024–25ನೇ ಸಾಲಿನಲ್ಲಿ ಸರ್ಕಾರಿ ಕೋಟಾದಡಿ ಖಾಲಿ ಉಳಿದಿರುವ ಪ್ರಥಮ ಸೆಮಿಸ್ಟರ್ ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆಯನ್ನು ಜು.15ರವರೆಗೆ ವಿಸ್ತರಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಶೇ.35 ಅಂಕಗಳೊಂದಿಗೆ ಪಾಸಾದ ಅರ್ಹ ವಿದ್ಯಾರ್ಥಿಗಳು ಮೂಲ ದಾಖಲಾತಿಗಳೊಂದಿಗೆ ಸಂಸ್ಥೆಗೆ ಭೇಟಿ ನೀಡಿ ಪ್ರವೇಶ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಶ್ರೀಮತಿ ಎಂ.ಸವಿತಾ (ಮೊ.9591650 765) ಅಥವಾ ವಿ.ಬಿ.ಲೋಕೇಶ, ಪ್ರಾಂಶುಪಾಲರು (ಮೊ.8050216873) ಅವರನ್ನು ಸಂಪರ್ಕಿಸಬಹುದು.

ಅಂತರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ, ಕಳ್ಳ ಸಾಗಾಣಿಕೆ ವಿರೋಧಿ ದಿನಾಚರಣೆ

ಮೈಸೂರು, ಜು.5– ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ ಜು.6ರಂದು ಬೆಳಗ್ಗೆ 10 ಗಂಟೆಗೆ ಅಂತಾರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ಮತ್ತು ಕಳ್ಳ ಸಾಗಾಣಿಕೆ ವಿರೋಧಿ ದಿನಾಚರಣೆಯನ್ನು ಎನ್.ಆರ್.ಮೊಹಲ್ಲಾದ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿಗಳು ತಿಳಿಸಿದ್ದಾರೆ.

ತರಕಾರಿ ತುಂಬಿದ್ದ ಲಾರಿ ಪಲ್ಟಿ



ನಂಜನಗೂಡು, ಜು.5– ತರಕಾರಿ ತುಂಬಿದ್ದ ಲಾರಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿರುವ ಘಟನೆ ನಗರದ ಹೊರವಲಯದ ಗೋಳೂರು ವೃತ್ತದಲ್ಲಿ ನಡೆದಿದೆ.

ಮೈಸೂರಿನಿಂದ ತಮಿಳುನಾಡಿಗೆ ತರಕಾರಿ ತುಂಬಿಕೊಂಡು ಹೋಗುತ್ತಿದ್ದ ಲಾರಿ ಗೋಳೂರು ವೃತ್ತದ ಬಳಿ ತಿರುವು ಪಡೆಯುತ್ತಿರುವಾಗ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿ ಹೊಡೆದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಈ ವೇಳೆ ಬೇರೊಂದು ಲಾರಿ ಮೂಲಕ ತರಕಾರಿಯನ್ನು ಸಾಗಿಸಲಾಯಿತು. ಸ್ಥಳಕ್ಕೆ ನಂಜನಗೂಡು ಸಂಚಾರಿ ಪೊಲೀಸರು ಭೇಟಿ ನೀಡಿ ಸುಗಮ ಸಂಚಾರಕ್ಕೆ ನೆರವಾದರು. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ.

ನಾಳೆ ವಾರ್ಷಿಕ ಮಹಾಸಭೆ, ಪ್ರತಿಭಾ ಪುರಸ್ಕಾರ



ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಭರತ್ ಚಾಮರಾಜು ಮಾತನಾಡಿದರು.

ಹೆಚ್.ಡಿ.ಕೋಟೆ, ಜು.5– ನಾಮಧಾರಿ ಗೌಡ ಯುವಕರ ಸಂಘದ 14ನೇ ವಾರ್ಷಿಕ ಮಹಾಸಭೆ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಜು.7ರಂದು ಬೆಳಗ್ಗೆ 10 ಗಂಟೆಗೆ ಸರಗೂರಿನ ಅಖಿಲ ನಾಮಧಾರಿಗೌಡ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಭರತ್ ಚಾಮರಾಜು ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2010ರಲ್ಲಿ ಆರಂಭವಾದ ಯುವಕರ ಸಂಘ ಅನೇಕ ಸಮಾಜಮುಖಿ ಕಾರ್ಯಗಳೊಂದಿಗೆ ಮುನ್ನಡೆಯುತ್ತಿದೆ. ಅಲ್ಲದೇ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚುಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಂಘದ ಸದಸ್ಯರು ಅಕಾಲಿಕ ಮರಣ ಹೊಂದಿದರೆ ಅವರ ಕುಟುಂಬ ನಿರ್ವಹಣೆಗೆ ಲಕ್ಷ ರೂ.ವರೆಗೆ ಆರ್ಥಿಕ ನೆರವು ನೀಡಲಾಗುತ್ತಿದೆ ಎಂದರು.

ಇದೇ ವೇಳೆ ವಕೀಲ ವೇಣುಗೋಪಾಲ್ ಮಾತನಾಡಿದರು. ಕಾರ್ಯದರ್ಶಿ ಅಮಿತ್ ಕುಮಾರ್, ಸತೀಶ್, ಚರಣ್, ಜಯಶಂಕರ್, ಪಶುಪತಿಮೂರ್ತಿ, ನಾಗೇಂದ್ರ ಆನಂದ್, ಮಾರುತಿ, ಪದ್ಮರಾಜ್, ನಾಗೇಶ್, ಪ್ರಸನ್ನ, ಸತ್ಯನಾರಾಯಣ, ಪ್ರಶಾಂತ್, ಮಹೇಶ, ಪ್ರಕಾಶ್, ಸುಬ್ರಹ್ಮಣ್ಯ, ಚೇತನ್, ಪುನೀತ್, ಮಧು, ಪಾರ್ಶನಾಥ್, ಅಭಿಲಾಶ್, ಪುನೀತ್ ಕುಮಾರ್ ಇತರರಿದ್ದರು.

ಈ.ರಾಜು ನಿಧನ



ಹುಣಸೂರು, ಜು.5– ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದ ನಿವಾಸಿ, ಗ್ರಾಪಂ ಸದಸ್ಯೆ ರತ್ನಮ್ಮ ಅವರ ಪತಿ ಈ.ರಾಜು (65) ಗುರುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಮಲಬಾಯಿ ಕಾಳಿಂಗೆ



ಹಿರೀಕ್ಯಾತನಹಳ್ಳಿ, ಜು.5– ಇಲ್ಲಿಗೆ ಸಮೀಪದ ಗಾವಡಗೆರೆ ಗ್ರಾಮದ ನಿವಾಸಿ ಕಮಲ ಬಾಯಿ ಕಾಳಿಂಗೆ(80) ಶುಕ್ರವಾರ ಮುಂಜಾನೆ ನಿಧನರಾದರು. ಮೃತರು ಗಾವಡಗೆರೆ ಗ್ರಾಪಂ ಮಾಜಿ ಅಧ್ಯಕ್ಷ ಹೊನ್ನಪ್ಪ ರಾವ್ ಕಾಳಿಂಗೆ ಸೇರಿದಂತೆ ಮೂವರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಂಜುಂಡಪ್ಪ



ಮೈಸೂರು, ಜು.5– ನಗರದ ತಿ.ನರಸೀಪುರ ರಸ್ತೆ ಚಿಕ್ಕಹಳ್ಳಿ ನಿವಾಸಿ ನಂಜುಂಡಪ್ಪ(67) ಗುರುವಾರ ರಾತ್ರಿ ನಿಧನರಾದರು. ಮೂಲತಃ ಅರಸೀಕೆರೆಯವರಾದ ಮೃತರು ಪತ್ನಿ ಮಂಜುಳಾ, ಇಬ್ಬರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಶುಕ್ರವಾರ ಚಿಕ್ಕಹಳ್ಳಿಯ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ತುಂಬಸೋಗೆ ಗ್ರಾಪಂಗೆ ಲಕ್ಷ್ಮಿ ಅಧ್ಯಕ್ಷೆ



ತುಂಬಸೋಗೆ ಗ್ರಾಪಂ ಅಧ್ಯಕ್ಷೆಯಾಗಿ ಲಕ್ಷ್ಮಿ ಅವಿರೋಧವಾಗಿ ಆಯ್ಕೆಯಾದರು.

ಹೆಚ್.ಡಿ.ಕೋಟೆ, ಜು.5– ತಾಲೂಕಿನ ತುಂಬಸೋಗೆ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಲಕ್ಷ್ಮಿ ಬಂದಿಗೆಗೌಡ ಅವಿರೋಧವಾಗಿ ಆಯ್ಕೆಯಾದರು.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷೆ ಕುಮಾರಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ಗ್ರಾಪಂನಲ್ಲಿ ನಡೆದ ಚುನಾವಣೆಯಲ್ಲಿ ಲಕ್ಷ್ಮಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಯೂ ಆದ ಚುನಾವಣಾಧಿಕಾರಿ ರಾಮಸ್ವಾಮಿ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಈ ವೇಳೆ ನೂತನ ಅಧ್ಯಕ್ಷೆ ಲಕ್ಷ್ಮಿ ಸೇರಿದಂತೆ ಎಲ್ಲಾ ಸದಸ್ಯರನ್ನು ಬಿಜೆಪಿ ಮುಖಂಡರು ಸನ್ಮಾನಿಸಿದರು. ಈ ವೇಳೆ ಬಿಜೆಪಿ ತಾಲೂಕು ಅಧ್ಯಕ್ಷ ಶಂಬೇಗೌಡ, ಜಿಪಂ ಮಾಜಿ ಸದಸ್ಯ ವೆಂಕಟಸ್ವಾಮಿ, ಗ್ರಾಪಂ ಉಪಾಧ್ಯಕ್ಷೆ ನಾಗರತ್ನ, ಸದಸ್ಯರಾದ ಶೋಭಾ, ಚಿನ್ನಮ್ಮ, ಕಾವ್ಯ, ಕೃಷ್ಣ, ಕುಮಾರಿ, ಚೆಲುವಯ್ಯ, ಶಿವಣ್ಣ, ಚೆನ್ನನಾಯಕ, ಮುಖಂಡರಾದ ನರಸಿಂಹೇಗೌಡ, ಮೊತ್ತ ಬಸವರಾಜಪ್ಪ, ಗೋಪಾಲಸ್ವಾಮಿ, ವೈ.ಕೆ.ಮಹೇಂದ್ರ, ನಂದೀಶ್, ಬಿಡಗಲು ರಾಜು, ಗೋಪಾಲಯ್ಯ, ವಿವೇಕಾನಂದ, ಮಹೇಶ್, ಚಂದ್ರಮೌಳಿ, ಚಂದ್ರು, ನಾಗಮಲೆ, ಶ್ರೀಧರ್ ಇನ್ನಿತರರಿದ್ದರು.

ಅರುಣ್ ಯೋಗಿರಾಜ್‌ರಿಂದ ಕೆಂಡಗಣ್ಣಸ್ವಾಮಿ ವಿಗ್ರಹ ನಿರ್ಮಾಣ

ಶ್ರೀಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ


ನಂಜನಗೂಡು, ಜು.5– ನಗರದ ಕೆಂಡಗಣ್ಣಸ್ವಾಮಿ ಗದ್ದುಗೆಯಲ್ಲಿ ಅಯೋಧ್ಯೆಯ ಶ್ರೀರಾಮನ ವಿಗ್ರಹ ಕೆತ್ತಿದ ಅರುಣ್ ಯೋಗಿರಾಜ್ ಅವರಿಂದ ಕೆಂಡಗಣ್ಣ ಸ್ವಾಮಿಯವರ ಅಮೃತಶಿಲೆ ವಿಗ್ರಹ ನಿರ್ಮಾಣವಾಗಲಿದೆ ಎಂದು ಮಠದ ಶ್ರೀಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಅಮೃತಶಿಲೆ ವಿಗ್ರಹ ನಿರ್ಮಾಣ ಹಿನ್ನೆಲೆಯಲ್ಲಿ ನಗರದ ಕೆಂಡಗಣ್ಣಸ್ವಾಮಿ ಗದ್ದುಗೆಗೆ ಭೇಟಿ ನೀಡಿ ಪರಿಶೀಲಿಸಿದ ಅರುಣ್ ಯೋಗಿರಾಜ್ ಅವರನ್ನು ಮಠದಿಂದ ಸನ್ಮಾನಿಸಿ ಮಾತನಾಡಿದ ಅವರು, ವಿಗ್ರಹ ಕೆತ್ತಲು ಅರುಣ್ ಯೋಗಿರಾಜ್ ಒಪ್ಪಿಕೊಂಡಿರುವುದು ಸಂತಸದ ವಿಷಯ ಎಂದರು.

ಟ್ರಸ್ಟ್ ಕಾರ್ಯದರ್ಶಿ ಎನ್.ಸಿ.ಬಸವಣ್ಣ ಮಾತನಾಡಿ, ಕೆಂಡಗಣೇಶ್ವರಸ್ವಾಮಿಯವರ ವಿಗ್ರಹ ಕೆತ್ತನೆ ಮಾಡಿಕೊಡಲು ಟ್ರಸ್ಟಿಗಳು ಮತ್ತು ಭಕ್ತರ ಸಮ್ಮುಖದಲ್ಲಿ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಮನವಿ ಮಾಡಿಕೊಳ್ಳಲಾಯಿತು. ಅವರು ಒಪ್ಪಿಗೆ ನೀಡಿದ್ದಾರೆ. ಜೊತೆಗೆ ಕೆಂಡಗಣ್ಣೇಶ್ವರಸ್ವಾಮಿಯವರ ಪ್ರೇರೇಪಣೆ ಮೇರೆಗೆ ಇಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳು ನಡೆಯುತ್ತಿದ್ದು, 30 ಲಕ್ಷ ರೂ. ವೆಚ್ಚದಲ್ಲಿ ವಿಗ್ರಹಗಳು ನಿರ್ಮಾಣಗೊಳ್ಳಲಿದೆ. ಇದನ್ನು ಟ್ರಸ್ಟಿಗಳು ಮತ್ತು ಭಕ್ತರಿಂದ ದೇಣಿಗೆಯಾಗಿ ಸಂಗ್ರಹಿಸಲಾಗುವುದು. ಅರುಣ್ ಯೋಗಿರಾಜ್ ಅವರ ವಿಗ್ರಹದ ಕೆತ್ತನೆಯಿಂದ ಶ್ರೀಮಠವು ಮತ್ತೊಂದು ಇತಿಹಾಸ ನಿರ್ಮಿಸಲಿದೆ ಎಂದರು.

ಶಿಲ್ಪಿ ಅರುಣ್ ಯೋಗಿರಾಜ್ ಮಾತನಾಡಿ, ಶ್ರೀಮಠದಲ್ಲಿ ಪುಣ್ಯದ ಕೆಲಸಗಳು ನಡೆಯುತ್ತಿದ್ದು, ಇದರಿಂದ ಭಕ್ತರು, ಪ್ರಾಣಿ, ಪಕ್ಷಿಗಳಿಗೂ ಒಳ್ಳೆಯದಾಗಲಿ ಎಂದರಲ್ಲದೆ ಮೂಲ ವಿಗ್ರಹದ ಕೆತ್ತನೆಯ ಪವಿತ್ರವಾದ ಕೆಲಸವನ್ನು ನನಗೆ ನೀಡಿರುವುದಕ್ಕೆ ಧನ್ಯವಾದ ಅರ್ಪಿಸುತ್ತೇನೆ. ಸುಮಾರು 13x13 ಅಡಿಯ ಗರ್ಭಗುಡಿಯಲ್ಲಿ 1 ಅಡಿ ಪೀಠದ ಮೇಲೆ 4.5 ಅಡಿ ಎತ್ತರದಲ್ಲಿ ವಿಗ್ರಹ ನಿರ್ಮಾಣವಾಗಲಿದೆ. ವಿಗ್ರಹ ಸೂಕ್ಷ್ಮ ಕೆತ್ತನೆಗಳನ್ನು ಒಳಗೊಂಡಿರುತ್ತದೆ. ಕೆಂಡಗಣ್ಣೇಶ್ವರು ತಮ್ಮ ವಿಗ್ರಹವನ್ನು ತಾವೇ ನಿರ್ಮಿಸಿಕೊಳ್ಳಲಿ ಎಂದರು.

ಇದೇ ವೇಳೆ ಟ್ರಸ್ಟ್ ವತಿಯಿಂದ ಅರುಣ್ ಯೋಗಿರಾಜ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಹೊನ್ನಲಗೆರೆ ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಮುಖಂಡರಾದ ವಿನಯ್‌ಕುಮಾರ್, ಮಾಜಿ ನಗರಸಭಾ ಸದಸ್ಯೆ ಮೀನಾ, ಭವನದ ಗುತ್ತಿಗೆದಾರ ಯು.ಎನ್.ಪದ್ಮನಾಭರಾವ್ ಟ್ರಸ್ಟ್‌ನ ಉಪಾಧ್ಯಕ್ಷ ಎಸ್.ಗುರುಸ್ವಾಮಿ, ಉದ್ಯಮಿ ಜಗದೀಶ್, ಪದಾಧಿಕಾರಿಗಳಾದ ಆರ್.ವಿ.ರೇವಣ್ಣ, ವಿನಯ್‌ಕುಮಾರ್, ರೇಣುಕಾ, ಪ್ರಸಾದ್, ಅನುಸೂಯ, ವೃಷಭೇಂದ್ರಸ್ವಾಮಿ, ಪ್ರಸಾದ್, ಪಾಪಣ್ಣ, ನಾಗರಾಜು, ಆರ್.ವಿ.ವೃಷಭೇಂದ್ರಸ್ವಾಮಿ ಮತ್ತು ಕುಟುಂಬ ವರ್ಗ ಸೇರಿದಂತೆ ಟ್ರಸ್ಟ್ ಪದಾಧಿಕಾರಿಗಳು, ಪ್ರಮುಖರು ಹಾಗೂ ನೂರಾರು ಭಕ್ತರು ಭಾಗವಹಿಸಿದ್ದರು.



ಕೆಂಡಗಣ್ಣಸ್ವಾಮಿ ಗದ್ದುಗೆಗೆ ಭೇಟಿ ನೀಡಿದ ಅರುಣ್ ಯೋಗಿರಾಜ್ ಅವರನ್ನು ಸನ್ಮಾನಿಸಲಾಯಿತು.

ಎಸ್‌ಸಿಪಿ, ಟಿಎಸ್‌ಪಿ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ವಿಳಂಬ

20 ವಿದ್ಯುತ್ ಗುತ್ತಿಗೆದಾರರ ಕಪ್ಪುಪಟ್ಟಿಗೆ ಸೇರಿಸಲು ಸಣ್ಣ ನೀರಾವರಿ ಸಚಿವ ಬೋಸರಾಜು ಸೂಚನೆ

ಮೈಸೂರು, ಜು.5(ಎಂಟಿವೈ)– ಎಸ್‌ಸಿಪಿ ಹಾಗೂ ಟಿಎಸ್‌ಪಿ ಯೋಜನೆಯಡಿಯಲ್ಲಿ ಕೊರೆಸಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸದೇ ಯೋಜನೆಗೆ ಹಿನ್ನಡೆಯಾಗುವಂತೆ ಮಾಡಿರುವ 20 ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸುವಂತೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಭೋಸರಾಜು ಸೂಚನೆ ನೀಡಿದ್ದಾರೆ.



ಮೈಸೂರಿನ ಜಲದರ್ಶಿನಿ ಸಭಾಂಗಣದಲ್ಲಿ ಶುಕ್ರವಾರ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಭೋಸರಾಜು ಸಣ್ಣ ನೀರಾವರಿ ಇಲಾಖೆಯ ಮೈಸೂರು ವೃತ್ತದ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿದರು

ಮೈಸೂರಿನ ಜಲದರ್ಶಿನಿ ಸಭಾಂಗಣದಲ್ಲಿ ಶುಕ್ರವಾರ ಸಣ್ಣ ನೀರಾವರಿ ಇಲಾಖೆಯ ಮೈಸೂರು ವೃತ್ತದ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಇಲಾಖೆ ವತಿಯಿಂದ ಕೈಗೊಂಡಿರುವ ಯೋಜನೆಗಳ ಬಗ್ಗೆ ಮಾಹಿತಿ ಪಡೆದ ಬಳಿಕ ಮಾತನಾಡಿದ ಅವರು, ನಬಾರ್ಡ್, ಎಸ್‌ಡಿಆರ್‌ಎಫ್ ಯೋಜನೆ ಮಾತ್ರವಲ್ಲದೆ, ಬಜೆಟ್‌ನಲ್ಲಿ ಘೋಷಿಸಿರುವ ವಿವಿಧ ಯೋಜನೆಗಳ ಅನುಷ್ಠಾನ ಹಾಗೂ ಅವುಗಳ ಪ್ರಸ್ತುತ ಸ್ಥಿತಿಗತಿಯ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ಲೋಕಸಭಾ ಚುನಾವಣೆ ನೀತಿ ಸಂಹಿತೆಯಿಂದಾಗಿ ಹಲವು ಯೋಜನೆಗಳ ಟೆಂಡರ್ ಪ್ರಕ್ರಿಯೆ ಕುಂಠಿತವಾಗಿದೆ ಎಂದು ಹೇಳುವುದು ಸಮಂಜಸವಲ್ಲ. ನೀತಿ ಸಂಹಿತೆ ಮುಗಿದ ಬಳಿಕವೂ ಯಾವುದೇ ಕ್ರಮ ಕೈಗೊಳ್ಳದೆ ನಿರ್ಲಕ್ಷಿಸಿರುವುದು ಖಂಡನೀಯ ಎಂದು ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

ವಿಶೇಷ ಘಟಕ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಆದರೆ, ಹಲವೆಡೆ ಬೋರ್‌ವೆಲ್‌ಗಳಿಗೆ ಗುತ್ತಿಗೆದಾರರು ವಿದ್ಯುತ್ ಸಂಪರ್ಕ ನೀಡದೆ ಅವು ಕಾರ್ಯಾರಂಭ ಮಾಡಿಲ್ಲ. ಕೆಲವೆಡೆ ಮೂರು ವರ್ಷಗಳಿಂದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸದೆ ನಿರ್ಲಕ್ಷಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕಾಮಗಾರಿ ಪೂರ್ಣಗೊಳಿಸದ ಗುತ್ತಿಗೆದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. ಅಲ್ಲದೆ, ನಿರ್ಲಕ್ಷಿಸಿರುವ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸುವಂತೆ ಆದೇಶಿಸಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಚಾಲನೆ ನೀಡಿದ್ದ 7 ಕೆರೆ ತುಂಬಿಸುವ ಯೋಜನೆಗೆ 2022ರ ಮಾರ್ಚ್‌ನಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಒಪ್ಪಂದ ಮಾಡಿಕೊಡಲಾಗಿತ್ತು. ಇದುವರೆಗೂ ಕಾಮಗಾರಿಯನ್ನು ಪ್ರಾರಂಭಿಸಿಲ್ಲ. ಕಾಮಗಾರಿ ಪ್ರಾರಂಭಿಸುವಂತೆ ಹಲವು ಬಾರಿ ಗುತ್ತಿಗೆದಾರರಿಗೆ ನೋಟೀಸ್ ನೀಡಿದ್ದರೂ ಪ್ರಯೋಜನವಾಗಿಲ್ಲ. ಈ ಹಿನ್ನಲೆಯಲ್ಲಿ ಹೈದರಾಬಾದ್‌ನ ಅಯ್ಯಪ್ಪ ಕನ್‌ಸ್ಟ್ರಕ್ಷನ್‌ಗೆ ನೀಡಿದ್ದ ಗುತ್ತಿಗೆಯನ್ನು ರದ್ದುಗೊಳಿಸಿ ಶಿಸ್ತು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಯಾವುದೇ ಕಾಮಗಾರಿಗಳನ್ನು ಆರಂಭಿಸುವ ಮುನ್ನ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಇದನ್ನು ಪೂರ್ಣಗೊಳಿಸದೇ ಬೇರೆ ಪ್ರಕ್ರಿಯೆ ಪ್ರಾರಂಭಿಸಿದರೆ ತೊಂದರೆ ಎದುರಾಗುತ್ತವೆ. ಈ ಹಿನ್ನಲೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ಆದ್ಯತೆ ನೀಡುವಂತೆ ಸೂಚನೆ ನೀಡಿದರು.

ಕೆರೆಗಳನ್ನು ಸುಸ್ಥಿತಿಯಲ್ಲಿ ನಿರ್ವಹಣೆ ಮಾಡುವ ನಿಟ್ಟಿನಲ್ಲಿ ಗಮನ ಹರಿಸಬೇಕು. ಮಳೆ ನೀರು ಹೆಚ್ಚಾಗಿ ಸಂಗ್ರಹವಾಗುವಂತೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು. ಅಲ್ಲದೇ, ಮುಗಿದಿರುವ ಕಾಮಗಾರಿಗಳ ವರದಿಯನ್ನು ಸಕಾಲಕ್ಕೆ ಸಲ್ಲಿಸಬೇಕು. ಕಾಮಗಾರಿಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಚುರುಕಿನ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಸಭೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ದಕ್ಷಿಣ ವಲಯದ ಮುಖ್ಯ ಅಭಿಯಂತರ ರಾಘವನ್, ಅಧೀಕ್ಷಕ ವಿನಾಯಕ್ ಸೇರಿದಂತೆ ಹಲವು ಅಧಿಕಾರಿಗಳು ಪಾಲ್ಗೊಂಡಿದ್ದರು.

ಐಪಿಎಸ್ ನಂತರ 21 ಐಎಎಸ್ ಅಧಿಕಾರಿಗಳ ವರ್ಗಾವರ್ಗಿ

ಬೆಂಗಳೂರು, ಜು. 5(ಕೆಎಂಶಿ)– ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ವರ್ಗಾವಣೆ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ತಕ್ಷಣದಿಂದಲೇ ಜಾರಿಗೆ ಬರುವಂತೆ 21 ಐಎಎಸ್ ಅಧಿಕಾರಿಗಳ ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ.

ಮೈಸೂರು ಜಿಲ್ಲಾಧಿಕಾರಿಯಾಗಿ ಲಕ್ಷ್ಮೀಕಾಂತ ರೆಡ್ಡಿ, ಸೇರಿದಂತೆ ವಿವಿಧ ಸ್ಥಳಗಳಿಗೆ ವರ್ಗಾವಣೆಗೊಂಡಿರುವ ಅಧಿಕಾರಿಗಳು ಕೂಡಲೇ ನಿಯೋಜಿತ ಸ್ಥಳಗಳಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ರಾಜ್ಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸಹಾಯಕ ಕಾರ್ಯದರ್ಶಿ ಎಸ್.ಯುಕೇಶ್ ಕುಮಾರ್ ನಿರ್ದೇಶನ ನೀಡಿದ್ದಾರೆ.

ವರ್ಗಾವಣೆಗೊಂಡ ಇತರ ಐಎಎಸ್ ಅಧಿಕಾರಿಗಳು – ಡಾ.ಕೆ.ವಿ.ರಾಜೇಂದ್ರ ಪ್ರವಾಸೋದ್ಯಮ ಇಲಾಖೆ ನಿರ್ದೇಶಕ, ಡಾ.ರಾಮ್‌ಪ್ರಸಾದ್ ಮನೋಹರ್ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ, ನಿತೇಶ್ ಪಾಟೀಲ್ ಎಂಎಸ್‌ಎಂಇ ನಿರ್ದೇಶಕ, ಡಾ.ಅರುಂಧತಿ ಚಂದ್ರಶೇಖರ್ ಪಂಚಾಯತ್ ರಾಜ್ ಆಯುಕ್ತೆ, ಎಲ್.ಚಂದ್ರಶೇಖರ ನಾಯಕ ವಾಣಿಜ್ಯ ತೆರಿಗೆ ಹೆಚ್ಚುವರಿ ಆಯುಕ್ತ. ವಿಜಯ ಮಹಾಂತೇಶ್ ಬಿ.ದಾನಮ್ಮನವರ್ ಹಾವೇರಿ ಜಿಲ್ಲಾಧಿಕಾರಿ, ಗೋವಿಂದ ರೆಡ್ಡಿ ಗದಗ ಜಿಲ್ಲಾಧಿಕಾರಿ, ರಘುನಂದನ್ ಮೂರ್ತಿ ಖಜಾನೆ ಆಯುಕ್ತ (ಬೆಂಗಳೂರು), ಡಾ.ಗಂಗಾಧರ ಸ್ವಾಮಿ ದಾವಣಗೆರೆ ಜಿಲ್ಲಾಧಿಕಾರಿ, ಕೆನಿತೀಶ್ ರಾಯಚೂರು ಜಿಲ್ಲಾಧಿಕಾರಿ, ಮೊಹಮ್ಮದ್ ರೋಶನ್ ಬೆಳಗಾವಿ ಜಿಲ್ಲಾಧಿಕಾರಿ, ಶಿಲ್ಪಾ ಶರ್ಮಾ ಬೀದರ್ ಜಿಲ್ಲಾಧಿಕಾರಿ.

ದಿಲೇಶ್ ಸಸಿ ಇ–ಆಡಳಿತ ಕೇಂದ್ರ ಮುಖ್ಯಕಾರ್ಯನಿರ್ವಾಹಕ ನಿರ್ದೇಶಕ (ಬೆಂಗಳೂರು), ಲೋಖಂಡೆ ಸ್ನೇಹಲ್ ಸುಧಾಕರ್ ಕರ್ನಾಟಕ ವಿದ್ಯುತ್ ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ, ಶ್ರೀರೂಪಾ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆ ಇಲಾಖೆ ಆಯುಕ್ತೆ, ಜಿಟ್ಟೆ ಮಾಧವ ವಿಠಲ ರಾವ್ ಬಾಗಲಕೋಟೆ ಪುನರ್ವಸತಿ ಕೇಂದ್ರದ ಪ್ರಧಾನ ವ್ಯವಸ್ಥಾಪಕ, ಎನ್. ಹೇಮಂತ್ ಶಿವಮೊಗ್ಗ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ನಿರ್ದೇಶಕ.

ನೊಂಗ್ಜಲ್ ಮೊಹಮದ್ ಅಲಿ ಅಕ್ರಂ ಶಾ ಹೊಸಪೇಟೆ ವಿಜಯನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ, ಕೆ.ಜ್ಯೋತಿ ಜವಳಿ ಅಭಿವೃದ್ಧಿ ಆಯುಕ್ತ ಕೈಮಗ್ಗ ನಿರ್ದೇಶಕಿ, ಸಿ.ಎನ್.ಶ್ರೀಧರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸೋಶಿಯಲ್ ಆಡಿಟ್ ನಿರ್ದೇಶಕ.

ಮುಡಾ, ವಾಲ್ಮೀಕಿ ನಿಗಮ ಹಗರಣ ಹೋರಾಟ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಿರಿ!

●ರಾಜ್ಯ ನಾಯಕರಿಗೆ ಬಿಜೆಪಿ ವರಿಷ್ಠರ ಸೂಚನೆ ●ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಹಂತಕ್ಕೂ ತೆಗೆದುಕೊಂಡು ಹೋಗಲು ಸಲಹೆ ●ವರಿಷ್ಠರ ಸೂಚನೆಯಂತೆ ರಾಜ್ಯಕ್ಕೆ ಆಗಮಿಸಿರುವ ರಾಧಾಮೋಹನ್ ದಾಸ್ ಅಗರ್ವಾಲ್

ಬೆಂಗಳೂರು, ಜು. 5(ಕೆಎಂಶಿ)– ಮುಡಾ ಹಾಗೂ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಗಳನ್ನು ತಾರಕಕ್ಕೆ ಕೊಂಡೊಯ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರದಿಂದ ಕೆಳಗಿಳಿಯುವವರೆಗೂ ಹೋರಾಟ ನಡೆಸಿ ಎಂದು ರಾಜ್ಯ ಬಿಜೆಪಿಗೆ ದೆಹಲಿ ವರಿಷ್ಠರು ಕಟ್ಟಾದೇಶ ಮಾಡಿದ್ದಾರೆ.

ಎರಡೂ ಹಗರಣಗಳಲ್ಲಿ ಮುಖ್ಯಮಂತ್ರಿ ಅವರ ಪಾತ್ರ ಸ್ಪಷ್ಟವಾಗಿ ಕಾಣುತ್ತಿದೆ. ಪ್ರಕರಣದಲ್ಲಿರುವ ಅಂಶಗಳನ್ನು ಜನರ ಮುಂದಿಟ್ಟು ಬೀದಿಗಿಳಿಯಿರಿ ಎಂಬ ಸಂದೇಶ ಬಂದಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಿಡಿ ನಿವೇಶನ ಹಂಚಿಕೆಯಲ್ಲಿ ಸಾವಿರಾರು ಕೋಟಿ ರೂ. ವಂಚನೆ ಸದ್ದು ಕೇಳಿ ಬರುತ್ತಿದ್ದಂತೆ ಪ್ರಕರಣವನ್ನು ರಾಜಕೀಯವಾಗಿ ಬಳಸಿಕೊಳ್ಳಲು ವರಿಷ್ಠರು ರಾಧಾಮೋಹನ್ ದಾಸ್ ಅಗರ್ವಾಲ್ ಅವರನ್ನು ರಾಜ್ಯಕ್ಕೆ ಕಳುಹಿಸಿಕೊಟ್ಟಿದ್ದಾರೆ.

ರಾಧಾಮೋಹನ್ ದಾಸ್ ಅವರನ್ನು ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ರಾಜ್ಯ ಉಸ್ತುವಾರಿಯನ್ನಾಗಿ ನೇಮಕ ಮಾಡಲಾಗಿತ್ತು. ಈಗ ಅವರನ್ನೇ, ಈ ಹಗರಣಗಳ ಆಧಾರದ ಮೇಲೆ ಕಾಂಗ್ರೆಸ್ ಸರ್ಕಾರದ ಬಣ್ಣ ಬಯಲು ಮಾಡಿ ಮುಖ್ಯಮಂತ್ರಿ ಅವರನ್ನು ಇಕ್ಕಟ್ಟಿಗೆ ಸಿಲುಕಿಸಲು ರಾಜ್ಯಕ್ಕೆ ಕಳುಹಿಸಿಕೊಡಲಾಗಿದೆ.

ರಾಧಾಮೋಹನ್ ದಾಸ್ ಅಗರ್ವಾಲ್ ನಗರಕ್ಕೆ ಬರುತ್ತಿದ್ದಂತೆ ಪಕ್ಷದ ಕಾರ್ಯಕಾರಿ ಸಮಿತಿ ಸಭೆ ನಡೆಸಿ, ಈ ಎರಡೂ ವಿಷಯಗಳನ್ನೇ ಪ್ರಮುಖವಾಗಿ ಮುಂದಿಟ್ಟುಕೊಂಡು ಮುಂದಿನ ಹೋರಾಟದ ಚಿತ್ರಣ ನೀಡಿದ್ದಾರೆ.

ಅಷ್ಟೇ ಅಲ್ಲ, ಈ ವಿಷಯದಲ್ಲಿ ಯಾವುದೇ ಹೊಂದಾಣಿಕೆ ರಾಜಕೀಯ ಮಾಡಕೂಡದು, ಪಕ್ಷ ಸಂಘಟನೆ ಹಾಗೂ ಈ ಸರ್ಕಾರದ ಭ್ರಷ್ಟಾಚಾರ ಬಯಲಿಗೆಳೆಯಲು ಇದು ನಿಮಗೊಂದು ಅಸ್ತ್ರವಾಗಿದೆ.

ಇದೇ ಕಾಂಗ್ರೆಸ್ಸಿಗರು ವಿಧಾನಸಭಾ ಚುನಾವಣೆಗೂ ಮುನ್ನ ಬಿಜೆಪಿ ಸರ್ಕಾರದ ವಿರುದ್ಧ ಇಲ್ಲ–ಸಲ್ಲದ ಅಪಪ್ರಚಾರ ಮಾಡಿ ಅಧಿಕಾರಕ್ಕೆ ಬಂದರು. ನಂತರ ಅವರು ಮಾಡಿದ ಆರೋಪವನ್ನು ತಮ್ಮ ಆಡಳಿತದಲ್ಲಿ ಸಾಬೀತು ಮಾಡಲಾಗಲಿಲ್ಲ. ಈಗ ನಿಗಮಗಳ ಹಣ ಮತ್ತು ಜನರಿಗೆ ಹಂಚಬೇಕಾದ ನಿವೇಶನಗಳನ್ನು ಲೂಟಿ ಹೊಡೆಯುತ್ತಿದ್ದಾರೆ.

ಪರಿಶಿಷ್ಟರಿಗೆ ಸೇರಿದ ನಿಗಮದಲ್ಲಿ ಕೋಟ್ಯಾಂತರ ರೂ.ಗಳನ್ನು ಸಚಿವರು ಹಾಗೂ ಆ ಪಕ್ಷದ ಮುಖಂಡರು ಲೂಟಿ ಮಾಡಿರುವುದು ಹಣಕಾಸು ಇಲಾಖೆ ಹೊಣೆ ಹೊತ್ತ ಮುಖ್ಯಮಂತ್ರಿ ಅವರಿಗೆ ತಿಳಿಯದೆ. ಇದರಲ್ಲೂ ಮುಖ್ಯಮಂತ್ರಿ ಅವರ ಪಾತ್ರ ನೇರವಾಗಿ ಕಾಣುತ್ತದೆ. ಮುಡಾ ಪ್ರಕರಣವನ್ನು ಬಯಲಿಗೆಳೆದವರೂ ನಮ್ಮ ಜನಪ್ರತಿನಿಧಿಗಳೇ. ಈ ಎರಡೂ ಹಗರಣಗಳನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಸರ್ಕಾರದ ವಿರುದ್ಧ ಉಗ್ರ ಹೋರಾಟ ನಡೆಸಿ ಎಂದು ಅಗರ್ವಾಲ್ ಸಲಹೆ ನೀಡಿದ್ದಾರೆ.

ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡುವ ಅಗತ್ಯವಿಲ್ಲ

ಮೈಸೂರು, ಜು.5(ಜಿಎ)–ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅನಗತ್ಯವಾಗಿ ಗುರಿಯಾಗಿಸಿದ್ದು, ಅವರು ರಾಜೀನಾಮೆ ನೀಡುವ ಯಾವುದೇ ಅಗತ್ಯವಿಲ್ಲ ಎಂದು ಕಾಂಗ್ರೆಸ್ ನಗರ ಘಟಕದ ವಕ್ತಾರ ಎಸ್.ರಾಜೇಶ್ ತಿಳಿಸಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಕುಟುಂಬದವರು ಮುಡಾ ನಿವೇಶನ ಹಂಚಿಕೆ ಪ್ರಕ್ರಿಯೆಯಂತೆಯೇ ಕಾನೂನು ಬದ್ಧವಾಗಿ ನಿವೇಶನಗಳನ್ನು ಪಡೆದಿದ್ದಾರೆ. ಈ ಹಂಚಿಕೆ ಸೂತ್ರವು ಬಿಜೆಪಿ ಸರ್ಕಾರದ ಅವಧಿಯಲ್ಲಿಯೇ ಪ್ರಾರಂಭವಾಗಿದ್ದು. ದ್ವೇಷ ರಾಜಕಾರಣಕ್ಕಾಗಿ ಇಂದು ಆರೋಪ ಮಾಡಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಘಟಕದ ವಕ್ತಾರ ಶ್ರೀನಿವಾಸ ಗೌಡ, ಪ್ರಮುಖರಾದ ಎಸ್.ಎ. ರಹೀಂ, ರವಿ ಉಪಸ್ಥಿತರಿದ್ದರು.

ಇಂದು ಎಸ್.ಜಾನಕಿ ಗಾನೋತ್ಸವ

ಮೈಸೂರು, ಜು.5(ಜಿಎ)–ಮೈಸೂರಿನ ಎಸ್.ಜಾನಕಿ ಮೆಲೋಡಿಸ್ ಸಂಸ್ಥೆಯಿಂದ ಜುಲೈ 6ರಂದು ಸಂಜೆ 4ಗಂಟೆಗೆ ನಗರದ ಜೆ.ಎಲ್.ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಎಸ್.ಜಾನಕಿ ಗಾನೋತ್ಸವ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಗಾಯಕಿ ಲಕ್ಷ್ಮಿ ದಿನೇಶ್ ಈ ವಿಷಯ ತಿಳಿಸಿ, ಜಾನಕಿ ಅವರ ಜನ್ಮದಿನದ ಪ್ರಯುಕ್ತ ಕಾರ್ಯಕ್ರಮ ಆಯೋಜಿಸಿದ್ದು, ಅವರ ಹಾಡಿರುವ 30ಕ್ಕೂ ಹೆಚ್ಚು ಗೀತೆಗಳನ್ನು ಹಾಡಲಾಗುವುದು. ವಕೀಲರಾದ ಎಲ್.ಚಂದ್ರಶೇಖರ್, ಪ್ರಮಥ ಮಂಜುನಾಥ್, ಪ್ರಾಧ್ಯಾಪಕರಾದ ಹನುಮಂತರಾಜು, ಕೆಆರ್.ದಿನೇಶ್, ಕೃಷ್ಣಮೂರ್ತಿ ಚಮರಂ, ಪ್ರಾಂಶುಪಾಲರಾದ ಡಿ.ಬಿ.ಸತ್ಯ, ಸಿ.ಎಸ್.ಕುಮಾರ್, ಉದ್ಯಮಿ ಅಶ್ವಥ್, ಮುರಳೀಧರ್ ಹಾಗೂ ಸಂಘಮಿತ್ರೆ ಗಾಯನದಲ್ಲಿ ಜತೆಯಾಗುವರು. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಇದು ಸಂಸ್ಥೆಯ ಮೊದಲ ಕಾರ್ಯಕ್ರಮವಾಗಿದ್ದು, ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಹಮ್ಮಿಕೊಳ್ಳುವ ಉದ್ದೇಶವಿದೆ. ಗಾಯನ ತರಗತಿಗಳನ್ನೂ ನಡೆಸಲಾಗುವುದು ಎಂದರು.

ಚಾಮರಾಜಪೇಟೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಸಿಎಂ ಸಿದ್ದರಾಮಯ್ಯ ದಿಢೀರ್ ಭೇಟಿ

●ಊಟದ ವ್ಯವಸ್ಥೆ, ಬಾತ್ ರೂಂ ಕಿಟ್ ವಿತರಣೆ ಬಗ್ಗೆ ಮಾಹಿತಿ ●ಮಕ್ಕಳಿಗೆ ಪ್ರಶ್ನೆ ಕೇಳಿ ಸರಿಯುತ್ತರ ನೀಡಿದರು



ಚಾಮರಾಜಪೇಟೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಸಿಎಂ ಸಿದ್ದರಾಮಯ್ಯ ಮಕ್ಕಳೊಂದಿಗೆ ಊಟ ಸೇವಿಸುತ್ತಿರುವುದು

ಬೆಂಗಳೂರು, ಜು. 5(ಕೆಎಂಶಿ)– ನಗರದ ಚಾಮರಾಜಪೇಟೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ದಿಢೀರ್ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿದರು. ಜೊತೆಗೆ ಅವರೊಂದಿಗೆ ಊಟ ಮಾಡಿದರು

ಪಠ್ಯ ಪುಸ್ತಕಗಳು ಹಾಗೂ ಬಾತ್‌ರೂಂ ಕಿಟ್‌ಗಳ ಸಮರ್ಪಕ ವಿತರಣೆ, ಊಟದ ವ್ಯವಸ್ಥೆ ಬಗ್ಗೆ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದರು.

ಬೆಳಗ್ಗೆ ದೋಸೆ, ಮಧ್ಯಾಹ್ನ ಊಟ, ಆಗಾಗ ಪಲಾವ್ ಕೊಡುತ್ತಾರೆ. ಆರೋಗ್ಯ ತಪಾಸಣೆಗೆ ನಿಯಮಿತವಾಗಿ ವೈದ್ಯರು ಬರುತ್ತಿದ್ದಾರೆ ಎಂದು ವಿದ್ಯಾರ್ಥಿಗಳು ಖುಷಿಯಿಂದ ಹೇಳಿದರು.

ಮುಖ್ಯಮಂತ್ರಿಗಳು ವಿದ್ಯಾರ್ಥಿಗಳನ್ನುದ್ದೇಶಿಸಿ, ಪಠ್ಯಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಕೇಳಿದರು.

ಸಂಧಿ ಎಂದರೇನು, ಸಂಧಿಗಳಲ್ಲಿ ಎಷ್ಟು ವಿಧ. ಕನ್ನಡ ಅಕ್ಷರ ಮಾಲೆಯಲ್ಲಿ ಎಷ್ಟು ಅಕ್ಷರಗಳಿವೆ. ಅವುಗಳಲ್ಲಿ ಯೋಗವಾಹಗಳು ಎಷ್ಟು, ಸ್ವರ ಎಂದರೇನು, ವ್ಯಂಜನಗಳು ಎಂದರೇನು, ಎಷ್ಟಿವೆ, ವರ್ಗೀಯ, ಅವರ್ಗೀಯ ವ್ಯಂಜನಗಳು ಎಷ್ಟಿವೆ, ಅಲ್ಪಪ್ರಾಣ, ಮಹಾಪ್ರಾಣ ಎಂದರೇನು, ಅಲ್ಪಪ್ರಾಣಕ್ಕೆ ಉದಾಹರಣೆ ನೀಡಿ ಎಂಬ ಪ್ರಶ್ನೆಗಳನ್ನು ಕೇಳಿದ ಮುಖ್ಯಮಂತ್ರಿಗಳು, ಮಕ್ಕಳಿಂದ ಬಂದ ಉತ್ತರಗಳನ್ನು ತಿದ್ದಿ ಹೇಳಿದರು.

ಮೊರಾರ್ಜಿ ದೇಸಾಯಿ ಶಾಲೆಗಳನ್ನು ರಾಜ್ಯದಲ್ಲಿ ಯಾರು, ಯಾವಾಗ ಆರಂಭಿಸಿದರು ಎಂಬ ಪ್ರಶ್ನೆಗೆ, ವಿದ್ಯಾರ್ಥಿಗಳು, 'ನೀವೇ' ಎಂದು ಉತ್ತರಿಸಿದರು. ಆದರೆ, ಆರಂಭಿಸಿದ ಇಸವಿ ಗೊತ್ತಾಗದಿದ್ದಾಗ, 94–95ರಲ್ಲಿ ಎಂದು ಮುಖ್ಯಮಂತ್ರಿ ತಿದ್ದಿದರು.

ಬಸವಣ್ಣನವರು ಸಾಮಾಜಿಕ ಕ್ರಾಂತಿ ಮಾಡಿದ್ದು ಏಕೆ ಎಂಬ ಮುಖ್ಯಮಂತ್ರಿಗಳ ಪ್ರಶ್ನೆಗೆ, ಮನುಷ್ಯರ ನಡುವಿನ ತಾರತಮ್ಯ, ಜಾತಿ ವ್ಯವಸ್ಥೆ ವಿರೋಧಿಸಿ ಸಾಮಾಜಿಕ ಕ್ರಾಂತಿ ನಡೆಸಿದರು ಎಂದು ವಿದ್ಯಾರ್ಥಿಗಳು ಉತ್ತರಿಸಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಶಿಕ್ಷಕರು, ಕಳೆದ ಬಾರಿ ಎಸ್‌ಎಸ್ ಎಲ್‌ಸಿಯಲ್ಲಿ ಎಲ್ಲರೂ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದು, ಒಬ್ಬ ವಿದ್ಯಾರ್ಥಿನಿ ಮಾತ್ರ ಸೆಕೆಂಡ್ ಕ್ಲಾಸ್ ಬಂದಿದ್ದಾಗಿ ವಿವರಣೆ ನೀಡಿದರು.

ಮುಡಾ ಹಗರಣ ಸಿಬಿಐ ತನಿಖೆಗೆ ಆಗ್ರಹಿಸಿ ಕರ್ನಾಟಕ ಸೇನಾ ಪಡೆ ಪ್ರತಿಭಟನೆ

ಹಗರಣ ಹಿಂದೆ ಸಿಎಂ, ಸಚಿವ ಭೈರತಿ ಸುರೇಶ್ ಕೈವಾಡ ಆರೋಪ

ಮೈಸೂರು, ಜು.5(ಜಿಎ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಸಾವಿರಾರು ಕೋಟಿ ಹಗರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಒತ್ತಾಯಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಶುಕ್ರವಾರ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಸಾವಿರಾರು ಕೋಟಿ ಹಗರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಒತ್ತಾಯಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಶುಕ್ರವಾರ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಬಡ ಜನರಿಗೆ, ಆರ್ಥಿಕವಾಗಿ ಹಿಂದುಳಿದವರಿಗೆ, ನಿವೇಶನ ರಹಿತರಿಗೆ ಕೈಗೆಟುವ ದರದಲ್ಲಿ ನಿವೇಶನಗಳು ಸಿಗಲೆಂದು ನಾಲ್ವಡಿ ಕೃಷ್ಣರಾಜ ಒಡೆಯರು ಮುಡಾ ಸ್ಥಾಪಿಸಿದರು. ಆದರೆ ಈಗ ಮುಡಾ ರಿಯಲ್ ಎಸ್ಟೇಟ್ ಮಾಫಿಯಾಗಳ ಹಿಡಿತದಲ್ಲಿದೆ. ಮುಡಾದ ಶೇ.90ರಷ್ಟು ನಿವೇಶನಗಳನ್ನು ರಿಯಲ್ ಎಸ್ಟೇಟ್ ಉದ್ಯಮಿಗಳೇ ಕಬಳಿಸಿದ್ದಾರೆ. ಸಾರ್ವಜನಿಕರು ಹಲವಾರು ವರ್ಷಗಳಿಂದ ನಿವೇಶನಕ್ಕೆ ಅರ್ಜಿ ಸಲ್ಲಿಸಿದರೂ ನಿವೇಶನ ಸಿಕ್ಕಿಲ್ಲ. ಬದಲಿಗೆ ನಿವೇಶನಗಳು ಬಲಾಢ್ಯರ ಪಾಲಾಗುತ್ತಿವೆ ಎಂದು ಕಿಡಿ ಕಾರಿದರು.

ಮೈಸೂರು ಜಿಲ್ಲಾಧಿಕಾರಿ 10–15 ಬಾರಿ ಹಗರಣದ ಕುರಿತು ಸರ್ಕಾರಕ್ಕೆ ಪತ್ರ ಬರೆದರೂ ಸರಿಯಾಗಿ ಸ್ಪಂದಿಸಲಿಲ್ಲ. ಇದರ ಪರಿಣಾಮ ರಾಜ್ಯದ ಇತಿಹಾಸದಲ್ಲೇ ಬಹುದೊಡ್ಡ ಹಗರಣ ನಡೆದಿದೆ. ಸಿಎಂ ಆಪ್ತ ಬೈರತಿ ಸುರೇಶ್ ಎಲ್ಲಾ ತಿಳಿದಿದ್ದರೂ ಕ್ರಮ ಕೈಗೊಳ್ಳದಿರುವುದನ್ನು ನೋಡಿದರೆ ಇದರ ಹಿಂದೆ ಸಿಎಂ, ಬೈರತಿ ಸುರೇಶ್ ಕೈವಾಡವಿದೆ ಎಂದು ದೂರಿದರು.

ಸಾವಿರಾರು ಕೋಟಿ ಹಗರಣ ನಡೆದಿದ್ದರೂ ಆಯುಕ್ತ ದಿನೇಶ್ ಮೇಲೆ ಕ್ರಮ ಕೈಗೊಳ್ಳದೆ, ಬಂಧಿಸಿ ವಿಚಾರಣೆಗೊಳಪಡಿಸದೆ, ಏನೂ ಆಗಿಲ್ಲವೆಂಬಂತೆ ಸುಲಭವಾಗಿ ಬೇರೆಡೆಗೆ ವರ್ಗಾವಣೆ ಮಾಡಿರುವುದು ಅಕ್ಷಮ್ಯ ಅಪರಾಧ. ಇದು ಸರ್ಕಾರದ ವೈಫಲ್ಯ ಹಾಗೂ ಸರ್ಕಾರವೇ ನೇರವಾಗಿ ಭಾಗಿಯಾಗಿರುವುದನ್ನು ಎತ್ತಿ ತೋರಿಸುತ್ತದೆ. ಪ್ರಕರಣವನ್ನು ಮುಚ್ಚಿ ಹಾಕಲು ಸರ್ಕಾರವೇ ಯತ್ನಿಸುತ್ತಿದೆ. ಹೀಗಾಗಿ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು. ಇಲ್ಲವಾದಲ್ಲಿ ನಮ್ಮ ಹೋರಾಟ ತೀವ್ರವಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಪ್ರಭುಶಂಕರ್, ಕೃಷ್ಣಪ್ಪ, ಸುರೇಶ್ ಗೋಲ್ಡ್, ಪ್ರದೀಶ್.ಪಿ, ಶಿವಲಿಂಗಯ್ಯ, ಶಾಂತರಾಜೇ ಅರಸ್, ನೇಹ, ಮಂಜುಳಾ, ವರಕೂಡು ಕೃಷ್ಣೇಗೌಡ, ಸಿಂಧುವಳ್ಳಿ ಶಿವಕುಮಾರ್, ನಾಗಣ್ಣ, ಕುಮಾರ್ ಗೌಡ, ಭಾಗ್ಯಮ್ಮ, ನಾರಾಯಣಗೌಡ, ಅನಿಲ್, ಹರೀಶ್, ರಾಮಕೃಷ್ಣೇಗೌಡ, ಗಿರೀಶ್, ಸೋಮಶೇಖರ್, ಪರಿಸರ ಚಂದ್ರು, ರಾಧಾಕೃಷ್ಣ, ಮಹದೇವಸ್ವಾಮಿ ನಂದಕುಮಾರ್, ಗೀತಗೌಡ, ಅಕ್ಬರ್, ರಾಮ ನಾಯಕ, ಪ್ರದೀಪ್, ಸ್ವಾಮಿ ಗೌಡ, ರವಿ, ದರ್ಶನ್ ಗೌಡ, ದಿನೇಶ್, ರಘು ಅರಸ್, ಗಣೇಶ್, ಕುಮಾರ್, ಸ್ವಾಮಿ ಗೌಡ, ಶಂಕರ್ ಗುರು, ಶಿವನಾಯಕ್, ವಿಷ್ಣು ಮತ್ತಿತರರು ಪಾಲ್ಗೊಂಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಲ್ಕಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಿಗರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕಿಲ್ (ಹಿಂ)	4 ಪ್ರದರ್ಶನಗಳು
ಸಂಗಂ	
ಕಾದಾಡಿ (ಕ)	4 ಪ್ರದರ್ಶನಗಳು
ಲಿಡೋ	
ಜಿಗರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗರುಡನ್ (ತ)	4 ಪ್ರದರ್ಶನಗಳು
ಪ್ರಭಾ	
ಕಾಗದ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.11ಕ್ಕೆ, ಸಂ.4.30ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.35ಕ್ಕೆ, ಡೆಸ್ಪಿಕಬಲ್ ಮಿ 4 (3ಡಿ) (ಇಂ): ಮ.1.45ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4.05ಕ್ಕೆ, ಕಿಲ್ (ಹಿಂ): ರಾ.7.35ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (3ಡಿ) (ತೆ): ಬೆ.11.45ಕ್ಕೆ, ಕಲ್ಕಿ 2898 ಎಡಿ (ಕ): ಮ.3.15ಕ್ಕೆ, ಕಲ್ಕಿ 2898 ಎಡಿ (3ಡಿ) (ಹಿಂ): ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಕಿಲ್ (ಹಿಂ): ಬೆ.11, ಕಲ್ಕಿ 2898 ಎಡಿ (3ಡಿ) (ತೆ): ಮ.1.15ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ಹಿಂ): ಬೆ.11.15ಕ್ಕೆ, ಸಂ.6.45ಕ್ಕೆ, ಕಲ್ಕಿ 2898 ಎಡಿ (3ಡಿ) (ತೆ): ಮ.3ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.10.15ಕ್ಕೆ, ಮ.2ಕ್ಕೆ, ಸಂ.5.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ತೆ): ಬೆ.10.45ಕ್ಕೆ, ಸಂ.6.15ಕ್ಕೆ, ಕಲ್ಕಿ 2898 ಎಡಿ (ಹಿಂ): ಮ.2.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.10.40ಕ್ಕೆ, ಮ.3.20ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಕಿಲ್ (ಹಿಂ): ಮ.12.55ಕ್ಕೆ, ಸಂ.5.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಲವ್ ಲಿ (ಕ): ಮ.1ಕ್ಕೆ, ಕಾಗದ (ಕ): ಸಂ.4ಕ್ಕೆ, ಬಿಗ್ ಬೆನ್ (ಮ): ಸಂ.6.55ಕ್ಕೆ, ಕುಂಡಲ ಪುರಾಣಂ (ಮ): ರಾ.9.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ(3ಡಿ) (ತೆ): ಮ.2.30ಕ್ಕೆ, ರಾ.9.30ಕ್ಕೆ, ಕಲ್ಕಿ 2898 ಎಡಿ (ಕ): ಸಂ.6ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 4	ಕಲ್ಕಿ 2898 ಎಡಿ (3ಡಿ) (ತೆ): ಸಂ.4ಕ್ಕೆ, ರಾ.7.25ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅರ್ಜಿ ಆಹ್ವಾನ

ಮೈಸೂರು, ಜು.5–ಮೈಸೂರು ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ 2024–25ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪ್ರವರ್ಗ–1, ಎಸ್‌ಸಿ ಮತ್ತು ಎಸ್‌ಟಿ. ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ. 1 ಲಕ್ಷ ಹಾಗೂ ಪ್ರವರ್ಗ–2ಎ, 2ಬಿ,3ಎ,3ಬಿ, ಇತರೆ ಹಿಂದುಳಿದ ವರ್ಗ ಹಾಗೂ ಇತರೆ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ. 44,500 ಮಿತಿ ಇರುವ ವಿದ್ಯಾರ್ಥಿಗಳು ಇಲಾಖೆಯ ವೆಬ್‌ಸೈಟ್ https://shp.karnataka.gov.in/bcwd ಮೂಲಕ ಆನ್‌ಲೈನ್‌ನಲ್ಲಿ ಜುಲೈ 10 ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದು.

ತಾಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in/ ನ್ನು ನೋಡಬಹುದಾಗಿದ್ದು, ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ/ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 8050770004 ಮತ್ತು 8050770005 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಶುಕ್ರವಾರ	100.30 ಅಡಿ
ಒಳಹರಿವು	9686 ಕ್ಯೂಸೆಕ್
ಹೊರಹರಿವು	546 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಶುಕ್ರವಾರ	2281.12 ಅಡಿ
ಒಳಹರಿವು	8321 ಕ್ಯೂಸೆಕ್
ಹೊರಹರಿವು	2917 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಶುಕ್ರವಾರ	2845.87 ಅಡಿ
ಒಳಹರಿವು	5048 ಕ್ಯೂಸೆಕ್
ಹೊರಹರಿವು	50 ಕ್ಯೂಸೆಕ್

ಹಸಿರು ನಮ್ಮ ಉಸಿರು

LivingSpace.inc
Furniture Engineered

Trusted Name for 20 Years in Home Interior, Planning, Designing & Execution.

Email : livinwood@gmail.com
Call : 98866 73392 / 91 86183 28280

REQUIRED TEACHERS

FOR SSLC
KANNADA, ENGLISH, HINDI
SCIENCE AND MATHEMATICS
FOR PUC
KANNADA & COMMERCE
Location:
Aacharya Institute of Education
Kuvempunagar Mysore
Call : 99013 13403

FOR SALE

Commercial Space
2400 to 5500 Sq.ft
@ AGRAHARA
Contact: 95914 08910

2.5 BHK
HOME INTERIORS @ ₹ 2.5 Lakh*

Home Space Mart
*T&C Apply
91089 23123

11ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ (6.7.2024) 11 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಚ್ಚಹಸಿರಾಗಿದೆ. ನಿಮ್ಮ ಮಾರ್ಗದರ್ಶನದಲ್ಲಿ ನಡೆಯುತ್ತಿರುವ, ಇಂತಿ ನಿಮ್ಮ ಮಕ್ಕಳು ನರಸಿಂಹ ಮತ್ತು ಕುಟುಂಬವರ್ಗ
ಮೊ: 9845196544

ಚೆನ್ನಮ್ಮ

SITE FOR SALE

30X40 EAST FACE, MUDA APPROVED SITE FOR SALE, NEAR SVET SCHOOL, VIJAYANAGAR 4TH STAGE, MYSORE
CONTACT DIRECT OWNER
94815 29788

2BHK FLAT AVAILABLE FOR LEASE

Near Vijayanagar, 1st stage, Mysore with one car parking,

Commercial shop available for Rent Hootagalli main road
9036665888

CAREER OPPORTUNITIES

SL NO	POST NAME	QUALIFICATION	NO OF POSTS
1	HR (HUMANRESOURCES)	POST GRADUATION	2
2	OFFICE ADMIN	POST GRADUATION	3
3	COMPUTER OPERATOR	B.COM,BBA,BSC	8
4	RECEPTIONIST	ANY DEGREE	2
5	CIVIL ENGINEER(MALE)	BE ENGINEERING OR (civil)	4
6	CIVIL ENGINEER(FEMALE)	DIPLOMA ENGINEERING (civil)	4
7	DRIVER	SSLC (3 years experience)	2
8	FIELD PFFICER	PUC	4
9	OFFICE BOY OR GIRL	SSLC Pass /Fail	2

Note: First Preferences for experience candidates and fresher with good communication Skills

More Details contact
ADDRESS: SARASWATHIPURAM,MYSORE-570009
MOB NO: 6366202129 | TEL NO: 08213501178

ESS & ESS INFRASTRUCTURE PVT. LTD.

ESS & ESS INFRASTRUCTURE PVT. LTD. 100+ Projects
PRM/KA/RERA/1268/378/PR/091123/006385

Bookings Open
ಸಾಹಾ ಎಲೈಟ್
Elite 2 PHASE
MUDA APPROVED
Ultra Luxury Plots
ಬೋಗಾದಿ–ಗದ್ದಿಗೆ ರಸ್ತೆ, ಕೆ.ಹೆಮ್ಮನಹಳ್ಳಿ, ಮೈಸೂರು

INVEST IN FINEST MUDA APPROVED PLOTS IN ROYAL CITY MYSURU

PRM/KA/RERA/1268/378/PR/211007/004342
SAHA Regal
ಸಾಹಾ ರೀಗಲ್
RERA REGISTERED
Premium Residential Plots
ಹುಯಿಲಾಳು ರಸ್ತೆ, ಕೆ.ಹೆಮ್ಮನಹಳ್ಳಿ, ಮೈಸೂರು

ನೋಂದಣಿಗೆ ಸಿದ್ಧವಾಗಿರುವ ನಿವೇಶನಗಳು
99011 64444
www.essandess.in
80% ಬ್ಯಾಂಕ್ ಲೋನ್ ಲಭ್ಯ

ಶ್ರೀ ಸುಧಾಕರ್ ಎಸ್ ಶೆಟ್ಟಿ ಯವರಿಗೆ ಹುಟ್ಟುಹಬ್ಬದ ಶುಭಾಶಯಗಳು



ಎಫ್.ಕೆ.ಸಿ.ಸಿ.ಐ, ಮೈಸೂರು ಚೇಂಬರ್ ಆಫ್ ಕಾಮರ್ಸ್ & ಇಂಡಸ್ಟ್ರಿ, ಹೋಟೆಲು ಮಾಲೀಕರ ಸಂಘ, ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘ(ನಿ), ದಕ್ಷಿಣ ಕನ್ನಡ ಜಿಲ್ಲಾ ಸಂಘಗಳ ಅಧ್ಯಕ್ಷರಾಗಿ ಸೇವೆಸಲ್ಲಿಸಿದ ಮತ್ತು ಹಾಲಿ ಜಾತ್ಯಾತೀತ ಜನತಾದಳ ರಾಜ್ಯ ಉಪಾಧ್ಯಕ್ಷರಾಗಿ, ಜ್ಞಾನ ಸರೋವರ ಅಂತರರಾಷ್ಟ್ರೀಯ ವಸತಿ ಶಾಲೆ ಸಂಸ್ಥಾಪಕ ಅಧ್ಯಕ್ಷರಾಗಿರುವ ಖ್ಯಾತ ಉದ್ಯಮಿ, ಜನಾನುರಾಗಿ ಹಾಗೂ ಸರಳ ಸಜ್ಜನಿಕೆಯ ವ್ಯಕ್ತಿತ್ವದ

ಸುಧಾಕರ್ ಎಸ್ ಶೆಟ್ಟಿ ರವರಿಗೆ ಜನುಮದಿನದ ಶುಭಾಶಯಗಳು.

ತಾಯಿ ಚಾಮುಂಡೇಶ್ವರಿ ಇನ್ನೂ ಹೆಚ್ಚಿನ ಆಯಸ್ಸು, ಆರೋಗ್ಯ, ಯಶಸ್ಸು ನೀಡಲಿ ಎಂದು ಆಶಿಸುವ



ಶ್ರೀ ಕೆ.ಬಿ. ಲಿಂಗರಾಜು
ಅಧ್ಯಕ್ಷರು
ಚೇಂಬರ್ ಆಫ್ ಕಾಮರ್ಸ್, ಮೈಸೂರು



ಶ್ರೀ ಗ್ರೇಸಿಯನ್ ರೋಡ್ರಿಗಸ್
ಅಧ್ಯಕ್ಷರು, ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟ (ರಿ) ಮೈಸೂರು.



ಶ್ರೀ ನಾರಾಯಣ ವಿ ಹೆಗಡೆ
ಅಧ್ಯಕ್ಷರು, ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘ(ನಿ), ಮೈಸೂರು




ಶ್ರೀ ರಾಜಶೇಖರ್ ಎಸ್
ನಿರ್ದೇಶಕರು
ಸ್ಟೀನಿ ಪ್ರಾಪರ್ಟೀಸ್ ಪ್ರೈ. ಲಿ. ಮೈಸೂರು




ಶ್ರೀ ಆರ್. ಮಂಜುನಾಥ್
ಅಧ್ಯಕ್ಷರು, ಮೈಸೂರು ಜಿಲ್ಲಾ ಪ.ಜಾ/ಪ.ಪ ಕೈಗಾರಿಕೋದ್ಯಮಿಗಳ ಸಂಘ (ರಿ) ಮೈಸೂರು

ಸಿಬಿಎಸ್‌ಇ, ಐಸಿಎಸ್‌ಇ ಮತ್ತು ರಾಜ್ಯ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘ
ವಿ. ವೆಂಕಟೇಶ್, ಅಧ್ಯಕ್ಷರು
ಎಂ.ಎಲ್. ರವೀಂದ್ರಸ್ವಾಮಿ, ಉಪಾಧ್ಯಕ್ಷರು
ಮಹಮದ್ ಅಮೀನ್, ಉಪಾಧ್ಯಕ್ಷರು
ಎಸ್. ರಾಧಾಕೃಷ್ಣನ್, ಕಾರ್ಯದರ್ಶಿ
ಮಂಜುನಾಥ್ ಶ್ರೀವತ್ಸ, ಜಂಟಿ ಕಾರ್ಯದರ್ಶಿ
ಕೆ.ಎಸ್. ಸ್ವರೂಪಿಣಿ, ಖಜಾಂಚಿ



ಶ್ರೀ ಎಸ್. ಮಹದೇವು
ಅಧ್ಯಕ್ಷರು, ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘ, ಮೈಸೂರು

Reliance
Growth is Life



CENTRO SHOPPING FESTIVAL
6-7 JULY

SHOP FOR ₹5000*

GET BACK ₹5000*
worth of merchandise FREE

ICICI Bank — Up to 10% Instant Discount on Credit & Debit Cards and EMIs. *T&C

BAJAJ FINANCE — GET ₹1500 VOUCHER on shopping of ₹7000 on easy EMI *T&C Apply

*T&C Apply: This offer is valid on participating brands and applicable on purchases at MRP. Free merchandise is valued at MRP. Visit the store to know more

CENTRO
MYSORE CENTRO | BANGALORE NILGIRI RD, NEAR WOODLANDS THEATRE